


ಶಿಲ್ಪಿ ವೆಂಕಟಾಚಾರ್

ಎಲ್. ಶಿವಲಿಂಗಪ್ಪ



ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಪೈಲ್ವಾನ್ ವೆಂಕಟಾಚಾರ್

ಎಲ್. ಶಿವಲಿಂಗಪ್ಪ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡ ಭವನ
ಜೆ. ಸಿ. ರಸ್ತೆ, ಬೆಂಗಳೂರು – ೫೬೦ ೦೦೨.

'Shilpi Venkatachar'
by L. Shivalingappa
Published by Karnataka Shilpakala Academy
Kannada Bhavana, J. C. Road
Bangalore - 560 002.


ಪ್ರಕಾಶಕರು :
ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ, ಕನ್ನಡ ಭವನ, ಜೆ. ಸಿ. ರಸ್ತೆ,
ಬೆಂಗಳೂರು – ೨

ಪ್ರತಿಗಳು : ೫೦೦

ವರ್ಷ : ೨೦೦೬

ಬೆಲೆ : ರೂ. ೩೦/–

ಮುದ್ರಕರು :
ಎಂ. ಎಸ್. ಗ್ರಾಫಿಕ್ಸ್
೧, ವಿನಾಯಕ ಬಡಾವಣೆ
ಮಾಗಡಿ ಮುಖ್ಯ ರಸ್ತೆ , ಬೆಂಗಳೂರು – ೫೬೦ ೦೭೯.
ದೂರವಾಣಿ : ೨೩೪೮೪೨೩೯




ಅಧ್ಯಕ್ಷರ ನುಡಿ

ನಮ್ಮ ನಾಡಿನ ಶಿಲ್ಪಕಲಾವಿದರು ಪ್ರಾಚೀನ ಕಾಲದಿಂದಲೂ ಎಲ್ಲವನ್ನೂ ಏಕಾಗ್ರತೆಯಿಂದ ಧ್ಯಾನಿಸಿ, ಗ್ರಹಿಸಿ, ನಂತರ ಸ್ಮರಣೆಯಿಂದ ಶಿಲ್ಪ-ಚಿತ್ರ ರಚಿಸುತ್ತಿದ್ದರು. ಇಂತಹ ನಮ್ಮ ಸಾಂಪ್ರದಾಯಿಕ ಶಿಲ್ಪಕಲೆಯ ಬಗ್ಗೆ ತಿಳಿಯಲು ಮೂರು ಬಗೆಯ ಅಭ್ಯಾಸ ಅಗತ್ಯ. ಶಿಲ್ಪಕಲೆಯನ್ನು ಕುರಿತ ಶಾಸ್ತ್ರ ಗ್ರಂಥಗಳ ಅಧ್ಯಯನ ಒಂದಾದರೆ, ಹಲವು ದೇವಾಲಯಗಳನ್ನು ಸಂದರ್ಶನ ಮಾಡಿ ತಿಳಿಯುವುದು ಮತ್ತೊಂದು. ಸಾಹಿತ್ಯ ಇತ್ಯಾದಿಗಳನ್ನು ಓದಿ ತಮ್ಮ ವಾಸ್ತವ ಅನುಭವ ಹೆಚ್ಚಿಸಿಕೊಳ್ಳುವ ವಿಧಾನ ಮೂರನೆಯದು. ಈ ದೃಷ್ಟಿಯಿಂದ ನಡೆಸಿದ ಅಭ್ಯಾಸದಿಂದ ಸಂಪೂರ್ಣವಾಗಿ ಸಾಂಪ್ರದಾಯಿಕ ಶಿಲ್ಪಕಲೆಯ ಬಗ್ಗೆ ತಿಳಿಯಬಹುದು ಹಾಗೂ ಕಲಿಯಲು ಅನುಕೂಲ -ವಾಗುವುದೆಂಬ ಶಿಲ್ಪಿ ದಿ॥ ಶ್ರೀ ವಾದಿರಾಜರ ಅಭಿಪ್ರಾಯ ಎಲ್ಲರನ್ನು ಎಚ್ಚರಿಸುತ್ತದೆ.

ಈ ನಿಟ್ಟಿನಲ್ಲಿ ಶಿಲ್ಪಕಲಾ ಅಕಾಡೆಮಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಪುಸ್ತಕ ಪ್ರಕಟಣೆಯು ಒಂದಾಗಿದೆ. ಶಿಲ್ಪದ ಕಲಿಕೆಗೆ ಶಿಲ್ಪಿಗೆ ಅನುಕೂಲವಾಗುವ ಈ ಯೋಜನೆಯಲ್ಲಿ ನಮ್ಮ ನಾಡಿನ ಹೆಸರಾಂತ ಶಿಲ್ಪಿಗಳಾದ ಪೈಲ್ವಾನ್ ವೆಂಕಟಾಚಾರ್ ಇವರ ಶಿಲ್ಪ-ಮಾಧ್ಯಮ-ಜೀವನಶೈಲಿಗಳನ್ನು ಕುರಿತು ಶ್ರೀಯುತ ಎಲ್. ಶಿವಲಿಂಗಪ್ಪನವರು ಬಹಳ ಸೊಗಸಾಗಿ ಬರೆದುಕೊಟ್ಟಿದ್ದಾರೆ. ಪುಸ್ತಕವನ್ನು ಹೊರತರಲು ಸಹಕರಿಸಿದ ಶ್ರೀ ಬಿಲ್ವಪತ್ರಿಯವರಿಗೂ ಮತ್ತು ಅಂದವಾಗಿ ಮುದ್ರಿಸಿಕೊಟ್ಟಿರುವ ಎಂ.ಎಸ್. ಗ್ರಾಫಿಕ್ಸ್ ಬಳಗದವರಿಗೆ ಶಿಲ್ಪಕಲಾ ಅಕಾಡೆಮಿಯ ಪರವಾಗಿ ವಂದನೆಗಳು. ಅಕಾಡೆಮಿಯ ಈ ಪ್ರಕಟಣೆಯನ್ನು ಎಲ್ಲ ಕಲಾರಸಿಕರು ಸ್ವಾಗತಿಸುವರೆಂದು ಆಶಿಸುತ್ತೇನೆ.

ವೆಂಕಟಾಚಲಪತಿ
ಅಧ್ಯಕ್ಷರು
ಕರ್ನಾಟಕ ಶಿಲ್ಪಕಲಾ ಅಕಾಡೆಮಿ



ಪೈಲ್ವಾನ್ ವೆಂಕಟಾಚಾರ್

ವೆಂಕಟಾಚಾರ್ ಅವರನ್ನು ಪ್ರಥಮವಾಗಿ ಭೇಟಿಯಾದದ್ದು ಬೆಂಗಳೂರಿನ ವಿಜಯನಗರದಲ್ಲಿನ ಅವರ ಮಕ್ಕಳ ಮನೆಯಲ್ಲಿ. ಹಣೆಯಲ್ಲಿ ತ್ರಿಪುಂಡ್ರ ಭಸ್ಮಧಾರಣೆ, ಭ್ರೂಮಧ್ಯದಲ್ಲಿ ನಾಲ್ಕಾಣೆ ಅಗಲದ ಕುಂಕುಮ, ಕಟ್ಟುಮಸ್ತಾದ ದೇಹ, ಎರಕ ಹುಯ್ಯುವ ಮುನ್ನ ಪೂಜೆಗೆ ಸಿದ್ಧಪಡಿಸಿಕೊಂಡಿದ್ದ ವಾತಾವರಣ, ಈ ಲೇಖಕ ಅವರನ್ನು ಸಂದರ್ಶಿಸಲು ಛಾಯಚಿತ್ರ ಪೆಟ್ಟಿಗೆ ಸಹಿತ (Camera) ಬಂದೊಡನೆಯೇ ಅದೇನೋ ಅವರಿಗೆ ಒಂದು ಬಗೆಯ ಆನಂದವಾಯಿತು. ತಾವೇ ಮಾತಿಗೆ ಆರಂಭಿಸಿ, ಇಂದು ನಮ್ಮಲ್ಲಿ ಎಷ್ಟೇ ಕೆಲಸ ಮಾಡಿದರೂ ಸರ್ಕಾರಿ ಮಟ್ಟದಲ್ಲಿ ಗುರುತಿಸುವ ಹಾಗೆ, ಪತ್ರಿಕಾ ಮಾಧ್ಯಮಗಳಲ್ಲಿ ಬರೆಯುವವರೇ ಇಲ್ಲವಾಗಿದೆ. ಹಾಗಾಗಿ ನಮ್ಮ ಕಲೆ ಗ್ರಾಹಕನ ಬೇಡಿಕೆಗೆ ತಕ್ಕಂತೆ, ಕೊಟ್ಟ ಹಣಕ್ಕೆ ಅನುಗುಣವಾಗಿ ಮಾಡಿಕೊಟ್ಟರೆ ಮುಗಿಯಿತು ನಮ್ಮ ಅವರ ಸಂಬಂಧ. ಹೀಗೆ ಜೀವನಪೂರ್ತಿ ನಡೆಯುವುದರಿಂದ ಉದರ ನಿಮಿತ್ತ ಮಾಡುವ ಕಲೆಯಾಗಿದೆ. ನಿಮ್ಮಂಥವರು ಕೆಲಸ ಮಾಡುವ ಸ್ಥಳಕ್ಕೆ ಬಂದು ನಮ್ಮ ಕಷ್ಟ ನಷ್ಟಗಳನ್ನು ಅರಿತು ಬರೆಯಬೇಕು, ಎಂದು ಹೇಳುತ್ತಾ ಕೊಲ್ಲೂರು ಮೂಕಾಂಬಿಕೆ ವಿಗ್ರಹ ಮಾಡಲು ಮಾಡಿಕೊಂಡಿರುವ ಸಿದ್ಧತೆಗಳನ್ನು ಒಂದೊಂದಾಗಿ ವಿವರಿಸುತ್ತಾ ಹೊರಟರು.

ಸೂರ್ಯ ಪೂರ್ವದಿಂದ ಪಶ್ಚಿಮದೆಡೆಗೆ ಮುನ್ನಡಿಯಿಡುವ ಪ್ರಥಮದಲ್ಲಿ ತನ್ನ ಉಜ್ವಲ ಬೆಳಕನ್ನು ಜಗತ್ತಿಗೆಲ್ಲಾ ಚೆಲ್ಲುತ್ತಾ ಬೆವರಿಳಿಯುವಂತೆ ಮಾಡುತ್ತಿದ್ದ ಬಿಸಿಲು, ಬೆಂಕಿ ಎರಡನ್ನೂ ಸಮನಾಗಿ ಕಂಡಿದ್ದ ವೆಂಕಟಾಚಾರ್ ಅವರಿಗೆ, ಬೇಗೆ, ಬೆವರು ಎಂಬುದು ವಿಶೇಷವಾಗಿ ಕಾಣುತ್ತಲೇ ಇರಲಿಲ್ಲ. ಒಂದೆಡೆ ಒಲೆಯಲ್ಲಿ ದಗದಗ ಬೆಂಕಿಯುಗುಳುವ ಸೌದೆ, ಅದರೊಳಗೆ ಹುದುಗಿಸಿಟ್ಟಿದ್ದ ಕಲ್ಲಿದ್ದಲು ಬೆಂಕಿಯುಂಡೆಯಂತಾಗಿ ಕಾವನ್ನು ಹೆಚ್ಚಿಸುವಲ್ಲಿ ಪೈಪೋಟಿ ನಡೆಸುತ್ತಿದ್ದವು. ತಿದಿಯ ಮೂಲಕ ಗಾಳಿ ಅದಕ್ಕೆ ಚಾಲನೆ ನೀಡುತ್ತಿತ್ತು. ಒಲೆಯೊಳಗೆ ಇಟ್ಟ ಮೂಸೆಯಲ್ಲಿ ಕೊತ ಕೊತ ಕುದಿಯುವ ಲೋಹ ರಸ, ಉದ್ದ ಸೌಟನ್ನು ಹಿಡಿದು ಗರಗರ ಆಡಿಸಿ ಲೋಹ ಕರಗುವಂತೆ ಮುನ್ನೆಚ್ಚರಿಕೆ ವಹಿಸುತ್ತಿದ್ದ ಪುತ್ರ ಸಿಬ್ಬಂದಿ, ಪಕ್ಕದಲ್ಲೆ ಅಗೆದಿದ್ದ ದೊಡ್ಡ ಗುಂಡಿಯಲ್ಲಿ ಅವಿತು ಕುಳಿತುಕೊಂಡಿದ್ದ ಮಣ್ಣಿನುಂಡೆ, ಪಿಳಿ ಪಿಳಿ ಕಣ್ ಬಿಟ್ಟು ನೋಡುವಂತೆ ಕಾಣುತ್ತಿದ್ದ ಎರಡು ಕಿರುಗುಂಡಿಗಳು ಭೂಮಟ್ಟದ ಮೇಲೆ ಕಾಣುತ್ತಿದ್ದವು. ಇದೇನಿದು ಮಣ್ಣಿನ ಉಂಡೆಗೇಕೆ ಇಷ್ಟೊಂದು ಹಣ ಖರ್ಚು ಮಾಡಿ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಸೀಸಗಳನ್ನು ಹಾಕಿ ಕುದಿಸಿ ಸುರಿಯುತ್ತಾರಲ್ಲಾ ಎಂಬ ಅಚ್ಚರಿ. ಇದೇ ಮೊದಲ ಬಾರಿ ನೋಡಿದವರಿಗಂತೂ ಒಂದು ಬಗೆಯ ಕೌತುಕ, ಭಯ. ಏನಾದರೂ ಕೈತಪ್ಪಿ ಮೈಮೇಲೆ ಸುರಿದುಕೊಂಡುಬಿಟ್ಟರೆ ಏನು ಗತಿ ಎಂಬ ಆತಂಕ. ಇವೆಲ್ಲದರ ನಡುವೆ ಸಾವಿರಾರು ಜನರಿಂದ ಕೈ ಮುಗಿಸಿಕೊಳ್ಳುವುದಕ್ಕೆ ಸಿದ್ಧವಾಗುತ್ತಿದ್ದ ಆ ಮೂರ್ತಿ, ಇತರರ ನೋವನ್ನು ನಿವಾರಣೆ ಮಾಡುವ ಮುನ್ನ, ತನ್ನ

ನೋವನ್ನು ತಾನೇ ತಿಂದು, ಬೆಂಕಿಯುಂಡೆಯಲ್ಲಿ ಬೆಂದು ಅಕ್ಕಸಾಲಿಗರ ಕೈಯಲ್ಲಿ ಹದವಾಗಿ ಬಡಿಸಿಕೊಂಡು, ವೈದ್ಯರು ಹರಿದೋದ ಅಂಗಾಂಗಗಳನ್ನು ಕೂಡಿಸಿ ಹೊಲಿಯುವಂತೆ, ಪ್ರತ್ಯೇಕವಾಗಿ ಎರಕಗೊಂಡ ಕರ, ಶಿರ, ಉರ, ಕಿರೀಟ, ಪೀಠ ಮತ್ತಿತ್ತರ ಪರಿಕರಗಳನ್ನು ಬೆಸೆಸಿಕೊಂಡು ಹಬ್ಬ ಹರಿದಿನಗಳಲ್ಲಿ ಮದುವೆ ಮುಂತಾದ ಸಡಗರ ಸಂಭ್ರಮಗಳಿಗೆ ತಮ್ಮ ನಿಜ ಬಣ್ಣಕ್ಕೊಪ್ಪುವ ವರ್ಣಗಳನ್ನು ಲೇಪಿಸಿ ಸುಂದರಿಯನ್ನಾಗಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಬ್ಯೂಟಿಪಾರ್ಲರ್‌ನಂತೆ, ಅವಶ್ಯಕತೆಗಿಂತ ಹೆಚ್ಚಿರುವ ಉಬ್ಬಿದ ಭಾಗಗಳನ್ನು ಅರದಲ್ಲಿ ಉಜ್ಜಿ, ಉಳಿಯಲ್ಲಿ ಕೆತ್ತಿ, ಸುತ್ತಿಗೆಯಲ್ಲಿ ಬಡಿದು, ಬಿರುಕು ಹಳ್ಳಗಳಿದ್ದಲ್ಲಿ ಅದನ್ನು ಬೆಸುಗೆಯಿಂದ ಬೆಸೆದು, ಮೇಲೊಂದಿಷ್ಟು ಮೆರುಗೆಣ್ಣೆ (Polish) ಹಾಕಿ ಆಕರ್ಷಣೀಯವಾಗಿ ಕಾಣುವಂತೆ ಸುಂದರಗೊಳಿಸಿಕೊಳ್ಳುತ್ತಿದ್ದ ಆ ಮೂರ್ತಿ ಅದೆಷ್ಟು ಯಾತನೆ ಅನುಭವಿಸಿರಬೇಕು ಎಂದೆನಿಸುತ್ತದಲ್ಲವೆ? ಈ ಎಲ್ಲಾ ಕಷ್ಟ ಸಹಿಷ್ಣುತೆಗಳ ಮೂಲಕ ರೂಪುಗೊಂಡ ಮೂರ್ತಿ ಎಲ್ಲರ ಆರಾಧ್ಯದೇವತೆಯಾಗುತ್ತದೆಂಬ ವಾಸ್ತವ ಸತ್ಯವನ್ನು ತಿಳಿಸಿದ ವೆಂಕಟಾಚಾರ್ ಅವರನ್ನು ಕುರಿತು, ದೇವರಿಗೆ ಮೂರ್ತರೂಪ ಕೊಡುವವರು ನೀವೇ ಆದ್ದರಿಂದ ದೇವರಿಗಿಂತ ಶಿಲ್ಪಿಗಳೇ ಮುಖ್ಯವಲ್ಲವೆ? ಎಂಬ ಪ್ರಶ್ನೆ ಹಾಕಿದಾಗ, ಎಲ್ಲಾದರೂ ಉಂಟೇ! ನಾವು ನಿಮಿತ್ತ ಮಾತ್ರ, ಮಾಡುವ ಚೈತನ್ಯ, ಬುದ್ಧಿ ಕೊಟ್ಟವನು ಆ ದೇವನಲ್ಲವೆ? ಅವನಿಗೆ ನಾವು ನೀವೆಲ್ಲರೂ ತಲೆಬಾಗಲೇ ಬೇಕಲ್ಲವೆ? ಎಂಬ ಮರುಪ್ರಶ್ನೆಯೊಂದಿಗೆ ತಮ್ಮ ಹಿರಿತನವನ್ನು ಮೆರೆದ ವೆಂಕಟಾಚಾರ್ ಅವರು ತಮ್ಮ ಮೂಲಸ್ಥಳವಾದ ನಾಗಮಂಗಲಕ್ಕೆ ಬನ್ನಿ ಎಂದು ಆಹ್ವಾನವಿತ್ತರು.

ಎರಕ ಹುಯ್ಯುವ ತಂತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕ್ರಿಸ್ತಪೂರ್ವ ನಾಲ್ಕು ಸಾವಿರ ವರ್ಷಗಳ ಹಿಂದೆಯೇ ಆರಂಭವಾಯಿತೆಂದು ಪುರಾತತ್ವ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಮೊಟ್ಟಮೊದಲು ಈ ತಂತ್ರಜ್ಞಾನ ರಷ್ಯಾ ದೇಶದ ಕಪ್ಪು ಸಾಗರದ ಪ್ರದೇಶದಲ್ಲಿ ಆರಂಭವಾಯಿತೆನ್ನುತ್ತಾರೆ. ಪೂರ್ವ ಜಗತ್ತಿನಲ್ಲಿ ಕ್ರಿ.ಪೂ. ಎರಡು ಸಾವಿರ ವರ್ಷಗಳ ಹಿಂದೆ ಈ ತಂತ್ರಜ್ಞಾನ ಕಂಡುಬಂತೆಂಬ ವಿಚಾರವು ತಿಳಿದುಬರುತ್ತದೆ. ಇಲ್ಲಿ ಪ್ರಥಮವಾಗಿ ಹಿತ್ತಾಳೆ ಎರಕವನ್ನು ಹುಯ್ಯಲಾಯಿತು. ತದನಂತರದಲ್ಲಿ ತಾಂತ್ರಿಕತೆಯ ಅಭಿವೃದ್ಧಿಯಾಯಿತು. ಚೈನಾದೇಶದಲ್ಲಿ ಕ್ರಿ.ಪೂ. ೬೦೦ ವರ್ಷಗಳ ಹಿಂದೆ ಎರಕದ ತಂತ್ರಜ್ಞಾನ ರೂಢಿಗೆ ಬಂದಿದೆ. ಇವರೇ ಮೊಟ್ಟ ಮೊದಲ ಬಾರಿಗೆ ಕಬ್ಬಿಣವನ್ನು ತಯಾರಿಸಿದವರು. ಎಲ್ಲಕ್ಕಿಂತ ಮುಖ್ಯವಾಗಿ ಮೇಣ ಬಳಸುವ ಪ್ರಕ್ರಿಯೆ ಆರಂಭವಾದದ್ದೆ ಇವರಿಂದ. ಇನ್ನು ನಮ್ಮ ಭಾರತದ ದೃಷ್ಟಿಯಿಂದ ಹೇಳುವುದಾದರೆ ಕ್ರಿ.ಪೂ. ೫೦೦ ವರ್ಷಗಳ ಹಿಂದೆ ಪ್ರಥಮವಾಗಿ ಉಕ್ಕನ್ನು ತಯಾರಿಸಿದ ಕೀರ್ತಿಗೆ ಭಾಜನವಾಯಿತು. ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯನ್ನು ಅವಲೋಕಿಸಿದಾಗ ಎರಕದ ಮೂಲಕ ಉಕ್ಕನ್ನು ತಯಾರಿಸಿದ ಅಂಶಗಳು ಕಂಡುಬರುತ್ತವೆ. ತದನಂತರದ ಆಂಗ್ಲರು ಅಭಿವೃದ್ಧಿಪಡಿಸುತ್ತಾ ಹೋದರು.

ಕ್ರಮೇಣ ಕ್ರಮೇಣ ಎರಕ ಹುಯ್ಯುವ ಕ್ರಿಯೆ ಜಗತ್ತಿನಾದ್ಯಂತ ಪಸರಿಸುತ್ತಾ ಬಂತು. ಗ್ರೀಕ್ ಮತ್ತು ರೋಮನ್ ದೇಶಗಳು ಪ್ರಥಮವಾಗಿ ಘಂಟೆ ಲೋಹವನ್ನು ಅಭಿವೃದ್ಧಿಪಡಿಸಿತು. ಪ್ರಪಂಚದಲ್ಲೇ ಮೊಟ್ಟಮೊದಲನೆಯದಾದ ಅಮೆರಿಕಾದಲ್ಲಿ ಸಾಗೋಸ್ ಐರನ್ ವರ್ಕ್ಸ್ ಎಂಬ ಹೆಸರಿನ ಎರಕ ಹುಯ್ಯುವ ಕಾರ್ಖಾನೆ ಆರಂಭವಾಯಿತೆಂದು ಖಗೋಳಜ್ಞರ ಅಭಿಪ್ರಾಯ. ಭಾರತದ ಮಟ್ಟಿಗೆ ಹೇಳುವುದಾದರೆ ಎರಕದ ಕಾರ್ಖಾನೆ (Foundry)ಗಳು ಸುಮಾರು ೨೦೦೦ದಷ್ಟಿದೆ. ಇತ್ತೀಚೆಗೆ ಅತಿ ಸಣ್ಣ ಮತ್ತು ದೊಡ್ಡ ಗಾತ್ರದ ಕಬ್ಬಿಣ ಮತ್ತು ಇತರ ಲೋಹಗಳನ್ನು ಉತ್ಪಾದಿಸುವ ಕಾರ್ಖಾನೆಗಳು ದೇಶದೆಲ್ಲೆಡೆ ತಲೆ ಎತ್ತಿವೆ.

ಎರಕದ ಕಲೆ ಅದೆಷ್ಟು ಜನಾದರಣೆ ಹೊಂದಿದೆ ಎಂದರೆ ನಾವು ನಿತ್ಯ ಉಪಯೋಗಿಸುವ ಶೇಕಡ ೭೫ರಷ್ಟು ಪದಾರ್ಥಗಳು ಎರಕದ ಮೂಲಕವೇ ಆದವು. ಕೆಲವೇ ಗ್ರಾಂಗಳ ಚಿನ್ನ ಬೆಳ್ಳಿ ಆಭರಣಗಳಿಂದ ಹಿಡಿದು ಟನ್‌ಗಟ್ಟಲೇ ಕಬ್ಬಿಣ ಕಾಯಿಸಿ ಅಚ್ಚು ತಯಾರಿಸುವ ಉತ್ಪಾದನಾ ಘಟಕಗಳಾಗಿವೆ. ಕಾರ್ಖಾನೆಗಳಲ್ಲಿ ತಯಾರಾಗುವ ಉತ್ಪನ್ನಗಳಿಗೆಲ್ಲಾ ಎರಕದ ಪಡಿಯಚ್ಚುಗಳು (Blocks) ಅತ್ಯಾವಶ್ಯಕವಾಗಿ ಬೇಕಾಗಿವೆ. ಈ ದಿಸೆಯಲ್ಲಿ ನಾಗಮಂಗಲವು ವಿಗ್ರಹ ತಯಾರಿಸುವ ಕಾರ್ಖಾನೆ ಇದ್ದಂತೆ.

ನಾಗಮಂಗಲ

ಮಂಡ್ಯ ಕೇಂದ್ರ ಬಸ್ ನಿಲ್ದಾಣದಿಂದ ಸುಮಾರು ಮೂವತ್ತೈದು ಕಿಲೋಮೀಟರ್ ದೂರದಲ್ಲಿದೆ. ಇದು ತಾಲ್ಲೂಕು ಕೇಂದ್ರ. ಮೈಸೂರಿನಿಂದ ಸುಮಾರು ಅರವತ್ತೈದು ಕಿಲೋಮೀಟರ್ ದೂರದಲ್ಲಿದ್ದು ಉತ್ತರಕ್ಕೆ ಪಾಂಡವಪುರ, ಬೆಳ್ಳೂರು-ಚಿತ್ರದುರ್ಗ ರಸ್ತೆಯಲ್ಲಿದೆ. ಇಲ್ಲಿಂದ ಚೆನ್ನರಾಯಪಟ್ಟಣ, ಕೃಷ್ಣರಾಜಪೇಟೆ, ಮಂಡ್ಯ, ಮದ್ದೂರುಗಳಿಗೆ ರಸ್ತೆಗಳಿವೆ. ಹಾಸನ ತುಮಕೂರು ಸಿರಾಗಳಿಗೂ ಸಂಪರ್ಕರಸ್ತೆ ಇದೆ. ಪುರಸಭೆ, ಸರ್ಕಾರಿ ಆಸ್ಪತ್ರೆ ಹೊಂದಿರುವ ಈ ನಾಗಮಂಗಲದ ಹಿನ್ನೆಲೆ ಇತಿಹಾಸಾಭ್ಯಾಸಿಗಳಿಗೆ ಅಪೂರ್ವ ಅನುಭವ ನೀಡುತ್ತದೆ. ಹದಿನೈದನೇ ಶತಮಾನದ ಮಧ್ಯಭಾಗದಲ್ಲಿ ವಿಜಯನಗರದ ಅರಸರ ಆಶ್ರಯದಲ್ಲಿದ್ದ ಸಾಮಂತ ಮನೆತನದವರು ನಾಗಮಂಗಲವನ್ನೇ ರಾಜಧಾನಿಯನ್ನಾಗಿ ಮಾಡಿಕೊಂಡು ಆ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದರೆಂದು ತಿಳಿದುಬರುತ್ತದೆ. ವಿಜಯನಗರ ಪತನಾ ನಂತರ ಅಲ್ಲಿನ ಕುಶಲಕರ್ಮಿಗಳು ಸಾಮಂತ ರಾಜನಿದ್ದ ನೆಲಮಂಗಲಕ್ಕೆ ಬಂದರೆಂದು, ಬದುಕಿನ ನಿರ್ವಹಣೆಗಾಗಿ, ಜೀವನಾವಶ್ಯಕವಾದ ವಿವಿಧ ಅಡಿಗೆ ಪಾತ್ರೆ ಸಾಮಾನುಗಳನ್ನು, ಹೊಲಗೆಲಸಕ್ಕೆ ಬೇಕಾದ ಸಲಕರಣೆಗಳನ್ನು, ಹಾಗೆಯೆ ದೇವಾಲಯಕ್ಕೆ ಬೇಕಾದ ಲೋಹದ ವಿಗ್ರಹಗಳನ್ನು ಮಾಡಿಕೊಂಡು ಜೀವನ ಸಾಗಿಸುತ್ತಾ ಬಂದವರೇ ನಾಗಮಂಗಲದ ಆಚಾರ್‌ಗಳೆಂದು ಮುಂದೆ ಪ್ರಸಿದ್ಧಿ ಹೊಂದಿದರೆಂದು ತಿಳಿದುಬರುತ್ತದೆ.

ನಾಗಮಂಗಲವೆಂಬ ಹೆಸರು ಬರಲು ಒಂದು ಮುಖ್ಯಕಾರಣವಿದೆ. ಪ್ರಥಮವಾಗಿ ಆಳ್ವಿಕೆ ಮಾಡಲು ಬಂದ ಲೋಹಿತ ವಂಶಜನಾದ ಪಾಳೆಯಗಾರನು ಕನಸಿನಲ್ಲಿ ಕಂಡ ದೇವರಿರುವ ಹುತ್ತವನ್ನು ಹುಡುಕುತ್ತಾ ಬಂದಾಗ ಈಗ ನಾಗಮಂಗಲವೆಂದು ಕರೆಯುವ ಈ ಸ್ಥಳಕ್ಕೆ ಬಂದ. ಅದು ಮೊದಲು ದಂಡಕಾರಣ್ಯದ ಭಾಗವಾಗಿತ್ತು. ಅಲ್ಲಿ ಒಂದು ಸರ್ಪ ಸುತ್ತುತ್ತಾ ಇದ್ದು, ನರಸಿಂಹದೇವರು ಆವಿರ್ಭಾವವಾಗಿದ್ದುದನ್ನು ಕಂಡು ಅಲ್ಲಿಯೇ ಒಂದು ದೇವಾಲಯ ನಿರ್ಮಿಸಿದ. ಆದ್ದರಿಂದ ಈ ಸ್ಥಳ ನಾಗಮಂಡಲ ಎಂದು ಕರೆಯುವಂತಾಗಿ, ತದನಂತರದಲ್ಲಿ ನಾಗಮಂಗಲ ಎಂಬ ಹೆಸರು ವಾಡಿಕೆಗೆ ಬಂದಿದೆ. ಇದನ್ನು ಮಹಾಭಾರತ ಕಾಲದ ಮಣಿಪುರವೆಂತಲೂ ಗುರುತಿಸುತ್ತಾರೆ. ಇಲ್ಲಿ ಗಂಗರ ಕಾಲದ ಶಾಸನವೊಂದು ದೊರೆತಿದ್ದು ಕ್ರಿ. ಶ. ೧೧೩೪ರಲ್ಲಿ ವಿಷ್ಣುವರ್ಧನನ ರಾಣಿ ಬೊಮ್ಮಲಾದೇವಿ ಇಲ್ಲಿನ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ಇತಿಹಾಸ ತಿಳಿಸುತ್ತದೆ. ೧೭ನೇ ಶತಮಾನದವರೆಗೂ ಲೋಹಿತ ವಂಶದ ಪಾಳೆಯಗಾರರೇ ಆಳುತ್ತಿದ್ದು ೧೬೩೦ರಲ್ಲಿ ಮೈಸೂರು ಚಾಮರಾಜ ಒಡೆಯರ ಅಧೀನವಾಯಿತು. ಇಲ್ಲಿ ಒಳಕೋಟೆ ಮತ್ತು ಹೊರಕೋಟೆಗಳಿದ್ದು ಮೈಸೂರು ಮತ್ತು ಮರಾಠರ ಯುದ್ಧಗಳಿಂದಾಗಿ ಅವಸಾನ ಹೊಂದಿದೆ.

ಇಲ್ಲಿ ಅನೇಕ ದೇವಾಲಯಗಳಿದ್ದು ದೊಡ್ಡ ದೇವಸ್ಥಾನವೆಂದು ಕರೆಯುವ ಸೌಮ್ಯ ಕೇಶವನ ಗುಡಿಯನ್ನು ಹೊಯ್ಸಳ ವಿಷ್ಣುವರ್ಧನನು ಕಟ್ಟಿಸಿದನೆಂದು ಇತಿಹಾಸ ತಜ್ಞರು ಗುರುತಿಸುತ್ತಾರೆ. ಸುಮಾರು ಐದು ಅಡಿ ಎತ್ತರದ ನಕ್ಷತ್ರಾಕಾರದ ಜಗಲಿಯ ಮೇಲಿರುವ ತ್ರಿಕೂಟಾಚಲ, ಮಧ್ಯದಲ್ಲಿ ಸೌಮ್ಯಕೇಶವ ಸ್ವಾಮಿಯ ಗರ್ಭಗುಡಿ ಇದೆ. ದೇವಾಲಯದ ಮುಂದೆ ಸುಮಾರು ೫೫ ಅಡಿ ಎತ್ತರವಿರುವ ಏಕಶಿಲೆಯ ಗರುಡಗಂಬವಿದೆ. ಜಗದೇವರಾಯನೆಂಬ ಪಾಳೆಯಗಾರನು ಗರುಡಗಂಭ ನಿಲ್ಲಿಸಲು ಮತ್ತು ಮಹಾದ್ವಾರದ ಗೋಪುರ ನಿರ್ಮಿಸಲು ಕಾರಣಕರ್ತನೆಂದು, ಇವನ ಅರಮನೆಯು ಅನತಿ ದೂರದಲ್ಲಿರುವ ನರಸಿಂಹ ದೇವಾಲಯ ಮತ್ತು ಕೇಶವ ದೇವಾಲಯಗಳ ಮಧ್ಯದಲ್ಲಿತ್ತೆಂದು ಚರಿತ್ರೆ ತಿಳಿಸುವುದಾದರೂ, ಇಂದು ಗುರುತು ಸಿಗದಂತೆ ಎಲ್ಲವೂ ಹಾಳಾಗಿದೆ. ಬದಲಾಗಿ ಬೇರೆ ಬೇರೆ ಕಟ್ಟಡಗಳು ತಲೆ ಎತ್ತಿವೆ. ಇದಲ್ಲದೆ ಭುವನೇಶ್ವರ ದೇವಾಲಯ, ವೀರಭದ್ರ ಮತ್ತು ಭದ್ರಕಾಳಿಯ ದೇವಾಲಯ, ಗ್ರಾಮದೇವತೆ ಬಡಗೋಡಮ್ಮನ ದೇವಾಲಯಗಳಿವೆ. ವಿಶ್ವಕರ್ಮರ ಆರಾಧ್ಯ ದೇವತೆ ಕಾಳಮ್ಮನ ದೇವಸ್ಥಾನ ನಾಗಮಂಗಲದ ಒಳ ಕೋಟೆಯ ದಿಡ್ಡಿ ಬಾಗಿಲಿನಲ್ಲಿದೆ. ಊರಿನ ನಾಲ್ಕು ದಿಕ್ಕುಗಳಲ್ಲಿ ಕೆರೆಗಳು ಸಹಾ

ಇವೆ. ಈ ನಾಗಮಂಗಲದಲ್ಲಿ ಹಿಂದೆ ಅವರವರ ಕಾಯಕದ ಮೂಲಕ ಜನರನ್ನು ಗುರ್ತಿಸುತ್ತಿದ್ದ ಹಾಗೆ ಅವರವರಿಗೆ ಒಂದೊಂದು ಅಗ್ರಹಾರ ಅಥವಾ ಬೀದಿ ಎಂದು ಕರೆಯುತ್ತಿದ್ದರು. ಬ್ರಾಹ್ಮಣರ ಅಗ್ರಹಾರ, ಕುಂಬಾರರ ಬೀದಿ, ಆಚಾರ್‌ರ ಬೀದಿ, ಮೇದರ ಕೇರಿ ಹೀಗೆ. ಆದರೆ ಕಳೆದ ಎರಡು ದಶಕದಿಂದೀಚೆಗೆ ಅಗಾಧವಾಗಿ ಬೆಳವಣಿಗೆ ಆಗಿದ್ದು ಎಲ್ಲೆಲ್ಲಿ ಸ್ಥಳ ಸಿಗುತ್ತದೋ ಅಲ್ಲೆಲ್ಲಾ ಜನಸ್ತೋಮ ಬೆಳೆದಿದೆ.

ನಾಗಮಂಗಲದ ಪರಂಪರೆ

ನಾಗಮಂಗಲ ಒಟ್ಟಾರೆ ಪ್ರಸಿದ್ಧವಾಗಿರುವುದು ೧೯ನೇ ಶತಮಾನದಿಂದೀಚೆಗೆ. ಅಲ್ಲಿನ ವಿಶ್ವಕರ್ಮ ಜನಾಂಗ ಹಿತ್ತಾಳೆ ಕೆಲಸ ಮಾಡುವ ಮೂಲಕ ಆಚಾರ್‌ರ ಬೀದಿ ಎಂದೇ ಕರೆಯುತ್ತಿದ್ದ ಸ್ಥಳದಲ್ಲಿ ಹತ್ತಾರು ಶಿಲ್ಪಿಗಳ ಮನೆತನವಿತ್ತು. ಅವರಲ್ಲಿ ಮುಖ್ಯವಾಗಿ ವೆಂಕಟಾಚಾರ್, ಶ್ರೀಕಂಠಾಚಾರ್, ಕಸ್ತೂರಾಚಾರ್, ವೆಂಕಾಚಾರ್, ಚಿಕ್ಕಾಚಾರ್, ನೀಲಕಂಠಾಚಾರ್, ತದನಂತರದ ಪೀಳಿಗೆಗಳಾದ ಚಿನ್ನಾಚಾರ್, ಸೂರ್ಯನಾರಾಯಣಚಾರ್, ವಿಶ್ವರೂಪಾಚಾರ್, ಪಿ. ಶ್ರೀನಿವಾಸಾಚಾರ್, ಎನ್.ಜಿ. ನೀಲಕಂಠಾಚಾರ್ ಮುಂತಾದವರು ಮುಖ್ಯರೆನಿಸುತ್ತಾರೆ. ಹೆಸರನ್ನು ಹೇಳುವಾಗ ಬರುವ ತೊಡಕೆಂದರೆ ತಾತನ ಹೆಸರನ್ನೇ ಮೊಮ್ಮಕ್ಕಳಿಗೆ ಇಡುವುದರಿಂದ ಆ ಹೆಸರುಗಳೇ ಪುನಾರಾವರ್ತನೆಯಾಗುತ್ತಾ ಹೋಗುತ್ತದೆ. ಮೈಸೂರಿನ ರಾಜರುಗಳನ್ನೇ ಗಮನಿಸಿದಾಗ ಇಮ್ಮಡಿ, ಮುಮ್ಮಡಿ, ನಾಲ್ವಡಿ ಕೃಷ್ಣರಾಜ ಒಡೆಯರ್‌ರವರುಗಳು ಇದ್ದ ಹಾಗೆ ಕೃಷ್ಣರಾಜ ಒಡೆಯರ್ ಎಂಬುದು ಮೂಲ ಹೆಸರಾದರೂ, ಎರಡನೆಯ, ಮೂರನೆಯ, ನಾಲ್ಕನೆಯವರು ಎಂದು ಗುರುತಿಸಲಾದರೂ ಅವಕಾಶವಿದೆ, ಆದರೇ ಈ ಆಚಾರ್‌ಗಳಲ್ಲಿ ಎಲ್ಲರೂ ವೆಂಕಟಾಚಾರ್, ನೀಲಕಂಠಾಚಾರ್ ಎಂದು ಇಟ್ಟುಕೊಳ್ಳುವ ಮೂಲಕ ಸಕುಟುಂಬದವರು ಹೊರತುಪಡಿಸಿ ಇತರರು ಗುರುತಿಸುವುದು ಕಷ್ಟದ ಕೆಲಸವಾಗಿದೆ.

ಈ ಆಚಾರ್‌ಗಳ ಪರಂಪರೆಯಲ್ಲಿ ಕೆಲವರ ಸಾಧನೆಯನ್ನಾದರೂ ದಾಖಲಿಸದಿದ್ದರೆ ನಾಗಮಂಗಲದ ಶಿಲ್ಪ ಪ್ರತಿಭೆಯನ್ನು ಅವಮಾನಿಸಿದಂತೆಯೇ ಸರಿ. ವೆಂಕಟಾಚಾರ್ಯರು ಮಾಡಿದ ಕಂಚಿನ ಕೃತಿಯೊಂದು ೧೮೪೦ರಲ್ಲಿ ಲಂಡನ್‌ನಲ್ಲಿ ಜರುಗಿದ ವಿಶ್ವ ವಸ್ತು ಪ್ರದರ್ಶನದಲ್ಲಿ ಬಹುಮಾನ ಗಳಿಸಿತ್ತು. ೧೯೦೧ರಲ್ಲಿ ಶಂಕುಸ್ಥಾಪನೆಯಾದ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಶಾಲೆಯ ವಾಸ್ತು ಪೂಜೆಗೆ ಬೇಕಾದ ಕರಂಡಕವನ್ನು ಮಾಡಿಕೊಟ್ಟಿದ್ದು, ಅದು ಪ್ರಿನ್ಸ್ ಆಫ್ ವೇಲ್ಸ್ ಅವರಿಂದ ಸನ್ಮಾನ ಪಡೆಯುವಂತಾಯ್ತು. ಹಾಗೆಯೇ ಕುಲಕ್ಕೆ ಯಜಮಾನರಂತೆ ಇದ್ದ ಕಸ್ತೂರಾಚಾರ್ಯರು ಮತ್ತು ಧರ್ಮಾಧಿಕಾರಿ ನೀಲಕಂಠಾಚಾರ್ಯರು ಲಂಡನ್ನಿನಲ್ಲಿ ನಡೆದ “ಕಲೋನಿಯಲ್ ಅಂಡ್ ಇಂಡಿಯನ್” ಎಂಬ ಪ್ರದರ್ಶನದಲ್ಲಿ ಬಹುಮಾನ ಗಳಿಸಿದವರಾಗಿದ್ದರು (೧೮೮೯). ಇವರ ಮಕ್ಕಳಲ್ಲಿ ಒಬ್ಬರಾದ ಚಿನ್ನಾಚಾರ್ಯರು (೧೮೯೩-೧೯೭೭) ಮದ್ರಾಸ್ ಗವರ್ನರ್‌ರಿಂದ “ವಿಶ್ವಕರ್ಮ ಶಿಲ್ಪಕಲಾನಿಧಿ” ಎಂಬ ಬಿರುದನ್ನು ಪಡೆದವರಾಗಿದ್ದರು. ಮೈಸೂರಿನ ವೃತ್ತಿ ಶಿಕ್ಷಣ ಶಾಲೆ, ಮತ್ತು ಬೆಂಗಳೂರಿನ ಡಿಸೈನ್ ಸೆಂಟರ್‌ಗಳಲ್ಲಿ ಲೋಹ ವಿಭಾಗದಲ್ಲಿ ಕೆಲಸ ಮಾಡಿ ಹೆಸರು ಗಳಿಸಿದ್ದರು. ೧೯೬೯ರಲ್ಲಿ ರಾಜ್ಯಪ್ರಶಸ್ತಿ ಸಹ ದೊರಕಿತ್ತು.

ಇನ್ನೊಬ್ಬ ಲೋಹಶಿಲ್ಪಿ ಪಿ. ಶ್ರೀನಿವಾಸಾಚಾರ್ (೧೯೧೩-೯೨) ತಾತಂದಿರಾದ ವೆಂಕಟಾಚಾರ್, ನೀಲಕಂಠಾಚಾರ್‌ರವರ ಶೈಲಿಯನ್ನೆ ಅಭಿವೃದ್ಧಿಪಡಿಸಿಕೊಂಡು ಮೈಸೂರು ಅರಮನೆಗೆ ಭುವನೇಶ್ವರಿ ದೇವಿಯ ಉತ್ಸವಮೂರ್ತಿ, ಅರಮನೆ ಸಿಂಹಾಸನದ ಮೆಟ್ಟಿಲುಗಳ ಬದಿಯ ಕೈಪಿಡಿಗಳ ಶೃಂಗಾರಕ್ಕಾಗಿ ಚಾಮರಧಾರಿಣಿಯರು ಹಾಗೂ ಭರತಪುರ ಮಹಾರಾಜರಿಗೆ ಅಂಬೆಗಾಲು ಕೃಷ್ಣ ಮಾಡಿಕೊಟ್ಟಿದ್ದಾರೆ. ಚೆನ್ನಕೇಶವ ಶಿಲ್ಪಕ್ಕೆ ೧೯೬೮ರಲ್ಲಿ ರಾಷ್ಟ್ರಪ್ರಶಸ್ತಿ ಸಹ ದೊರಕಿದೆ. ಎಲ್ಲಕ್ಕಿಂತ ಮುಖ್ಯವಾಗಿ ಅರ್ಧನಾರೀಶ್ವರ ವಿಗ್ರಹದಲ್ಲಿ ಶಿವನ ಭಾಗವನ್ನು ಕಂಚಿನಿಂದಲೂ ಪಾರ್ವತಿಯ ಭಾಗವನ್ನು ತಾಮ್ರದಿಂದಲೂ ರೂಪಿಸಿ ಎರಡು ಲೋಹಗಳನ್ನು ಅಕ್ಕ ಪಕ್ಕಗಳಲ್ಲೇ

ಹೊಂದಿಸಿ ಏಕಲೋಹ ಶಿಲ್ಪದಂತೆ ಮಾಡಿರುವುದು ಲೋಹ ಶಿಲ್ಪ ಕಲಾ ಇತಿಹಾಸದಲ್ಲೇ ಮೊಟ್ಟಮೊದಲನೆಯದು. ಈ ಶಿಲ್ಪಕ್ಕೆ ೧೯೭೩ರಲ್ಲಿ ರಾಷ್ಟ್ರಪ್ರಶಸ್ತಿ ಸಹ ದೊರಕಿತು. ರಾಜ್ಯ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಸಹ ೧೯೯೧ರಲ್ಲಿ ದೊರಕಿದೆ.

ಇಲ್ಲಿನ ಮತ್ತೊಬ್ಬ ಶಿಲ್ಪಿ ಶಿಲ್ಪಾಚಾರ್ (೧೯೧೯-೯೧) ಮೈಸೂರು ದಸರಾ ಪ್ರದರ್ಶನದಲ್ಲಿ ಹತ್ತು ವರ್ಷಗಳ ಕಾಲ ನಿರಂತರವಾಗಿ ಚಿನ್ನದ ಪದಕ ಪಡೆದವರು. ಪ್ರಸ್ತುತ ನಮ್ಮೊಡನೆ ಇರುವ ಎನ್.ಜಿ. ನೀಲಕಂಠಾಚಾರ್ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದರಲ್ಲದೇ ರಾಜ್ಯದ ಅತ್ಯುನ್ನತ ಶಿಲ್ಪ ಪ್ರಶಸ್ತಿಯಾದ ಜಕಣಾಚಾರಿ ಪ್ರಶಸ್ತಿ ಪಡೆದವರಾಗಿದ್ದು ನಾಗಮಂಗಲದವರೇ ಆಗಿದ್ದಾರೆ. ಈ ಪುಸ್ತಕದ ಪ್ರಧಾನ ವಿಷಯವಾದ ಪೈಲ್ವಾನ್ ವೆಂಕಟಾಚಾರ್‌ರವರು ಕೂಡಾ ನಾಗಮಂಗಲದವರೇ. ಈ ಅಂಶಗಳೆಲ್ಲವನ್ನೂ ಮಂಡ್ಯಜಿಲ್ಲಾ ಗೆಜೆಟಿಯರ್ ಸಹ ದಾಖಲಿಸಿದೆ.

ಮೇಲ್ಕಾಣಿಸಿದ ಹಲವಾರು ಶಿಲ್ಪಿಗಳ ಪ್ರಯತ್ನದಿಂದಾಗಿ, ಅವರ ನಂತರದ ಪೀಳಿಗೆಯ ಅಭಿವೃದ್ಧಿಗಾಗಿ ಕಸಬನ್ನು ಕಲಿಸುವ, ಮಾಡಿದುದನ್ನು ಮಾರುವುದಕ್ಕಾಗಿ ಹಿತ್ತಾಳೆ ಕೇಂದ್ರವೊಂದನ್ನು ೧೯೫೬ರಲ್ಲಿ ಸ್ಥಾಪಿಸಲಾಯಿತು. ಕೆಲವು ಕಾಲಾನಂತರ ಅದು ಕೈಗಾರಿಕಾ ಕುಶಲಕಲಾ ತರಬೇತಿ ಸಂಸ್ಥೆ ಎಂದು ಮರುನಾಮಕರಣ ಮಾಡಿ ಮರಗೆಲಸ, ಲೋಹದ ಕೆಲಸ, ಕಮ್ಮಾರಿಕೆ ಹಾಗೂ ಹತ್ತಿ ನೇಯ್ಗೆ, ಉಣ್ಣೆ ನೇಯ್ಗೆ ತರಬೇತಿ ನೀಡುವ ಸಂಸ್ಥೆಯಾಯಿತು.

ಜನನ-ಬಾಲ್ಯ-ವಿದ್ಯಾಭ್ಯಾಸ

ಇಲ್ಲಿನ ಮತ್ತೊಬ್ಬ ಶಿಲ್ಪಿ ವೆಂಕಟಾಚಾರ್. ನಾನು ಮೊದಲೇ ತಿಳಿಸಿದಂತೆ ಹೆಸರಿನ ಪುನರಾವರ್ತನೆ ಆಗುತ್ತಾ ಹೋಗುವುದನ್ನು ಗಮನಿಸಿ ಪೈಲ್ವಾನ್ ವೆಂಕಟಾಚಾರ್ ಎಂದು ಗುರುತಿಸುವುದೇ ಸೂಕ್ತ. ಪೈಲ್ವಾನ್ ಎಂಬ ಸೇರ್ಪಡೆ ತೋರಿಕೆ ಮಾತ್ರವಲ್ಲ, ಅದರಲ್ಲಿ ನೈಜತೆ ಇದೆ. ೧೯೨೬ರಲ್ಲಿ ಚಿಕ್ಕಣ್ಣಾಚಾರ್ಯರ ಪುತ್ರನಾಗಿ ಜನಿಸಿದ ಇವರಿಗೆ ಬಾಲಕನಾಗಿದ್ದಂದಿನಿಂದಲೇ ಗರಡಿ ಮನೆಯ ಕಡೆಗೆ ಒಲವು. ಅವರ ಕುಟುಂಬದವರಿಗಾರಿಗೂ ಒಲಿಯದ ಅಥವಾ ಕುಸ್ತಿ ಕಲೆಯನ್ನು , ಯಾರೂ ಬಯಸದುದನ್ನು ಇವರು ಬಯಸಿ ಒಲಿಸಿಕೊಂಡರು. ಮನೆಯಲ್ಲಿ ಮಾತಾಪಿತೃಗಳ ಕಡೆಯಿಂದ, ಲೋಹದ ಕೆಲಸ ಕಲಿಯೋ, ಶಾಲೆಗೆ ಹೋಗಿ ಓದೋ ಎಂದರೆ ಮಟ್ಟಿ (ಮಣ್ಣು) ಮೆತ್ತಿಕೊಳ್ಳಲು ಹೋಗುತ್ತಾನೆ ಎಂಬ ಬಿರುನುಡಿಗೆ ತುತ್ತಾದದ್ದು ಆಯಿತು. ಆದರೆ ಯಾವ ಮಾತಿಗೂ ಬಗ್ಗದ ಬಾಲಕ ವೆಂಕಟಾಚಾರ್ ಲೋಹದ ಕೆಲಸ ಕಲಿಯುವ ಜೊತೆ ಜೊತೆಗೆ ಗರಡಿಸಾಮು, ಗದೆ ತಿರುಗಿಸುವಿಕೆ, ಬೈಸಗೆ, ಸಾಮು ಮಾಡುವುದು, ದಂಡೆ ಒಡೆಯುವುದು, ನುಣುಪುಕಂಭ ಹತ್ತುವುದು, ಮಟ್ಟಿಯನ್ನು ಮೈ ಮೇಲೆ ಹಾಕಿಕೊಂಡು ಗಂಟೆ ಗಟ್ಟಲೆ ದೇಹವನ್ನು ಹುದುಗಿಸಿಕೊಂಡು ಆಂತರಿಕ ಚೈತನ್ಯ ಪಡೆಯುವುದು, ವಸ್ತಾದ್ (ಅಂದರೆ ಗರಡಿಯ ಗುರು)ರವರಿಂದ ಜೆಟ್ಟಿ ವರಸೆಗಳನ್ನು ಅಭ್ಯಸಿಸುವುದು ನಡೆದೇ ಇತ್ತು. ಯೌವ್ವನಕ್ಕೆ ಬಂದಾಗ ಸಾಕಷ್ಟು ಕುಸ್ತಿಗಳನ್ನು ಮಾಡಿದರು. ತದನಂತರದಲ್ಲಿ ಇವರೇ ವಸ್ತಾದ್ ಆದರು. ಹೀಗಾಗಿ ಪೈಲ್ವಾನ್ ವೆಂಕಟಾಚಾರ್ ಎಂಬ ಹೆಸರು ಜನ ಜನಿತವಾಯಿತು. ತತ್ಪರಿಣಾಮ ಕೈಕಾಲುಗಳಲ್ಲಿ ಬಲ, ದೇಹದಾರ್ಢ್ಯತೆ ದ್ವಿಗುಣಗೊಂಡಿದ್ದರಿಂದ ಲೋಹಗೆಲಸಕ್ಕೆ ಸಹಕಾರಿಯಾಯಿತು. ಜೀವಿತದ ಕೊನೆವರೆಗೆ ಆರೋಗ್ಯದಿಂದಿರಲು ಸಾಧ್ಯವಾಯಿತು.

ತಂದೆಯಾದ ಚಿಕ್ಕಣ್ಣಾಚಾರ್ ಅವರಿಂದ ಲೋಹಗೆಲಸವನ್ನು ಕಲಿತುದಕ್ಕಿಂತ ಹೆಚ್ಚಾಗಿ ಮಾವನವರಾದ 'ಲೋಹಶಿಲ್ಪ ಚತುರ' ಎಂದೇ ಖ್ಯಾತರಾಗಿದ್ದ ಯಜಮಾನ್ ಶ್ರೀಕಂಠಾಚಾರ್ ಅವರಿಂದ ಕಲಿತದ್ದು ಅಧಿಕ. ಶಾಲೆಯ ಓದು ಮಾಧ್ಯಮಿಕ ಹಂತದವರೆಗೆ ಮಾತ್ರ. ಮಾತೃಭಾಷೆ ಕನ್ನಡವನ್ನು ಹೊರತುಪಡಿಸಿ ಇತರ ಭಾಷೆಗಳ ಬರವಣಿಗೆಯ

ಸಂಪರ್ಕ ಕಡಿಮೆ. ಆದರೆ ಮಾತನಾಡಲು ಎರಡು ಮೂರು ಭಾಷೆ ಬರುತ್ತಿತ್ತು. ಸೋದರ ಮಾವನವರುಗಳಾದ ಶಿಲ್ಪಿ ಗುಂಡಾಚಾರ್ ಮತ್ತು ಶಿಲ್ಪಿ ಗಣೇಶಾಚಾರ್‌ರವರಿಂದ ಪ್ರೋತ್ಸಾಹವೂ ಸಿಕ್ಕಿತು. ತಪ್ಪಿದಲ್ಲಿ ದಂಡಿಸಿ ತಿದ್ದುವ ಗುಣ ಅವರಲ್ಲಿತ್ತು. ಇದರಿಂದ ವೆಂಕಟಾಚಾರ್ ಓರ್ವ ಪರಿಣಿತ ಲೋಹಶಿಲ್ಪಿಯಾಗಲು ಸಹಕಾರಿಯಾಯಿತು. ಈ ಎಲ್ಲಾ ಕಷ್ಟಗಳ ಕಲಿಕೆಯಿಂದಾಗಿ ತಾವಿದ್ದ ನೆಲವಾದ ನಾಗಮಂಗಲದಲ್ಲಿ ಸ್ಥಾಪಿತವಾದ ಹಿತ್ತಾಳೆ ಕೈಗಾರಿಕಾ ಕೇಂದ್ರದಲ್ಲಿ ಲೋಹಶಿಲ್ಪ ತರಬೇತಿ ನೀಡುವ ಅಧ್ಯಾಪಕರಾಗುವ ಯೋಗ ಕೂಡಿ ಬಂತು.

ಅಧ್ಯಾಪಕ

ಇವರು ಅಧ್ಯಾಪಕರಾಗಿ ಬಂದ ನಂತರ ತರಬೇತಿ ಶಾಲೆಯ ಸ್ವರೂಪ ಬೇರೆಯಾಯಿತು. ಕಲಿಯುವ ಆಸಕ್ತಿಯನ್ನು ಮೊದಲು ಮೂಡಿಸಬೇಕೆಂಬುದು ಅವರ ಮನದಿಂಗಿತವಾಗಿತ್ತು. ಸಾಕಷ್ಟು ಜನರಿಗೆ ಏನನ್ನು ಕಲಿಯಬೇಕು, ಏತಕ್ಕಾಗಿ ಕಲಿಯಬೇಕು ಎಂಬ ಸಾಮಾನ್ಯ ತಿಳುವಳಿಕೆ ಇರುವುದಿಲ್ಲ. ತಿಳಿದುಕೊಳ್ಳುವ ಯತ್ನವನ್ನು ಸಹ ಮಾಡುವುದಿಲ್ಲ. ಅಂತಹ ಸಂದರ್ಭದಲ್ಲಿ ಓರ್ವ ವ್ಯಕ್ತಿಯ ಮಾರ್ಗದರ್ಶನ ಅಗತ್ಯ. ಸಕಾಲದಲ್ಲಿ ಮಾರ್ಗದರ್ಶನ ಮಾಡಿ ವಿದ್ಯೆಯನ್ನು ಕಲಿಸುವವನಿಗೆ ನಮ್ಮ ಹಿಂದಿನವರು ಅತ್ಯಂತ ಪೂಜ್ಯಭಾವನೆಯಿಂದ ನೋಡುತ್ತಿದ್ದರು. ಆತನನ್ನೇ ಬ್ರಹ್ಮ, ವಿಷ್ಣು, ಮಹೇಶ್ವರ ಎಂದೆಲ್ಲಾ ಸಂಬೋಧಿಸುತ್ತಿದ್ದರು, ಗೌರವಿಸುತ್ತಿದ್ದರು. ವೆಂಕಟಾಚಾರ್ ಸಹ ಈ ಸಾಲಿಗೆ ಸೇರಿದವರು.

ಪ್ರತಿ ಮನೆ ಮನೆಗೆ ಹೋಗಿ ಅಲ್ಲಿರುವ ಯುವಕರ ತಂದೆ ತಾಯಿಯರ ಮನ ಒಲಿಸಿ ಕೈಗಾರಿಕಾ ತರಬೇತಿ ಕೇಂದ್ರಕ್ಕೆ ಕಳಿಸಲು ಕೋರುತ್ತಿದ್ದರು. ಆ ತೆರನಾಗಿ ಸೇರಿದ ವಿದ್ಯಾರ್ಥಿ ನಾಲ್ಕಾರು ದಿನ ಬಂದು ಮತ್ತೆ ನಿಲುಗಡೆ ಹೊಂದಿದರೆ ಅವರ ಮನೆಗೆ ಹೋಗಿ ಕಷ್ಟ ಸುಖ ವಿಚಾರಿಸಿ ಮತ್ತೆ ಬರಲು ತಿಳಿಸುತ್ತಿದ್ದರು. “ಮರಳಿ ಬಾ ಶಾಲೆಗೆ ” ಎಂಬ ಇಂದಿನ ಸರ್ಕಾರಿ ಘೋಷಣೆಯನ್ನು ವೆಂಕಟಾಚಾರ್ ಅಂದೇ ಸ್ವಯಂ ಪ್ರೇರಿತರಾಗಿ ಕೈಗೊಂಡು ಓರ್ವ ಕ್ರಿಯಾಶೀಲ ಅಧ್ಯಾಪಕರಾಗಿದ್ದರು. ಇದರಿಂದಾಗಿ ಕಮ್ಮಾರಿಕೆ, ಬಡಗಿ, ಉಣ್ಣೆ ಮತ್ತು ಹತ್ತಿ ಬಟ್ಟೆಗಳ ಹಾಗೂ ವಸ್ತುವಿನ್ಯಾಸಗಳ ಜೊತೆಗೆ ಲೋಹ ಕೆಲಸದ ತರಬೇತಿಗಳಿಗಾಗಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸೇರುವಂತಾಯ್ತು. ಕ್ರಮೇಣ ನಮ್ಮ ಹುಡುಗನಿಗೆ ಕಲಿಯಲು ಅವಕಾಶ ಸಿಕ್ಕಿದರೆ ಸಾಕು ಎಂಬಷ್ಟರ ಮಟ್ಟಿಗೆ ಬೆಳೆಯಿತು. ಅಲ್ಲಿ ವಿದ್ಯಾರ್ಥಿಗಳಿಂದ ಮಾಡಿಸಿದ ಪದಾರ್ಥಗಳು ಅಸಲಿನ ಬೆಲೆಗೆ ಮಾರಾಟ ಮಾಡುತ್ತಿದ್ದರು. ಜನ ಕೊಳ್ಳುವಲ್ಲಿ ಪೈಪೋಟಿ ನಡೆಸಿ ಪಡೆಯುತ್ತಿದ್ದರು. ಹೊರಗಿರುವ ವ್ಯಾಪಾರಿ ಬೆಲೆಗೂ ಇವರು ಕೊಡುವ ಬೆಲೆಗೂ ಅಗಾಧ ವ್ಯತ್ಯಾಸವಿರುತ್ತಿತ್ತು. ಹಾಗೆಯೇ, ಸಂಬಂಧಿಸಿದವುಗಳಿಗೆ ಬಳಸುತ್ತಿದ್ದ ಲೋಹವೂ ಸಹ ಉತ್ತಮ ಮಟ್ಟದ್ದೇ ಆಗಿರುತ್ತಿತ್ತು. ವೆಂಕಟಾಚಾರ್ ಯುವಕರ ಪಾಲಿಗೆ ಆಶಾಕಿರಣವಾಗಿದ್ದರು. ಕಾಯಕದಲ್ಲಿ ನಿಷ್ಠೆಯಿತ್ತು.

ವೆಂಕಟಾಚಾರ್ ನಾಗಮಂಗಲದಲ್ಲಿದ್ದಾಗ ಯಾವುದೇ ಕೆಲಸ ಬಂದರೂ ಇಲ್ಲವೆನ್ನದೆ ಮಾಡಿಕೊಡುತ್ತಿದ್ದರು. ಮರಗೆಲಸ, ಕಲ್ಗೆಲಸ, ಬೆಳ್ಳಿ ಮತ್ತು ಚಿನ್ನದ ವಿಗ್ರಹಗಳು ಯಾವುದಾದರೂ ಸರಿಯೆ! ನಾಗಮಂಗಲದಲ್ಲಿ ಇವರೆಷ್ಟು ಪ್ರಸಿದ್ಧರಾದರೆಂದರೆ ಯಾವುದಾದರೂ ವಾಹನ ಕೆಟ್ಟು ನಿಂತರೂ ಸಹ ಇವರನ್ನೇ ಕರೆದು ಮಾಡಿಸಿಕೊಳ್ಳುತ್ತಿದ್ದರು. ಊರಿನಲ್ಲಿ ಗಲಾಟೆಯಾದರೂ ತೀರ್ಮಾನಗಳಿಗೆ ಇವರ ಹಾಜರಾತಿ ಮುಖ್ಯವಾಗಿರುತ್ತಿತ್ತು. ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡಿದ ಅನುಭವವೂ ಇತ್ತು. ಆದರೆ ಮೈಸೂರಿಗೆ ಲೋಹಶಿಲ್ಪದ ಅಧ್ಯಾಪಕರಾಗಿ ವರ್ಗಾವಣೆ ಆದನಂತರ ಇತರ ಎಲ್ಲಾ ಕೆಲಸಗಳು ಸ್ಥಗಿತವಾದವು. ಲೋಹಶಿಲ್ಪದ ಬೇಡಿಕೆಗಳು ತೀವ್ರವಾಗತೊಡಗಿದವು.

ವರ್ಗಾವಣೆ

ನಾಗಮಂಗಲದ ತರಬೇತಿ ಕೇಂದ್ರದಿಂದ ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೆ ವರ್ಗಾವಣೆ ಆಯಿತು (೧೯೬೮). ಇಲ್ಲಿ ಶಿಕ್ಷಣ ಕೊಡುವುದರ ಜೊತೆಗೆ ಸರ್ಕಾರದ ಯಾವುದೇ ಕೆಲಸ ಮಾಡಿಸಬೇಕಾದರೆ ಅಂದರೆ ಅದು ಯಾವುದಾದರೊಬ್ಬ ವ್ಯಕ್ತಿಯ ಜ್ಞಾಪಕಾರ್ಥ ಮಾಡುವ ವಿಗ್ರಹವಾಗಿರಬಹುದು, ಅಥವಾ ಅನ್ಯದೇಶಿಯರಿಗೆ ಮೈಸೂರಿನ ನೆನಪಾಗಿ ಕೊಡುವ ವಿಗ್ರಹವಾಗಿರಬಹುದು, ಅದನ್ನು ಸರ್ಕಾರಿ ಸ್ವಾಮ್ಯದ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಮಾಡಿಸಿಕೊಡುವ ಪದ್ಧತಿ ಅಲ್ಲಿತ್ತು. ಮುಜರಾಯಿಗೆ ಸಂಬಂಧಿಸಿದ ಯಾವ ವಿಗ್ರಹವಾಗಲೀ ಮಾಡಬೇಕಾಗಿದ್ದುದರಿಂದ ಕೆಲಸದ ಒತ್ತಡವು ಸಹ ಅಧಿಕವಾಗಿರುತ್ತಿತ್ತು. ಕಲಾ ಪರಿಣಿತರೆಂದೇ ಇವರನ್ನು ನೇಮಕ ಮಾಡಿದುದರಿಂದ, ಕೆಲಸಗಳನ್ನು ಗುತ್ತಿಗೆ ಆಧಾರದ ಮೇಲೆ (Contract Base) ಬೇರೆಯವರಿಗೆ ನೀಡುತ್ತಿರಲಿಲ್ಲ. ಕೆಲಸ ಪೂರೈಸಿಕೊಡುವ ಹೊಣೆಗಾರಿಕೆ ಇವರದಾದುದರಿಂದ ಸಮಯದ ಪರಿವೆಯೇ ಇಲ್ಲದೇ ಮಾಡಬೇಕಾಗಿತ್ತು. ಸಹ ಶಿಕ್ಷಕರು, ಸಿಬ್ಬಂದಿಯ ಸಹಕಾರ ಕೆಲವು ವೇಳೆ ಅಸಹಕಾರವಾದಲ್ಲಿ ಅವರ ಮಕ್ಕಳೇ ಬೆನ್ನೆಲುಬಾಗಿ ನಿಂತು ಕೆಲಸ ಮಾಡಿಕೊಡುತ್ತಿದ್ದರು.

ನಿತ್ಯ ದಿನಚರಿ

ವೆಂಕಟಾಚಾರ್ ಅವರ ನಿತ್ಯದ ದಿನಚರಿಯ ಆರಂಭ ಮುಂಜಾನೆಯ ಐದುವರೆ ಗಂಟೆಯಿಂದ ಆರಂಭ. ಸ್ನಾನ, ಪೂಜೆ, ಪೂರೈಸಿ ಬೆಳಿಗ್ಗೆ ಏಳುಗಂಟೆಗೆ ಕೆಲಸ ಆರಂಭಿಸಿ ಎಂಟು ಗಂಟೆಯವರೆಗೆ ಮಾಡಿ, ನಂತರ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೆ ಹೋಗುತ್ತಿದ್ದರು. ಅಲ್ಲಿನ ಸಮಯ ಬೆಳಿಗ್ಗೆ ಎಂಟರಿಂದ ಹನ್ನೆರಡು, ನಂತರ ಮಧ್ಯಾಹ್ನದ ೨ ಗಂಟೆಗೆ ಹೋಗಿ ೫ ಗಂಟೆಗೆ ವಾಪಸ್ಸಾಗುತ್ತಿದ್ದರು. ಒಳ್ಳೆ ಕೆಲಸಗಾರರು ಎಂಬ ಭಾವನೆ ಜನರಲ್ಲಿ ಮೂಡಿದ್ದುದರಿಂದ ಖಾಸಗಿಯಾಗಿ ಮಾಡಲು ಸಹ ಅನೇಕ ಬೇಡಿಕೆ ಬರುತ್ತಿದ್ದವು. ಹಾಗಾಗಿ ಮನೆಯಲ್ಲಿಯೂ ಕೆಲಸಗಳು ಸಾಕಷ್ಟು ಇದ್ದವು. ಮನೆಯ ಕುಟುಂಬವೆಲ್ಲವೂ ಒಂದಲ್ಲಾ ಒಂದು ರೀತಿಯಲ್ಲಿ ಸಹಾಯ ಮಾಡಬೇಕಿತ್ತು. ಯಾರಾದರೂ ಕುಳಿತು ಕಾಲಹರಣ ಮಾಡುತ್ತಿದ್ದರೆ ಸಹಿಸುತ್ತಿರಲಿಲ್ಲ. ಏನಾದರೂ ಮಾಡುತ್ತಿರಬೇಕು. ಬೇಡಿಕೆ ಇರಲಿ, ಇಲ್ಲದಿರಲಿ, ಒಟ್ಟಾರೆ ಕೆಲಸ ಮಾಡುತ್ತಿರಬೇಕು ಎಂಬುದು ಅವರ ಮನದಿಂಗಿತ. ಯಾವುದೇ ಕೆಲಸ ಬರಲಿ, ಅದು ಒಂದಡಿ ಶಿಲ್ಪವಾಗಿರಬಹುದು, ಅಥವಾ ಹತ್ತಡಿ ಶಿಲ್ಪವಾಗಿರಬಹುದು ಒಪ್ಪಿಕೊಂಡು ಮಾಡಿಕೊಡುತ್ತಿದ್ದರು.

ಪೊಲೀಸ್ ಪ್ರತಿಮೆ

ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ಬೋಧಕರಾಗಿದ್ದ ಕಾಲದಲ್ಲಿ ನಡೆದ ಒಂದು ಸ್ಮರಣಾರ್ಹ ಕೆಲಸ 'ಪೊಲೀಸ್ ಪ್ರತಿಮೆ'. ಬೆಂಗಳೂರಿನಲ್ಲಿ ಸ್ಥಾಪಿಸಬೇಕೆಂದಿರುವ ಪೊಲೀಸ್ ಪ್ರತಿಮೆಯನ್ನು ಮಾಡಿಸಲು, ಮದ್ರಾಸ್, ಮುಂಬೈ, ಹೈದರಾಬಾದ್ ಎಲ್ಲೆಡೆ ಅಡ್ಡಾಡಿ ಕೊನೆಗೆ ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಗೆ ಬಂದು ವಿಚಾರಿಸಿದಾಗ ಅಲ್ಲಿನ ಮುಖ್ಯಸ್ಥರಿಂದಲೂ ಮೂರು ತಿಂಗಳ ಒಳಗೆ ಮಾಡಿಕೊಡಲು ಸಾಧ್ಯವಿಲ್ಲವೆಂಬ ನಿರಾಕರಣೆಯ ಉತ್ತರ. ಆದರೆ ವೆಂಕಟಾಚಾರ್ ಅವರು ಅದನ್ನು ಸವಾಲಾಗಿ ತೆಗೆದುಕೊಂಡು ಮಾಡಿಕೊಡಲು ಮುಂದಾದರು. ಪೊಲೀಸ್ ಇಲಾಖೆಯ ಮುಖ್ಯಸ್ಥರು ಬಹಳ ಸಂತೋಷದಿಂದ ಅದಕ್ಕೆ ಬೇಕಾದ ಸಲಕರಣೆಗಳನ್ನು ಒಂದು ವಾರದೊಳಗೆ ಒದಗಿಸಿದರು. ಅವುಗಳನ್ನು ಕಾಯಲು ಓರ್ವ ಪೊಲೀಸ್‌ನನ್ನೂ ಸಹ ನೇಮಿಸಿದರು. ವಿಗ್ರಹ ಮಾಡಬೇಕಾದ ರೀತಿಯನ್ನು ಅವರಿಂದ ತಿಳಿದು ಅದರಂತೆ ಓರ್ವ ಪೊಲೀಸನನ್ನೂ ನಿಲ್ಲಿಸಿ ರೇಖಾ ಚಿತ್ರ ರಚಿಸಿ ತೋರಿಸಿ ಒಪ್ಪಿಗೆ ಪಡೆದುಕೊಂಡು ಮುಂದಿನ ಹೆಜ್ಜೆಯಾಗಿ ಮೇಣದಲ್ಲಿ ಮಾಡುವುದಕ್ಕೆ ರೂಪದರ್ಶಿಯಾಗಿ ಬಂದೂಕುಧಾರಿ ಪೊಲೀಸ ನಿಂತುಕೊಂಡನು. ಹಲವಾರು ಬಾರಿ ತಿದ್ದಿ ತೀಡಿ ರೂಪ ತಂದರು. ಇಲಾಖೆಯ ಮುಖ್ಯಸ್ಥರ ಒಪ್ಪಿಗೆ ಪಡೆದು



ಎರಕದ ಕೆಲಸಕ್ಕೆ ಮುಂದಾದರು. ಈ ಶಿಲ್ಪದಲ್ಲಿ ನಿರ್ದಿಷ್ಟ ವ್ಯಕ್ತಿಯ ರೂಪ ಮುಖ್ಯವಾಗಿರಲಿಲ್ಲ. ಒಟ್ಟಾರೆ ಬಂದೂಕುಧಾರಿ ಪೊಲೀಸ್ ಗೌರವ ಸಲ್ಲಿಸುವ ಸಂಕೇತದಂತೆ ನಿಲ್ಲುವ ಅಗತ್ಯವಿತ್ತು. ಅಧಿಕಾರಿಗಳು ಕೊಟ್ಟ ಮೂರು ತಿಂಗಳ ಅವಧಿಗಿಂತ ಒಂದು ವಾರ ಮುಂಚಿತವಾಗೇ ಪೂರೈಸಿಕೊಟ್ಟರು. ಇಲಾಖಾ ಅಧಿಕಾರಿಗಳಿಗೆ ಆದ ಆನಂದ ಅಷ್ಟಿಷ್ಟಲ್ಲ. ಬಾಚಿ ತಬ್ಬಿದ ಪೊಲೀಸ್ ಅಧಿಕಾರಿ 'ಇಷ್ಟು ಜಾಗ್ರತೆ, ಇಷ್ಟು ಸುಂದರವಾಗಿ ವಿಗ್ರಹ ಪೂರ್ಣಗೊಳ್ಳುತ್ತದೆಂಬ ಭರವಸೆ ನನಗಿರಲಿಲ್ಲ' ಎಂದು ಹೇಳುತ್ತಾ ಶ್ಲಾಘಿಸಿದರು.

ಸವಾಲಾಗಿ ಸ್ವೀಕಾರ

ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ಲೋಹ ಶಿಲ್ಪದ ಬೋಧಕರಾಗಿ ಹದಿಮೂರು ವರ್ಷ ಸೇವೆ ಸಲ್ಲಿಸಿದ ಅವಧಿಯಲ್ಲಿ (೧೯೬೮-೧೯೮೧) ಇಂತಹ ಹಲವಾರು ಕೆಲಸಗಳನ್ನು ಸವಾಲಾಗಿ ಸ್ವೀಕರಿಸಿ ಮಾಡಿದ್ದಾರೆ. ಯಾವುದೇ ಕೆಲಸವಾಗಲಿ ತನ್ನಿಂದ ಸಾಧ್ಯವಿಲ್ಲವೆಂದು ಹೇಳುತ್ತಿರಲಿಲ್ಲ. ಹಾಗಾಗಿ ಒಂದಾದ ಮೇಲೊಂದು ಕೆಲಸಗಳು ಬರುತ್ತಿದ್ದ ಕಾರಣ ಇತರ ವಿಭಾಗಗಳಾದ ಮರಗೆಲಸ, ಕುಲುಮೆ (Smithy), ಅಚ್ಚು ತಯಾರಿಕೆ, ಜೋಡಣೆ ಮತ್ತಿತರ ವಿಭಾಗಗಳಲ್ಲಿಯೂ ನಿರಂತರ ಕೆಲಸವಿರುತ್ತಿತ್ತು. ಇವರು ನಿವೃತ್ತಿ ಹೊಂದುವ ಸಂದರ್ಭದಲ್ಲಿ ಉಳಿದಿದ್ದುದು ಚಾಮುಂಡಿ ಬೆಟ್ಟಕ್ಕೆ ತಾಯಿಯನ್ನು ಹೊತ್ತು ಮೆರೆಯುವ ಸಿಂಹವಾಹನ, ಹಾಗೆಯೇ ಮತ್ತೊಂದು ದೇವಾಲಯಕ್ಕೆ ಬೇಕಾದ ಶ್ರೀರಾಮನ ಕುಟುಂಬ ಇವೆರಡು ಮಾತ್ರ ಎಂದು ಹೇಳುತ್ತಾ, ಅವರು ಬಿಟ್ಟು ಬಂದ ನಂತರದ ಅವ್ಯವಸ್ಥೆಯನ್ನು ಹೇಳಲು ಮರೆಯಲಿಲ್ಲ. ಯಾವುದೇ ಕಷ್ಟಕರವಾದ ಕೆಲಸವನ್ನು ತೆಗೆದುಕೊಳ್ಳುವುದನ್ನು ಬಿಟ್ಟರು. ಅನ್ಯರಿಗೆ ಗುತ್ತಿಗೆ (Contract) ಕೊಟ್ಟು ಕೆಲಸ ಮಾಡಿಸಲು ಆರಂಭಿಸಿದರು. ಗುಣಮಟ್ಟ ಕುಸಿಯತೊಡಗಿತು. ನನಗೆ ಆಗ ದೊರೆಯುತ್ತಿದ್ದುದು ತಿಂಗಳ ಸಂಬಳ ಕೇವಲ ಒಂದೆರಡು ಸಾವಿರ ಮಾತ್ರ. ನಂತರದಲ್ಲಿ ಬಂದವರು ಏಳೆಂಟು ಸಾವಿರ ಪಗಾರ ಪಡೆಯುತ್ತಾರೆ. ಅವರು ಓದಿದ ಪಟ್ಟಿ ದೊಡ್ಡದಿದೆಯೇ ವಿನಃ ಕೆಲಸಗಳನ್ನು ಮಾಡಿದ ಪಟ್ಟಿ ಮಾತ್ರ ಇಲ್ಲವಾಗಿದೆ ಎಂಬ ವಿಶಾದದ ನುಡಿ ಅವರದಾಗಿತ್ತು.

ಸರ್ಕಾರಿ ನೌಕರಿಯಿಂದ ನಿವೃತ್ತಿ ಆಗಿತ್ತೇ ವಿನಃ ಅವರ ದೈನಂದಿನ ಕೆಲಸದಲ್ಲಲ್ಲ. ಜನ ಉತ್ತಮ ಕೆಲಸಗಾರರು ಬೇಕೆಂದು ಬಯಸಿ ಬರುತ್ತಿದ್ದರು. ವಿಗ್ರಹ ಮಾಡಿಸಲು ಬಂದವರು ಎಷ್ಟು ಅಡಿ ಶಿಲ್ಪವಾಗಬೇಕೆಂದು ತಿಳಿಸಿದರೆ ಕೇವಲ ಹತ್ತು ಹದಿನೈದು ನಿಮಿಷದಲ್ಲಿ ಬೇಕಾಗುವ ಲೋಹ ಪ್ರಮಾಣ, ಅದಕ್ಕೆ ತಗಲುವ ವೆಚ್ಚ, ಮಾಡಲು ಮಜೂರಿ ತಿಳಿಸುತ್ತಿದ್ದರು. ಜೊತೆಗೆ ಆಗಲೇ ಒಂದು ರೇಖಾಚಿತ್ರ ರಚಿಸಿ ಅದರ ರೂಪ ಪೀಠ ಪ್ರಭಾವಳಿಗಳ ಹೊರನೋಟವನ್ನು ಸ್ಥೂಲವಾಗಿ ತೋರಿಸುತ್ತಿದ್ದರು. ಗ್ರಾಹಕನಿಗೆ, ಮಾಡಿಸಿದರೆ ಇವರಲ್ಲಿಯೇ ಮಾಡಿಸಬೇಕೆಂಬ ಭಾವನೆ ಬರುವಂತೆ ಮನ ಗೆಲ್ಲುವ ಗುಣ ವೆಂಕಟಾಚಾರ್ ಅವರದಾಗಿತ್ತು.

ತದ್ರೂಪ ಶಿಲ್ಪ

ರೂಪಶಿಲ್ಪವನ್ನು ಮಾಡುವಾಗಿನ ಕ್ರಮವನ್ನು ವಿವರಿಸುತ್ತಾ ನಾವು ಯಾವ ವ್ಯಕ್ತಿಯ ಶಿಲ್ಪವನ್ನು ಮಾಡಬೇಕೆಂದಿರುವೆವೋ ಅವರ ಛಾಯಾಚಿತ್ರವನ್ನು ಪಡೆದುಕೊಳ್ಳುತ್ತೇವೆ. ಸಾಮಾನ್ಯವಾಗಿ ಆ ಚಿತ್ರ ಮುಖದ ಮುಂಭಾಗವನ್ನು ತೋರಿಸಿರುವದೇ ಆಗಿರುತ್ತದೆ. ನಾವಾದರೋ ಶಿಲ್ಪ ಮಾಡುವಾಗ ಪೂರ್ಣರೂಪ ಅಂದರೆ ಎತ್ತರ ದಪ್ಪ ಸಹ ಮಾಡಬೇಕಾಗುತ್ತದೆ. ಆ ಸಂದರ್ಭದಲ್ಲಿ ವ್ಯತ್ಯಾಸವಾಗುವ ಸಂದರ್ಭ ಹೆಚ್ಚು, ಅದಕ್ಕಾಗಿ ವ್ಯಕ್ತಿ ಬದುಕಿದ್ದರೆ ಆ ವ್ಯಕ್ತಿಯ ಪಾರ್ಶ್ವನೋಟ, ಹಿಂಬದಿಯ ನೋಟ ಸಹ ಛಾಯಾಚಿತ್ರವನ್ನು ಮಾಡಿಕೊಂಡು, ಅದನ್ನನುಸರಿಸಿ ಗ್ರಾಹಕರು ಎಷ್ಟು ಅಳತೆಯ ಶಿಲ್ಪ ಮಾಡಿಸಬೇಕೆಂದು ಬಯಸಿರುತ್ತಾರೋ ಆ ಅಳತೆಗೆ ರೇಖಾಚಿತ್ರ ಮಾಡಿ ಗ್ರಾಹಕರಿಗೊಮ್ಮೆ ತೋರಿಸಿ ನಂತರ ಮೇಣದಲ್ಲಿ ಮಾಡುತ್ತೇವೆ ಎನ್ನುತ್ತಿದ್ದರು.

ಮೇಣದಲ್ಲಿ ವಿಗ್ರಹ ಮಾಡುವ ಮೂಲಕ ಶಿಲ್ಪಿಗೂ ಒಂದು ತೆರನಾದ ಅನುಭವವಾಗುವುದಲ್ಲದೇ ಗ್ರಾಹಕನಿಗೂ ತಾನು ಬಯಸಿದಂತೆ ಶಿಲ್ಪ ಮೂಡಿ ಬರುತ್ತಿದೆ ಎಂಬ ಭಾವನೆ ಬರುತ್ತದೆ. ಹೀಗೆ ಒಮ್ಮತವಾದ ನಂತರ ಕೋರನ್ನು ಸುಟ್ಟ ಮಣ್ಣು, ಜೇಡಿ ಮಣ್ಣು, ಮರಳು ಇತ್ಯಾದಿಗಳನ್ನು ಬೆರೆಸಿ ನುಣ್ಣಗೆ ಮಾಡಿ ಮೇಣದ ಶಿಲ್ಪದ ಮೇಲೆ ಮೆತ್ತಿ ಒಣಗಿದ ನಂತರ ಮತ್ತೊಮ್ಮೆ ಇದೇತರ ಮಣ್ಣು - ಕಂಬಿ ಕಟ್ಟಿ - ರನ್ನರ್ ಮೂಲಕ ಎರಕ ಹೊಯ್ಯುವ ಪ್ರಕ್ರಿಯೆಗೆ ಹೋಗುತ್ತದೆ.

ಆಗ ವ್ಯತ್ಯಯವಾಗುವುದಿಲ್ಲ. ಒಂದು ವೇಳೆ ಮೇಣದ ಬಿಂಬ ಸರಿಯಾಗದೇ ಇದ್ದ ಸಂದರ್ಭದಲ್ಲಿ ಅರೆಮನಸ್ಸಿನ ಒಪ್ಪಿಗೆ ಪರಸ್ಪರರಲ್ಲಿ ಇದ್ದು ಎರಕವನ್ನು ಮಾಡಿದ್ದೇ ಆದರೆ ಸಾವಿರಾರು ರೂಪಾಯಿ ಖರ್ಚು ಮಾಡಿ ಅನೇಕ ದಿನಗಳ ಕಾಲ ಶ್ರಮಿಸಿ ಮಾಡಿದ ಕೆಲಸ ನಿರ್ದಿಷ್ಟ ರೂಪ ಬರದೇ ಹೋಗುವ ಸಂದರ್ಭಗಳೂ ಸಹ ಉಂಟು. ಆಗ ಮಾಡಿದ ಶಿಲ್ಪಿಗೂ ಮಾಡಿಸಿದವರಿಗೂ ಮನಸ್ತಾಪಕ್ಕೆ ಕಾರಣವಾಗಿ ಈರ್ವರೂ ನಷ್ಟ ಅನುಭವಿಸಬೇಕಾದ ಪ್ರಸಂಗ ಬರುತ್ತದೆ. ಅದಕ್ಕಾಗಿ ರೂಪಶಿಲ್ಪ ಮಾಡುವಾಗ ಮೇಣದ ಬಿಂಬದಲ್ಲಿ(wax model) ತದ್ರೂಪ ತರಬೇಕು. 'ತಾಯಿಯಂತೆ ಮಗಳು, ನೂಲಿನಂತೆ ಸೀರೆ ' ಎಂಬ ನಾಡನುಡಿಯಂತೆ, ಮೇಣದ ಶಿಲ್ಪ ಹೇಗಿರುತ್ತದ್ದೋ ಹಾಗೆಯೇ ರೂಪಶಿಲ್ಪವು ಹೊರ ಹೊಮ್ಮುತ್ತದೆ. ಈ ಕಾರಣಕ್ಕಾಗಿ ಮೊದಲು ಮೇಣದ ಬಿಂಬ ತಯಾರಿಸಿ ಗ್ರಾಹಕನಿಂದ ಒಪ್ಪಿಗೆ ಪಡೆದು ನಂತರ ಎರಕ ಹೊಯ್ಯುತ್ತೇವೆ. ಆಗ ತಪ್ಪು ನಮ್ಮದಾಗುವುದಿಲ್ಲ ಎನ್ನುತ್ತಿದ್ದರು ವೆಂಕಟಾಚಾರ್.

ಒಂದು ವೇಳೆ ರೂಪಶಿಲ್ಪ ಮಾಡಬೇಕಾಗಿದ್ದ ವ್ಯಕ್ತಿ ಸತ್ತಿದ್ದು ಅವರ ಮುಖದ ಚಿತ್ರ ಒಂದೇ ಇದ್ದಾಗ ಶಿಲ್ಪಿಯ ಕೆಲಸ ಬಹಳ ಕಷ್ಟವಾಗುತ್ತದೆ. ಚಿತ್ರವನ್ನು ಬರೆದು ಅವರ ಸಂಬಂಧಿಕರು ಅಂದರೇ ಅವರ ಹತ್ತಿರ ಒಡನಾಡಿಗಳಾದ ಹೆಂಡತಿ ಮಕ್ಕಳಿಗೆ ಅಥವಾ ತೀರಾ ನಿಕಟವಾಗಿ ಅವರನ್ನು ಗಮನಿಸಿದವರಿಗೆ ತೋರಿಸಿ ಅವರು ಹೇಳುವ ಭಾವಕ್ಕನುಗುಣವಾಗಿ ಹಲವಾರು ಬಾರಿ ತಿದ್ದಿ ರೂಪ ತರಬೇಕಾಗುತ್ತದೆ. ಇದೊಂದು ಅತ್ಯಂತ ತ್ರಾಸದಾಯಕ ಕೆಲಸ. ರಾಷ್ಟ್ರೀಯ ಮನ್ನಣೆ ಪಡೆದವರಾದರೆ ಅವರ ಮುಖ ಚಿತ್ರಗಳು, ನಾನಾವಿಧ ಭಂಗಿಯ (Action photos) ಚಿತ್ರಗಳು ದೊರೆಯುತ್ತವೆ. ಉದಾ : ಮಹಾತ್ಮಾ ಗಾಂಧಿ, ನೆಹರು, ಅಂಬೇಡ್ಕರ್ ಇತ್ಯಾದಿ ಇವುಗಳು ಸಮಸ್ಯೆ ಎನಿಸುವುದಿಲ್ಲ. ಉಳಿದಂತೆ ಸರಿಯಾದ ರೂಪ ಚಿತ್ರವಿಲ್ಲದವುಗಳನ್ನು ಶಿಲ್ಪ ಮಾಡಲಿಕ್ಕೆ ಕೈ ಹಾಕದಿರುವುದೇ ಕ್ಷೇಮವೆನ್ನುತ್ತಿದ್ದರು ಅವರ ಅನುಭವದ ದೃಷ್ಟಿಯಿಂದ.

ರೂಪಶಿಲ್ಪ ಮಾಡುವಾಗ ಗಮನಾರ್ಹವಾದ ವಿಷಯವೆಂದರೆ ಯಾರು ವಿಗ್ರಹ ಮಾಡಲು ಬೇಡಿಕೆ ಇಟ್ಟಿರುತ್ತಾರೊ ಅವರೋರ್ವರು ವಿಗ್ರಹವನ್ನು ಅವಲೋಕಿಸಿ ಸರಿಯೋ, ತಪ್ಪೋ ತಿಳಿಸಿ, ಮಾರ್ಪಾಡುಗಳನ್ನು ಬಯಸಿದ್ದೇ ಆದರೆ ಅದರಂತೆ ಮಾಡಿಕೊಡಬಹುದು. ಇಲ್ಲಿ ಮಾಡಿಸುವಾತನ ಮನಸ್ಸು, ಮಾಡುವಾತನ (ಶಿಲ್ಪಿ) ಮನಸ್ಸು ಪರಸ್ಪರ ಅರಿತುಕೊಳ್ಳಲು ಸಾಧ್ಯವಾಗುತ್ತದೆ. ಅದನ್ನು ಬಿಟ್ಟು ಮಾಡಿಸುವವರ ಕಡೆ ಹಲವಾರು ಜನ ಬಂದು ಹಲವಾರು ರೀತಿಯ ಬದಲಾವಣೆ ಸೂಚಿಸುತ್ತಾ ಹೊರಟರೆ ಅದಕ್ಕನುಗುಣವಾಗಿ ತಿದ್ದುತ್ತಾ ಹೋದರೆ ಕೊನೆಗೆ ಪೂರ್ಣವಾಗಿ ವಿಗ್ರಹದ ಸ್ವರೂಪವೇ ಕೆಟ್ಟುಹೋಗುವ ಸಂದರ್ಭಗಳು ಅಧಿಕ. ಆದ್ದರಿಂದ ವಿಗ್ರಹ ಮಾಡಲು ಕೊಡುವವನಲ್ಲಿ ಸಹ ತೀರ್ಮಾನ ತೆಗೆದುಕೊಳ್ಳುವ ಚೈತನ್ಯವಿರಬೇಕು, ಶಿಲ್ಪಿಯಾದವನಿಗೆ ರೂಪಶಿಲ್ಪ ಮಾಡುವಾಗ ಅತಿ ಎಚ್ಚರವೂ ಸಹ ಇರಬೇಕು. ಒಂದು ವೇಳೆ ಒಪ್ಪಿತವೇ ಆಗಲಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾದಾಗ ಅದನ್ನು ಕರಗಿಸಿ ಮತ್ತೊಮ್ಮೆ ಮಾಡಬಹುದಾಗಿದೆ. ಆಗ ಉಂಟಾಗುವ ಅಲ್ಪ ಪ್ರಮಾಣದ ಲೋಹ ನಷ್ಟ ಒಂದೆಡೆಯಾದರೆ ಮಾಡಬೇಕಾದ ಕೆಲಸ ಮಾತ್ರ ಮೊದಲಿನಂತೆಯೇ ಪ್ರಾರಂಭದ ಪ್ರಕ್ರಿಯೆಯಿಂದ ಆರಂಭಿಸಬೇಕಾಗುತ್ತದೆ. ಶಿಲ್ಪಿಗೆ ನಷ್ಟ ಅಧಿಕವಾಗುತ್ತದೆ.

ಲೋಹವು ಮೇಲಿಂದ ಮೇಲೆ ಕಾಯುವುದರಿಂದ ಕಾಠಿಣ್ಯ ಅಥವಾ ಗಡಸುತನ (Brittleness) ಹೆಚ್ಚಾಗಿ ಮುರಿದುಕೊಳ್ಳುವ ಅಥವಾ ಬಿರುಕುಗೊಳ್ಳುವ (Crackness) ಸಂಭವವೂ ಉಂಟು. ಈ ಎಲ್ಲಾ ಅಂಶಗಳನ್ನು ಗಮನಿಸಿಕೊಂಡೇ ಕಾರ್ಯೋನ್ಮುಖವಾಗಬೇಕೆಂಬ ಹಿತನುಡಿ ಅವರದಾಗಿತ್ತು.



ಲೋಹಗಳ ಬಳಕೆ

ಪಂಚಲೋಹಗಳೆಂದು ಕರೆಯುವ ಚಿನ್ನ, ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಇವುಗಳ ಸಮ್ಮಿಶ್ರದಿಂದ ದೇವತಾ ವಿಗ್ರಹಗಳನ್ನು ಮಾಡುತ್ತಾರೆಯೇ ವಿನಃ ಆಳೆತ್ತರದ ವಿಗ್ರಹಗಳನ್ನು ಮಾಡುವುದಿಲ್ಲ. ಕಾರಣ ಎಳೆಂಟು ಅಡಿ ವಿಗ್ರಹದ ಪ್ರಮಾಣಕ್ಕೆ ಚಿನ್ನ ಬೆಳ್ಳಿ ಹಾಕಲು ಸಾಧ್ಯವಿಲ್ಲ. ಅದೂ ಅಲ್ಲದೆ ಟೊಳ್ಳು ಪ್ರತಿಮೆ (Hallow Casting) ಮಾಡುವುದರಿಂದ ಅಪ್ಪಟವಾದ ಹಿತ್ತಾಳೆಯ ಅವಶ್ಯವಿರುತ್ತದೆ. ಹಿತ್ತಾಳೆ ಜೋಡಿಸಲು ಸಹಕಾರಿ. ಒಡೆದುಕೊಳ್ಳುವ ಗುಣ ಅದಕ್ಕಿರುವುದಿಲ್ಲ. ದೊಡ್ಡ ಪ್ರಮಾಣದ ವಿಗ್ರಹಕ್ಕೆ ಶತಾಂಶ ಎಪ್ಪತ್ತೈದರಷ್ಟು ಹಿತ್ತಾಳೆ ಬಳಸುತ್ತಾರೆ. ಉಳಿದಂತೆ ತಾಮ್ರ , ಕಂಚು ಸೇರಿಸುತ್ತಾರೆ. ಆದರೆ ಜನ ಬಳಕೆಯಲ್ಲಿ ಕಂಚಿನ ವಿಗ್ರಹವೆಂದು ಹೇಳುತ್ತಾರೆ. ನಿಜ ಅರ್ಥದಲ್ಲಿ ಇದು ಹಿತ್ತಾಳೆ ಪ್ರತಿಮೆಯೇ ವಿನಃ ಕಂಚಿನದಲ್ಲ. ಕಂಚು ಒಡೆದುಕೊಳ್ಳುವ ಗುಣದಿಂದ ಕೂಡಿರುತ್ತಾದ್ದರಿಂದ ಅದರ ಬಳಕೆ ಅತ್ಯಲ್ಪ.

ಕವಚ ಮಾಡುವಿಕೆ

ಮೂಲಮೂರ್ತಿ ಶಿಲೆಯಲ್ಲಿದ್ದರೆ, ಕ್ರಮೇಣ ಅಲಂಕಾರಕ್ಕಾಗಿ ಕವಚ ಮಾಡಿಸುವ ವಾಡಿಕೆ ಬಂದಿದೆ. ಚಿನ್ನ, ಬೆಳ್ಳಿ ಅಥವಾ ವಜ್ರಗಳಿಂದ ಕವಚ ಮಾಡಿಸಲು ಬಯಸಿ ಬರುವವರು ಇರುತ್ತಾರೆ. ಮುಖಕವಚ ಎದೆಕವಚ, ಹಸ್ತಗಳ ಕವಚ, ಅಥವಾ ಸರ್ವಾಂಗೀಣವಾದ ಕವಚ, ಇಲ್ಲವೆ ಕಿರೀಟ ಯಾವುದೇ ಆಗಿರಬಹುದು. ವಿಗ್ರಹದ ಅಳತೆಯನ್ನು ಪಡೆದು ಕಾರ್ಯೋನ್ಮುಖವಾಗಬೇಕು. ಅಳತೆ ಅಂದಕೂಡಲೇ ಇಂಚುಪಟ್ಟಿಯಿಂದ ಅಳೆಯಲು ಸಾಧ್ಯವಾಗುವುದಿಲ್ಲ ; ಇಂಚು ಪಟ್ಟಿಯು ಉದ್ದಗಲಗಳನ್ನು ಮಾತ್ರ ತಿಳಿಸಬಲ್ಲದು. ಅದಕ್ಕೆ ಮುಖ್ಯ ಕಾರಣ ಉಬ್ಬು ತಗ್ಗುಗಳಿರುತ್ತವೆ. ಉದಾಹರಣೆಗೆ ಕಿರೀಟ, ಅದರೊಳಗೆ ಬೇಕಾದಷ್ಟು ಉಬ್ಬು ತಗ್ಗುಗಳಿಂದ ಕೂಡಿರುತ್ತದೆ. ಚಿತ್ತಾರ ಬಿಡಿಸಿದಂತೆಲ್ಲಾ ಅವುಗಳ ಏರಿಳಿತವಿದ್ದೇ ಇರುತ್ತದೆ. ಅದಕ್ಕಾಗಿ ಲೋಹಶಿಲ್ಪಿಗಳು ಕವಚ ಮಾಡುವಾಗ ಅನುಸರಿಸುವ ಮಾರ್ಗ ಮೇಣ ಮೆತ್ತುವಿಕೆ ; ಸ್ವಲ್ಪ ಬಿಸಿ ಮಾಡಿದ ಮೇಣವನ್ನು ಮೆತ್ತುವುದರಿಂದ ಮೃದುವಾಗಿ ಕವಚ ಮಾಡಬೇಕಾದ ಭಾಗಕ್ಕೆ ಅಂಟಿಕೊಳ್ಳುತ್ತಾ ಹೋಗುತ್ತದೆ. ಹಾಗೆಯೇ ಅಮುಕಿ ಮೆತ್ತುತ್ತಾ ಹೋದಂತೆ ನಿರ್ದಿಷ್ಟವಾದ ಬಯಸಿದ ಭಾಗ ರೂಪುಗೊಳ್ಳುತ್ತದೆ. ನಂತರದಲ್ಲಿ ಆ ಮೇಣವನ್ನು ಹೊರತೆಗೆದರೆ ಒಳಮುಖದಲ್ಲಿ ಬಯಸಿದ ಭಾಗದ ರೂಪ ಮೂಡಿರುತ್ತದೆ. ಇದನ್ನು ಆಂಗ್ಲ ಭಾಷೆಯಲ್ಲಿ ಫಿಮೇಲ್ (Female) ಅನ್ನುತ್ತಾರೆ. ನಂತರ ಅದಕ್ಕೆ ಸಿಮೆಂಟು ಮರಳು ಮಿಶ್ರಮಾಡಿ ಒಳಮುಖವನ್ನು ಮೆತ್ತುವುದರಿಂದ ಮೇಣದಲ್ಲಿನ ಒಳಮುಖವೇ ಸಿಮೆಂಟ್‌ನಲ್ಲಿ ಹೊರಮುಖವಾಗಿ ರೂಪುಗೊಳ್ಳುವುದರಿಂದ ನಾವು ಯಾವ ವಿಗ್ರಹದ ಭಾಗಕ್ಕೆ ಕವಚ ಮಾಡಬೇಕೆಂದಿರುವೆವೋ ಆ ಭಾಗ ಸಿಮೆಂಟಿನಲ್ಲಿ ರೂಪುಗೊಂಡಿರುತ್ತದೆ (male portion). ಅದರ ಆಧಾರದ ಮೇಲೆ ಬೆಳ್ಳಿಯ ಕವಚ ಮಾಡುತ್ತೇವೆ ಎನ್ನುತ್ತಿದ್ದರು.

ಕಲ್ಲಿನಲ್ಲಿದ್ದ ಮೂಲರೂಪವನ್ನು ಸಿಮೆಂಟಿನಲ್ಲಿ ನಕಲು ಮಾಡಿಕೊಳ್ಳುವ (Tracing) ವಿಧಾನ ಎಲ್ಲರಿಗೂ ತಿಳಿದಿರುವುದಿಲ್ಲ. ಕಾರ್ಯಾನುಭವ ಮುಖ್ಯ. ಕವಚ ಅಥವಾ ಮುಖವಾಡ ಮಾಡಬೇಕೆಂದು ಶಿಲ್ಪಿಗಳಿಗೆ ಕರೆ ಬಂದಾಗ ಕಾಡುವ ಒಂದು ತೊಂದರೆ ಗರ್ಭಗುಡಿಯೊಳಗೆ ಹೋಗಲು ಅಲ್ಲಿನ ಅರ್ಚಕರು ಒಪ್ಪುವುದಿಲ್ಲ. ಅಳತೆ ತೆಗೆದುಕೊಳ್ಳುವ ಕೆಲಸದ ಮರ್ಮವು ಅರ್ಚಕರಿಗೆ ತಿಳಿದಿರುವುದಿಲ್ಲ. ಹಾಗಾಗಿ ಮೇಲ್ನೋಟಕ್ಕೆ ಕಾಣುವಂತೆ ಮಾಡಿದ್ದೇ ಆದರೆ ಸೂಕ್ತವಾಗಿ ಅಂಟಿಕೊಂಡಂತೆ ಆಗದೆ, ಸಡಿಲಗೊಳ್ಳುವ ಅಥವಾ ಕಿರಿದಾಗುವ ಸಂಭವ ಹೆಚ್ಚಾಗಿರುತ್ತದೆ. ಈ ತೊಂದರೆಯಿಲ್ಲದ, ಉತ್ಕೃಷ್ಟವಾದ ಕವಚವಾಗಬೇಕಾದರೆ ಶಿಲ್ಪಿಯೇ ಅಳತೆ ತೆಗೆದುಕೊಳ್ಳುವುದು ಸೂಕ್ತ ಹಾಗೂ ಸಮಂಜಸವೆಂಬುದು ಅವರ ಅಭಿಪ್ರಾಯವಾಗಿತ್ತು.

ನಾಗಾಭರಣ ಮುಖವಾಡ

ಲಿಂಗಕ್ಕೆ ನಾಗಾಭರಣ ಮಾಡುವಾಗ ಅಥವಾ ಮುಖವಾಡ ಮಾಡುವಾಗ ಕವಚ, ಮಾಡುವದಕ್ಕೆ ಬೇಕಾದ ಪ್ರಾಥಮಿಕ ರೂಪದ ನಕಲು ಮಾಡಿಕೊಳ್ಳುವ ವಿಧಾನ ಅನುಸರಿಸುವ ಅಗತ್ಯವಿಲ್ಲ. ಲಿಂಗ ಗೋಲಾಕಾರವಾಗಿರುವುದರಿಂದ ಅದರ ಸುತ್ತಳತೆಯನ್ನು ತೆಗೆದುಕೊಂಡರೆ ಸಾಕು, ಅದಕ್ಕನುಗುಣವಾಗಿ ಐದು ಹೆಡೆ ಅಥವಾ ಏಳು ಹೆಡೆಯ ನಾಗರನ್ನು ಮಾಡಬಹುದು. ಮುಖವಾಡವನ್ನು ಸಹ ಶಿಲ್ಪಿಯ ಮನೋಧರ್ಮಕ್ಕೆ ಅನುಗುಣವಾಗಿ ಮಾಡಬಹುದು. ಇಲ್ಲಿ ಶಿಲ್ಪಿಗೆ ಸ್ವಾತಂತ್ರ್ಯವಿರುತ್ತದೆ. ಇದು ರೇಖಿನ ಕೆಲಸ ಅಥವಾ ತಗಡಿನಿಂದ ಮಾಡುವ ಕೆಲಸವಾದ್ದರಿಂದ (Sheetmetal work) ಅರಗು ಕಟ್ಟುವ ಕಲೆ ತಿಳಿದಿರಬೇಕು. ಅರಗಿಲ್ಲದೇ ಕೆಲಸವೇ ಇಲ್ಲ. ಕೆ.ಜಿ.ಗಟ್ಟಲೇ ದೊರೆಯುವ ಕರಿರಾಳ ಅಥವಾ ಚದುರಸ ಎಂದು ಕರೆಯುವ ಅದನ್ನು ಮಾರುಕಟ್ಟೆಯಿಂದ ತಂದು ಕಡಲೆಕಾಯಿ ಎಣ್ಣೆಯೊಡನೆ ಬೆರಸಿ ಕಾಯಿಸುವ ಮೂಲಕ ಒಂದು ಬಗೆಯ ಗಟ್ಟಿತನ ಬರುತ್ತದೆ. ಕಾಯಿಸುವುದರಲ್ಲಿಯೂ ಒಂದು ಹದವಿದೆ. ಎಲ್ಲಾ ಕೆಲಸಕ್ಕೂ ಒಂದೇ ತೆರನಾಗಿ ಕಾಯಿಸುವ ಅವಶ್ಯಕತೆ ಇರುವುದಿಲ್ಲ. ಚಿನ್ನ, ಬೆಳ್ಳಿಯ ರೇಖಿನ ಕೆಲಸಕ್ಕಾಗಿ ಕಾಯಿಸುವ ವಿಧಾನಕ್ಕೂ ಇತರ ಲೋಹಗಳಿಗೆ ಅರಗುಕಟ್ಟುವ ಕೆಲಸಕ್ಕಾಗಿ ಕಾಯಿಸುವ ವಿಧಾನಕ್ಕೂ ಕೊಂಚ ವ್ಯತ್ಯಾಸವಿರುತ್ತದೆ. ಇದು ಅನುಭವದ ಆಧಾರದ ಮೇಲೆ ಮಾಡುವಂತಹದೆಂಬುದನ್ನು ವೆಂಕಟಾಚಾರ್ ಹೇಳಲು ಮರೆಯಲಿಲ್ಲ.

ಉಪಕರಣಗಳು

ರೇಖನ್ನು ಅರ್ಥಾತ್ ತಗಡನ್ನು ಅರಗಿಗೆ ಅಂಟಿಸುವ ಕೆಲಸವಾದರೆ ಸಾಲದು, ಅದಕ್ಕೆ ರೂಪ, ನಕಾಶೆ ಬರಬೇಕಾದರೆ ವಿವಿಧ ರೀತಿಯ ಮೊಳೆಗಳು, ಸುತ್ತಿಗೆ ಬೇಕು. ಇವುಗಳು ಮಾರುಕಟ್ಟೆಯಲ್ಲಿ ದೊರಕುವುದಿಲ್ಲ. ಅದರಲ್ಲೂ ನಕಾಶೆ ಮಾಡುವ ಮೊಳೆಗಳಂತೂ ಎಲ್ಲಿಯೂ ಸಿಗುವುದಕ್ಕೆ ಸಾಧ್ಯವೇ ಇಲ್ಲ. ಆಯಾಯ ಶಿಲ್ಪಿಯ ಕೆಲಸಕ್ಕೆ ಅನುಗುಣವಾಗಿ ಮಾಡಿಸಿಕೊಳ್ಳಬೇಕು. ಮಡಿಕೆ ಮೊಳೆ, ರೇಖೆ ಮೊಳೆ, ಗುಬ್ಬಿಮೊಳೆ, ಉಬ್ಬೆತ್ತುವ ಮೊಳೆ, ನಕಾಶೆಮೊಳೆ, ಜಂಟಿರೇಖೆಮೊಳೆ, ಪ್ಯಾರಿಮೊಳೆ, ಮಟ್ಟಸಮೊಳೆ ಹೀಗೆ ಅವರವರ ಕೆಲಸದ ಭಾಷೆಯಲ್ಲಿ ಕರೆಯುವ ಮೊಳೆಯನ್ನು ಮಾಡಿಕೊಡುವವರು ಸಹ ಅನುಭವಸ್ಥರಾಗಿರಬೇಕು. ಎಲ್ಲರಿಗೂ ಮಾಡಲು ಬರುವುದಿಲ್ಲ. ಈ ಹಿಂದೆ ಚಿನ್ನ ಬೆಳ್ಳಿ ಕೆಲಸ ಮಾಡಲು ಕಂಚಿನ ಮೊಳೆ ಉಪಯೋಗಿಸುತ್ತಿದ್ದರು. ಆದರೆ, ಕಂಚು ಅತ್ಯಂತ ದುಬಾರಿ ಬೆಲೆಯಾದ್ದರಿಂದ ಸ್ಟೀಲ್ ಮೊಳೆಯನ್ನೇ ಉಪಯೋಗಿಸುತ್ತಾರೆ. ಟಂಗ್‌ಸ್ಟನ್‌ಸ್ಟೀಲ್ ಸ್ಟೀಲ್‌ಗಳಲ್ಲೆಲ್ಲಾ ಗಟ್ಟಿಯಾದುದರಿಂದ ಅದರಿಂದ ಮಾಡಿದ ಉಪಕರಣಗಳು ದೀರ್ಘ ಕಾಲ ಬಾಳಿಕೆ ಬರುತ್ತವೆ. ಆಯಾಯ ಕೆಲಸದ ಸೂಕ್ಷ್ಮತೆಗನುಗುಣವಾಗಿ ದಪ್ಪ, ಅತಿ ದಪ್ಪ, ಸಣ್ಣ, ಅತಿ ಸಣ್ಣ ಹೀಗೆ ಮಾಡಿಸಿಕೊಂಡು ಆಗಾಗ್ಗೆ ಸಾಣೆಕಲ್ಲಿನಿಂದ ಉಜ್ಜಿಕೊಳ್ಳುತ್ತಿರಬೇಕು. ನಕಾಶೆ ಕೆಲಸ ಮಾಡುವಾಗ ನೆಲಸುತ್ತಿಗೆ, ಕೈಸುತ್ತಿಗೆಗಳು ಎಷ್ಟು ಅವಶ್ಯವೋ ಹಾಗೆಯೇ ಸಾಣೆಕಲ್ಲು ಸಹ ಅತ್ಯಗತ್ಯ.

ಗಂಟೆ

ಗಂಟೆ ಮಾಡುವ ವಿಧಾನದಲ್ಲಿಯೂ ಕೆಲವು ಸೂಕ್ಷ್ಮತೆಗಳನ್ನು ಅನುಸರಿಸಬೇಕಾಗುತ್ತದೆನ್ನುತ್ತಾರೆ. ಮೊದಲು ಗಂಟೆಯಾಕಾರದಲ್ಲೇ ಮಣ್ಣಿನಿಂದ ಮಾಡಿಕೊಳ್ಳಬೇಕು. ಅಂದರೆ ಮುದ್ದೆಯಾಕಾರದ ಮಣ್ಣನ್ನು ತಿರುಗಣೆಯಿಂದ (Hand lathe) ಎಲ್ಲೆಲ್ಲಿ ಉಬ್ಬು ತಗ್ಗು ಬರಬೇಕು ಮತ್ತು ಕಿರಿದಾದ ಪ್ರಮಾಣದಿಂದ ಹಿರಿದಾದ ಭಾಗ ಬರುವಂತೆ ಅಂದರೆ ಗಂಟೆಯಾಕಾರದಲ್ಲಿ ಕೊರೆಯುವ ಮೂಲಕ ರೂಪ ಕೊಡಬೇಕು. ನಂತರ ಮೇಣ ಕಟ್ಟುವ ಕೆಲಸ ಮಾಡಬೇಕು. ಗಂಟೆ ಮಾಡುವಲ್ಲಿ ಗಮನಿಸಬೇಕಾದ ಅಂಶವೆಂದರೇ ಉತ್ತಮವಾದ ನಾದದುತ್ಪತ್ತಿಗೆ ಕಾರಣವಾಗುವ ಒಳ ಆವರಣ

ಯಾವುದು ಎಷ್ಟು ಪ್ರಮಾಣದಲ್ಲಿ ಟೊಳ್ಳಾಗಿರಿಸಬೇಕೆಂಬುದನ್ನು, ಅನುಭವಸ್ಥರು ಮಾಡುವಾಗ ನೋಡಿ ತಿಳಿಯಬೇಕು. ಬೆಲ್‌ಮೆಟಲ್‌ಅಲ್ಲದೆ ಬೇರೇನನ್ನೂ ಬಳಸಬಾರದು. ಬಾರಿಸುವ ಗಂಟೆಯ ನಾಳಕ್ಕೆ ಬಲಿತ ಹುಣಸೇ ಮರದ ಟೊಂಗೆಯನ್ನಾಗಲೀ, ಜಿಂಕೆಯ ಕೊಂಬನ್ನಾಗಲೀ, ಅಥವಾ ಗಟ್ಟಿಯಾದ ಮರದ ತುಂಡನ್ನಾಗಲೀ ಬಳಸಬಹುದು. ಇವುಗಳಿಂದ ಬರುವ ನಾದ ಕಂಚಿನ ಗಂಟೆಯ ಒಳ ಆವರಣದೊಳಗೆಲ್ಲಾ ಅನುರಣನವಾಗಿ ಹೊರಹೊಮ್ಮುತ್ತದೆ. ಆದರೆ ಈಗ ಮಾರುಕಟ್ಟೆಯಲ್ಲಿ ದೊರೆಯುವ ಗಂಟೆಗಳಿಗೆ ಲೋಹದ ನಳಿಕೆಯನ್ನೇ ಹಾಕಿರುವುದರಿಂದ ಅದರಿಂದ ಯಾವ ಸುಶ್ರಾವ್ಯ ದನಿಯು ಬರುವುದಿಲ್ಲ, ದೀರ್ಘಕಾಲದ ಬಾಳಿಕೆಯು ಬರುವುದಿಲ್ಲ ಎಂಬುದು ಅವರ ಅಭಿಪ್ರಾಯವಾಗಿತ್ತು.

ಎರಕದ ಪೀಠ ಪ್ರಭಾವಳಿ



ಎರಕದ ಪ್ರಭಾವಳಿ
ದೊಡ್ಡಬಳ್ಳಾಪುರ

ಸಾಮಾನ್ಯವಾಗಿ ಪ್ರಭಾವಳಿಗಳನ್ನು ಮಾಡುವುದು ರೇಖಿನ ಮೂಲಕ (Sheet metal work). ಪೂರ್ಣ ಎರಕದಿಂದಲೇ ಮಾಡಿಸ ಬಯಸುವ ಜನರು ಹೆಚ್ಚಿನ ಹಣ ಖರ್ಚುಮಾಡಬೇಕಾಗುತ್ತದೆ. ಕಾರಣ, ರೇಖಿನ ಕೆಲಸಕ್ಕಿಂತ ಅಧಿಕವಾದ ಕೆಲಸವಾಗಿದ್ದು, ಮಣ್‌ಗೆಲಸ, ಮೇಣದ ಕೆಲಸಗಳ ನಂತರ ಎರಕದ ಕೆಲಸವಾಗಬೇಕು. ಅದೇ ರೇಖಿನ

ಕೆಲಸವಾದರೆ ಮಾರುಕಟ್ಟೆಯಿಂದ ಹಿತ್ತಾಳೆ ತಗಡನ್ನು ತಂದು ಮೊದಲೇ ಮಾಡಿಟ್ಟುಕೊಂಡಿದ್ದ ರೇಖಾಚಿತ್ರವನ್ನು ಅದರ ಮೇಲಿಟ್ಟು ನಕಲು ಮಾಡಿಕೊಂಡು ಅನಾವಶ್ಯಕ ಭಾಗವನ್ನು ಕತ್ತರಿಸಿ ನಂತರ ಕರಿರಾಳದ ಅಂಟನ್ನು ಸಿದ್ಧಮಾಡಿಕೊಂಡು ಅದರ ಮೇಲೆ ತಗಡನ್ನು ಮೆತ್ತಿಸಿ ಕೆಲಸ ಮಾಡಬಹುದು.

ದೊಡ್ಡಬಳ್ಳಾಪುರದ ಪಟೇಲ್‌ರ ಅಪೇಕ್ಷೆಯಂತೆ ಅಲ್ಲಿನ ದೇವಾಲಯವೊಂದಕ್ಕೆ ಎರಕದ ಪ್ರಭಾವಳಿ ಮಾಡಿದ್ದಾರೆ. ಸಾಮಾನ್ಯವಾಗಿ ೫ ಭಾಗ ಮಾಡುವ ಪ್ರಭಾವಳಿ ಒಂದೇ ಎರಕದಿಂದ ಆಗಿದೆ. ಪ್ರಭಾವಳಿಯ ಎಡಬಲಗಳಲ್ಲಿ ಮಕರ ವ್ಯಾಳಿಯನ್ನು 'ಅಗ್ರಭಾಗದಲ್ಲಿ ಸಿಂಹವ್ಯಾಳಿಯನ್ನು' ಪ್ರಭಾವಳಿಯ ಕಂಬದಂತಿರುವ ಭಾಗದಲ್ಲಿ ಕಂಬದ ವ್ಯಾಳಿಗಳನ್ನು ಅಳವಡಿಸಿದ್ದಾರೆ. ಪ್ರಭಾವಳಿಯ ಮಧ್ಯದಲ್ಲಿ ಏಕಹೆಡೆಯ ನಾಗರವನ್ನು ಪ್ರತ್ಯೇಕವಾಗಿ ಮಾಡಿ ಬೆಸೆದಿದ್ದಾರೆ. ಹಾಗೆಯೇ ತಳಪೀಠವನ್ನು ಸಹ ಪೂರ್ಣ ಎರಕದಿಂದಲೇ ಪ್ರತ್ಯೇಕವಾಗಿ ಮಾಡಿ ಕಮಲದ ಹೂವಿನ ಚಿತ್ತಾರ ಬಿಡಿಸಿದ್ದಾರೆ. ಅದರ ಮೇಲೆ ಅಂದರೆ ಪೀಠದ ಮುಂಭಾಗದಲ್ಲಿ ಗರುಡನ ವಿಗ್ರಹ ಮಾಡಿದ್ದಾರೆ. ಈ ಸಿಂಹಾಸನಕ್ಕೆ, ಆಕರ್ಷಿಸುವ ರೀತಿ ಎರಡು ಬಾವುಟ, ಎರಡು ತಟ್ಟೆಯಾಕಾರದ ಪತಾಕೆ, ಅಗ್ರಭಾಗದಲ್ಲಿ ಛತ್ರಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಮಾಡಿ ಜೋಡಿಸಿದ್ದಾರೆ. ಇದೊಂದು ಪುರಾತನವಾದ (ಆ್ಯಂಟಿಕ್) ಲೋಹಗೆಲಸವೆಂಬ ಭಾವನೆ ಬರುತ್ತದೆ.

ದೊಡ್ಡ ಪ್ರಮಾಣದ ಶಿಲ್ಪ

ಮೊದಲು ಎಷ್ಟು ಪ್ರಮಾಣದ ಶಿಲ್ಪ ಮಾಡಬೇಕೆಂದಿರುವೆವೊ ಆ ಅಳತೆಯ ರೇಖಾಚಿತ್ರವನ್ನು ಬರೆದಿಟ್ಟುಕೊಳ್ಳಬೇಕು. ನಂತರ ಅದೇ ರೀತಿಯಾದ ಮಣ್ಣಿನ ಶಿಲ್ಪವನ್ನು ತಯಾರು ಮಾಡಬೇಕು. ಇದು ಪ್ರಥಮ ಹಂತದ ಕೆಲಸ. ಆಗಲೇ ದೇಹದ ಮೇಲಿರುವ ಉಡುಪುಗಳಾದ ಕಚ್ಚೆ, ಕೋಟು, ಧರಿಸುತ್ತಿದ್ದ ಜುಬ್ಬ ತೆಳುವಾದುದೋ ಅಥವಾ ಒರಟಾದುದೋ, ಅವುಗಳ ಮಡಿಕೆ (Folding) ಉಂಟಾಗುವ ಕ್ರಮ ಇವೆಲ್ಲವನ್ನು ಗಮನಿಸಿ ಮಣ್ಣಿನ ವಿಗ್ರಹ ಮಾಡಬೇಕಾಗುತ್ತದೆನ್ನುತ್ತಿದ್ದರು. ಇದಾದ ನಂತರ ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಮೋಲ್ಡ್ ಮಾಡಿಕೊಂಡು ತದನಂತರದಲ್ಲಿ ಮೇಣ ಮೆತ್ತಿ ನಿಶ್ಚಿತ ರೂಪಕ್ಕೆ ತರುವುದು. ಇದನ್ನು ವ್ಯಾಕ್ಸ್ ಮಾಡಲ್ ಎನ್ನುತ್ತಾರೆ. ಇದು ದ್ವಿತೀಯ ಹಂತದ ಕೆಲಸ. ಎಷ್ಟು ಶುದ್ಧವಾಗಿ ನಯವಾಗಿ ಮೇಣದ ಕೆಲಸವನ್ನು ಮಾಡಬೇಕು, ಮೇಣದ ದಪ್ಪ ಕನಿಷ್ಠ ೫ ಎಂ.ಎಂ. ನಿಂದ ೬ ಎಂ.ಎಂ. ವರೆಗೂ ಮಾಡಿ ಅದಕ್ಕೆ "ರನ್ನರ್" ಮತ್ತು "ರೈಜರ್" ಗಳನ್ನು ಸಹ ಮೇಣದಲ್ಲಿ ಸಿದ್ಧಮಾಡಿದ ನಂತರ ಅದಕ್ಕೆ "ಕೋರ್" ಕಟ್ಟುತ್ತಾರೆ. ಕೋರನ್ನು ಹುತ್ತದ ಮಣ್ಣು, ಜಿಗಟು ಮಣ್ಣು, ಸುಟ್ಟ ಮಣ್ಣು ಎಲ್ಲವನ್ನೂ ಸೇರಿಸಿ ಅರೆದು ಅದಕ್ಕೆ ಗೋಣಿತಾಟು ಸೇರಿಸಿ, ಸಿದ್ಧಪಡಿಸಿದ ಈ ಮಣ್ಣನ್ನು ಮೇಣದಲ್ಲಿ ಸಿದ್ಧಪಡಿಸಿದ ಮೂರ್ತಿಯ ಮೇಲೆ ಪೂರ್ಣವಾಗಿ ಒಂದು ಲೇಪ ಮಾಡಿ ಒಣಗಿದ ನಂತರ ಅದಕ್ಕೆ ತಂತಿ, ಸರಳುಗಳನ್ನು ಕಟ್ಟಿ ಮಣ್ಣನ್ನು ಎರಡನೇ ಲೇಪಮಾಡಿ ಸುಮಾರು ಒಂದು ಅಂಗುಲ, ಅದಕ್ಕೂ ಹೆಚ್ಚು ದಪ್ಪಮಾಡಿ ಒಣಗಿಸಿ ನಂತರ ಅದನ್ನು 'ಡಿ' ವ್ಯಾಕ್ಸ್ ಮಾಡಲು ಬೆಂಕಿಗೆ ಇಡುತ್ತಾರೆ. ಕೋರ್‌ನಲ್ಲಿ ಮೇಣ ಕರಗಿ ರನ್ನರ್ ರಂಧ್ರದ ಮೂಲಕ ಹೊರಬರುತ್ತದೆ. ಮತ್ತೆ ಕೋರನ್ನು ಕಬ್ಬಿಣ ಕಾದ ಹಾಗೆ ಕೆಂಪಗೆ ಕಾಯುವ ತನಕ ಕಾಯಿಸಬೇಕು. ಹೀಗೆ ಕಾಯಿಸಿದ ಕೋರನ್ನು ರನ್ನರ್ ಅನ್ನು ಮೇಲ್ ಮುಖ ಮಾಡಿ ಒಂದು ಗುಂಡಿಯಲ್ಲಿ ಇಟ್ಟು ಅರ್ಧಕ್ಕಿಂತ ಹೆಚ್ಚು ಮರಳು ತುಂಬಿಸಿ ಸಿದ್ಧಪಡಿಸಿಕೊಂಡ ನಂತರ, ಗುಂಡಿಗೆ ಮತ್ತೊಂದು ಕಡೆ ಕಂಚನ್ನು ಮೂಸೆಯಲ್ಲಿ ಕರಗಿಸಿ ಸಿದ್ಧಪಡಿಸಿರಬೇಕು. ಈ ಎರಡು ಪ್ರಕ್ರಿಯೆಯಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಸಿದ್ಧಪಡಿಸಿದ ಮೇಣದ ಆಕೃತಿ ಮಾತ್ರ ಕರಗಿ ಆ ಭಾಗಕ್ಕೆ ಲೋಹದ ರಸ ರನ್ನರ್ ಮೂಲಕ ಹರಿದುಬಂದು ಕೋರ್ ಪೂರ್ಣ ತುಂಬುವುದು. ಈ ರೀತಿ ಎರಕವಾದ ಮೇಲೆ ಕೋರನ್ನು ಒಡೆದರೆ ಅದೇ ನಿಜವಾದ ಕಂಚಿನ ಮೂರ್ತಿ ಹೊರಬರುವುದು.

ದೊಡ್ಡ ಪ್ರಮಾಣದ ಕಂಚಿನ ಶಿಲ್ಪಗಳ ಎರಕ ಹೊಯ್ಯುವ ಕ್ರಿಯೆಯು ಎರಡು ತೆರನಾಗಿರುತ್ತದೆ. ಒಂದೇ ಬಾರಿಗೆ ಎರಕ ಹೊಯ್ಯುವುದು 'ಮತ್ತೊಂದು ತುಂಡು ತುಂಡಾಗಿ ಎರಕಹುಯ್ದು ಜೋಡಿಸುವುದು. ಒಂದೇ ಸಲ ಎರಕ ಹೊಯ್ಯಲು ಏಕಕಾಲದಲ್ಲಿ ಅನೇಕ ಮೂಸೆಯಲ್ಲಿ ಕಂಚನ್ನು ಕರಗಿಸಿ ಸಿದ್ಧಪಡಿಸಿಕೊಂಡು ಕಂಚಿನ ರಸವನ್ನು ಒಂದೇ ಹದದಲ್ಲಿ

ಬಿಡಬೇಕು. ದೊಡ್ಡ ಪ್ರಮಾಣದ ಕಂಚಿನ ಮೂರ್ತಿಯನ್ನು ಮಾಡುವಾಗ ರನ್ನರ್ ಮತ್ತು ರೈಸರ್‌ಗಳನ್ನು ಒಂದಕ್ಕಿಂತ ಹೆಚ್ಚಾಗಿ ಇಟ್ಟಿರಬೇಕು, ಕರಗಿದ ಲೋಹವನ್ನು ಒಂದೇ ಹದದಲ್ಲಿ ರನ್ನರ್ ಮೂಲಕ "ಕೋರ್"ನಲ್ಲಿ ಹೊಯ್ಯಬೇಕು. ಅದು ಕೋರ್‌ನಲ್ಲಿನ ಖಾಲಿ ಜಾಗವನ್ನು ಪೂರ್ಣ ತುಂಬಿ ಒಳಗಿನ ಗಾಳಿ ಮತ್ತು ಕರಗಿದ ಕಂಚಿನ ರಸ ಹೊರಬರುವ ತನಕ ಕೋರ್ ಮಾಡಬೇಕು. ಈ ತೆರನಾದ ಕ್ರಮದಿಂದ ವಿಗ್ರಹವೇನೋ ಬೇಗ ಆಗುತ್ತದೆ, ಆದರೆ ಉಷ್ಣಾಂಶಗಳ ವ್ಯತ್ಯಾಸದಿಂದ ಬಿರುಕು ಹಾಗೂ ಒಂದು ಕಡೆಯಿಂದ ಮತ್ತೊಂದು ಕಡೆಗೆ ಲೋಹ ರಸವು ಹರಿಯುವಲ್ಲಿ ಕೊಂಚ ನಿಧಾನವಾದಾಗ ಆ ವೇಳೆಗೆ ಉಷ್ಣಾಂಶವು ಕಡಿಮೆ ಆಗುವ ಸಂಭವವೂ ಇರುವುದರಿಂದ ಅಲ್ಲಿಗೆ ನಿಲುಗಡೆ ಆಗಿ ಕೊನೆಯಲ್ಲಿ ವಿಗ್ರಹವನ್ನು ಹೊರಕ್ಕೆ ತೆಗೆದಾಗ ಅಧಿಕವಾದ ಲೋಪ ಕಾಣುವ ಸಂಭವವೂ ಉಂಟು. ಈ ಕ್ರಮವನ್ನು ಮದ್ರಾಸ್ ಮುಂಬೈಗಳಲ್ಲಿ ಹೆಚ್ಚಾಗಿ ಮಾಡುತ್ತಾರೆ.

ಕರ್ನಾಟಕದಲ್ಲಿ ಹೆಚ್ಚಾಗಿ ತುಂಡುತುಂಡಾಗಿ ಮಾಡಿ ಜೋಡಿಸುವ ಕ್ರಮವೇ ಅಧಿಕ. ತಲೆ, ಎದೆ, ಸೊಂಟ, ಕೈಕಾಲು ಇತ್ಯಾದಿ ಭಾಗಗಳನ್ನು ಮಾಡಿಕೊಂಡು ಪ್ರತ್ಯೇಕ ಎರಕ ಹುಯ್ದು ನಂತರ ಅವುಗಳನ್ನು ಕೂಡಿಸಿ ಬೆಸುಗೆ ಹಾಕುತ್ತಾರೆ. ಇದರಿಂದ ಕೆಲಸ ನಿಧಾನವಾಗುತ್ತದೆಯಾದರೂ, ಕೆಲಸ ಶುದ್ಧವಾಗುತ್ತದೆ ಎಂಬುದು ವೆಂಕಟಾಚಾರ್ ಅವರ ಅನಿಸಿಕೆ. ಜೋಡಿಸಿ ಬೆಸುಗೆ ಹಾಕುವ ಸ್ಥಳವನ್ನು ಆಂಗ್ಲಭಾಷೆಯ 'ವಿ' ಆಕಾರದಲ್ಲಿ (V-groove) ಉಳಿಯಿಂದ ಕೆತ್ತುವುದರಿಂದ, ಅಥವಾ ಅರದಿಂದ ಉಜ್ಜಿ ತೆಗೆಯುವುದರಿಂದ ಬೆಸುಗೆಯ ಲೋಹ ಆ ಹಳ್ಳದೊಳಗೆ ಕುಳಿತುಕೊಳ್ಳುತ್ತದೆ. ನಂತರ ಅದನ್ನು ಉಜ್ಜುವ ಯಂತ್ರದಿಂದ (Hand Grinding machine) ಮಟ್ಟಗೊಳಿಸಿದರೆ ಎಲ್ಲೆಲ್ಲಿ ಬೆಸುಗೆ ಹಾಕಿದೆ ಎಂಬುದೇ ತಿಳಿಯದಂತಾಗುತ್ತದೆ. ಬೆಸುಗೆ ಹಾಕುತ್ತಿದ್ದಂತೆ ಉಷ್ಣಾಂಶ ಅಧಿಕವಾದ ಕಡೆಗೆ ವಾಲಿ ವಿಗ್ರಹದ ಸ್ವರೂಪವೇ ಏರುಪೇರಾಗುವ ಸಂದರ್ಭವೂ ಇರುವುದರಿಂದ ಅದನ್ನು ತಕ್ಕ ಹಿಡಿತಗಳಿಂದ (clamp) ಬಂಧಿಸಿ ಬೆಸುಗೆ ಹಾಕುವುದು ಸೂಕ್ತವೆಂಬ ಅನುಭವದ ನುಡಿ ಅವರದು.

ದೊಡ್ಡ ಪ್ರಮಾಣದ ವಿಗ್ರಹ ಮಾಡುವಾಗ ಕೆಲವರು ತಮ್ಮ ಮನೆಯಲ್ಲಿರುವ ಅಥವಾ ಕಡಿಮೆ ಬೆಲೆಗೆ ಸಿಕ್ಕಿತೆಂದು ಅನುಪಯುಕ್ತವಾದ ಗನ್ ಮೆಟಲ್, ಮುಂತಾದ ಕಚ್ಚಾ ವಸ್ತುಗಳನ್ನು ತಂದು ಇವುಗಳನ್ನು ಹಾಕಿ ಕರಗಿಸಿ ದೊಡ್ಡ ವಿಗ್ರಹ ಹೇಗಿದ್ದರೂ ನಡೆಯುತ್ತದೆಂದು ಹೇಳುವ ಗ್ರಾಹಕರು ಉಂಟು. ಹಾಗೆ ಹಾಕಿದಾಗ ಶಿಲ್ಪಕ್ಕೆ ಮಾತ್ರವಲ್ಲ ಶಿಲ್ಪಿಗೂ ಸಹ ತೊಂದರೆಯಾಗುತ್ತದೆ. ಹೇಗೆಂದರೆ ಮೃದು ಸ್ವಭಾವದವನು ಒರಟು ಸ್ವಭಾವದವರೊಡನೆ ಹೊಂದಿಕೊಂಡು ಹೋಗುವುದು ಹೇಗೆ ಕಷ್ಟವೋ ಹಾಗೆ. ವಿಗ್ರಹವನ್ನು ಕೋರ್‌ನಿಂದ ಮುಕ್ತಗೊಳಿಸಿ ಅದರಲ್ಲಿದ್ದ ಓರೆ ಕೋರೆಗಳನ್ನು ಸರಿಪಡಿಸಲು ಈ ಕಾರ್ಯ ಆರಂಭಿಸಿದಾಗ ಕೆಲವು ಕಡೆ ಗಡಸುತನ (Hardness) ಅಧಿಕವಾಗಿ ನಯಗೆಲಸಕ್ಕೆ ಬಾಧಕವುಂಟಾಗುತ್ತದೆ. ಅಕಸ್ಮಾತ್ ಬಿದ್ದರೆ ಪುಡಿ ಪುಡಿಯಾಗಿ ಒಡೆದುಹೋಗುವುದೂ ಉಂಟು. ಅದಕ್ಕಾಗಿಯೇ ತಾಮ್ರ ಹಾಗೂ ಹಿತ್ತಾಳೆಯನ್ನೇ ಅಧಿಕವಾಗಿ ಬಳಸುತ್ತೇವೆ ಎನ್ನುತ್ತಿದ್ದರು.

ವಿಗ್ರಹಕ್ಕೊಂದು ವರ್ಣರೂಪ

ವರ್ಣ ಅಂದಕೂಡಲೇ ವೈವಿಧ್ಯಮಯವಾದ ನೈಜರೂಪ ಬಣ್ಣ ಎಂದು ಭಾವಿಸಬಾರದು. ವಿಗ್ರಹಕ್ಕೊಪ್ಪುವ ಶಿಲಾವರ್ಣವನ್ನು ವೆಂಕಟಾಚಾರ್ ಅವರೇ ಸ್ವತಃ ತಯಾರು ಮಾಡಿಕೊಳ್ಳುತ್ತಿದ್ದರು. ಮೊದಲು ಸಲ್ಫ್ಯೂರಿಕ್ ಆಸಿಡ್‌ನಿಂದ ಕಂಚಿನ ವಿಗ್ರಹವನ್ನು ಶುದ್ಧೀಕರಿಸಿ ನಂತರ ನೈಟ್ರಿಕ್ ಆ್ಯಸಿಡ್‌ಗೆ ಕಬ್ಬಿಣ, ತಾಮ್ರ ಇವನ್ನು ಒಟ್ಟಿಗೆ ಬೆರೆಸಿದಾಗ ಲೋಹಗಳೆಲ್ಲವೂ ಆಸಿಡ್ ಪ್ರಭಾವಕ್ಕೊಳಗಾಗಿ ಕರಗಿ ನೀರಿನಂತಾಗುತ್ತವೆ. ಅದನ್ನು ತಯಾರು ಮಾಡಿದ ವಿಗ್ರಹದ ಮೇಲೆ ಒಂದೆರಡು ಬಾರಿ ಹಚ್ಚಿದ ನಂತರ "ಬ್ಲೋಟಾರ್ಚ್" ಮೂಲಕ ಚೆನ್ನಾಗಿ ಕಾಯಿಸುತ್ತಾರೆ. ನಂತರ ಸ್ಟೀಲ್ ಉಲ್‌ನಿಂದ ತಿಕ್ಕಿ ಎಷ್ಟರ ಮಟ್ಟಿಗೆ ಆಕ್ಸೈಡ್ ಉಳಿಸಬೇಕೊ ಅಷ್ಟನ್ನು ಉಳಿಸಿ ಬಟ್ಟೆಯಲ್ಲಿ ಶುದ್ಧೀಕರಿಸಿ ನಂತರ ಕೊಬ್ಬರಿ ಎಣ್ಣೆಯನ್ನು ಸವರಿದರೆ ಇದು ಶಿಲಾವಿಗ್ರಹವೊ, ಲೋಹದ ವಿಗ್ರಹವೊ ಎಂಬ ಅನುಮಾನ ಬರುವಂತೆ ರೂಪ

ತಾಳುತ್ತದೆ. ಈ ಕ್ರಮವನ್ನು ಅನುಸರಿಸಿ ಲೇಪಿಸಿದವು ಅನೇಕ. ಇದಲ್ಲದೆ ಹಸಿರಾಗಿರುತ್ತಿದ್ದ ಗುಗ್ಗುಳ ತಂದು ಮೈಲುತುತ್ತದೊಡನೆ ಬೆರೆಸಿ ಚೆನ್ನಾಗಿ ಅರೆದು, ಅದನ್ನು ವಿಗ್ರಹದ ಮೇಲೆ ಲೇಪಿಸಿ ಕೊಂಚ ಸಮಯ ಬಿಟ್ಟು ಅದನ್ನು ತೊಳೆದರೆ ವಿಗ್ರಹದ ಬಣ್ಣ ಬರುತ್ತದೆ. ಈ ಕ್ರಮವನ್ನು ತಮಿಳುನಾಡಿನಲ್ಲಿ ಹೆಚ್ಚಾಗಿ ಅನುಸರಿಸುತ್ತಾರೆ. ಮುಖ್ಯವಾಗಿ ಈ ಕ್ರಮವನ್ನು ಅವರವರ ಅನುಭವದ ಆಧಾರದ ಮೇಲೆ ಗುಗ್ಗುಳವನ್ನು ಜಾಸ್ತಿ ಮಾಡಿಯೊ, ಅಥವಾ ಅವರವರು ಕಂಡುಕೊಂಡ ಇತರ ಮಿಶ್ರಣದೊಂದಿಗೆ ಬೆರೆಸಿ ಮಾಡಿದ ದ್ರಾವಣವನ್ನು ಆಗ ತಾನೆ ಮಾಡಿದ ಲೋಹ ವಿಗ್ರಹಗಳಿಗೆ ಲೇಪಿಸಿ, ಸುಟ್ಟು ತೊಳೆದು ಇದು ನೂರಾರು ವರ್ಷ ಹಳೆಯದು (ಆ್ಯಂಟಿಕ್) ಎಂಬ ಪಟ್ಟಿ ಕಟ್ಟಿ ಅಧಿಕ ಬೆಲೆಗೆ ಮಾರುವ ಜನರು ಇದ್ದಾರೆ ಎಂಬ ವ್ಯಾಪಾರಿ ಧರ್ಮವನ್ನು ಹೇಳಲು ಮರೆಯಲಿಲ್ಲ.

ಬಣ್ಣ ಹಚ್ಚುವ ಆಕ್ಸಿಡೈಸಿಂಗ್ ವಿಧಾನ ಸ್ಮಾರಕ ವಿಗ್ರಹಗಳಿಗೆ ಮಾತ್ರವೇ ವಿನಃ ಪೂಜಾ ವಿಗ್ರಹಗಳಿಗಲ್ಲ. ಪೂಜಾವಿಗ್ರಹಗಳು ಆಗಾಗ್ಗೆ ಬೆಣ್ಣೆ ತುಪ್ಪ ಹಾಲು, ಇತ್ಯಾದಿ ಕ್ಷಾರಯುಕ್ತವಾದ ಪದಾರ್ಥಗಳಿಂದ ಅಭಿಷೇಕ ಮಾಡಿಸಿಕೊಳ್ಳುವುದರಿಂದ ಅದಕ್ಕೆ ಆಕ್ಸಿಡೈಸ್ ಮಾಡದೆ ನಯವಾಗಿ ಹೊಳಪಾಗಿ ಮಾಡಿ ಹುಣಸೆ ಹಣ್ಣಿನ ರಸದಿಂದ ಆಗಾಗ್ಗೆ ತಿಕ್ಕಿ ತೊಳೆಯುವುದರಿಂದ ಹಿತ್ತಾಳೆ ವಿಗ್ರಹಗಳು ಹೊಳೆಯುತ್ತವೆ.

ವೆಂಕಟಪ್ಪನವರ ತದ್ರೂಪಶಿಲ್ಪ

ದೇವತಾ ವಿಗ್ರಹಗಳನ್ನೇ ಪರಂಪರೆಯಿಂದ ಮಾಡಿಕೊಂಡು ಬಂದಿದ್ದ ವೆಂಕಟಾಚಾರ್ ಅವರಿಗೆ ವರ್ಣಶಿಲ್ಪಿ ಎಂದೇ ಕರೆಯಲ್ಪಡುವ ವೆಂಕಟಪ್ಪನವರ ಎದೆಮೊಗದ (Bust) ಶಿಲ್ಪವನ್ನು ಮಾಡಲು ಬಂದಾಗ ಒಂದು ತೆರನಾದ ಮುಜುಗರವಾಯಿತು. ಯಾವುದೇ ಕೆಲಸವನ್ನಾದರೂ ತೆಗೆದುಕೊಂಡು ಮಾಡಬೇಕೆಂಬ ಬಯಕೆ ಒಂದೆಡೆಯಾದರೆ ತದ್ರೂಪಶಿಲ್ಪವನ್ನು ಮಾಡುವಾಗ ವ್ಯತ್ಯಯವಾದರೆ, ರೂಪ ಬಾರದೇ ಹೋದರೆ ಎಂಬ ಚಿಂತೆ ಅವರಲ್ಲಿ ಕಾಡುತ್ತಿತ್ತು. ಆ ಸಂದರ್ಭದಲ್ಲಿ ಮೈಸೂರಿನ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯ ವೈಸ್ ಪ್ರಿನ್ಸಿಪಾಲರಾಗಿದ್ದ ಎಂ.ಜೆ. ಶುದ್ಧೋದನ ಅವರು ಬೆನ್ನುತಟ್ಟಿ, 'ಆಚಾರ್ಯರೇ ಅನುಮಾನಿಸಬೇಡಿ, ನಿಮ್ಮ ಜೊತೆಗೆ ನಾವಿದ್ದೇವೆ. ಕೆಲಸ ತೆಗೆದುಕೊಂಡು ಆರಂಭಿಸಿ' ಎಂದರು. ವೆಂಕಟಾಚಾರ್ ಅವರಿಗೆ ಭುಜಬಲ ಬಂದಂತಾಯಿತು. ಶುದ್ಧೋದನ ಅವರು ಈ ಹಿಂದೆ ಗತಿಸಿದ ರೂಪಶಿಲ್ಪಿ ಬಸವಯ್ಯನವರು ಮಾಡುತ್ತಿದ್ದುದನ್ನು ನೋಡಿ ತಿಳಿದಿದ್ದುದರಿಂದ ಅದೇ ಕ್ರಮವಾದ ಮೊದಲ ಮಣ್ಣಿನ ಶಿಲ್ಪ ನಂತರ ಫ್ಲಾಸ್ಟರ್‌ಆಫ್ ಪ್ಯಾರಿಸ್ ಹಚ್ಚುವಿಕೆ. ತದನಂತರ ಮೇಣದ ಕೆಲಸ ಮಾಡುವ ಕ್ರಮ ತಿಳಿಸಿದರು.

ವೆಂಕಟಾಚಾರ್ ಅವರು ಪ್ಲಾಸ್ಟರ್ ಆಫ್ ಪ್ಯಾರಿಸ್ ಅನ್ನು ಬಳಸದೇ ಮಣ್ಣು ಮತ್ತು ಮೇಣದ ಬಳಕೆಯಿಂದಲೇ ಮಾಡಿದರು. ಈ ಕ್ರಮ ಎಲ್ಲಾ ಉತ್ಸವ ಮೂರ್ತಿಗಳನ್ನು ಮಾಡುವಾಗ ಅನುಸರಿಸುತ್ತಿದ್ದುದರಿಂದ ಅದೇನು ಹೊಸದು ಅನ್ನಿಸಲಿಲ್ಲ. ಆದರೆ ತದ್ರೂಪ ಮಾಡುವಾಗ ಆದ ಅನುಭವ ಮಾತ್ರ ಹೊಸದು. ವ್ಯಕ್ತಿಯ ಮುಖಚರ್ಯೆ, ಕಣ್ಣು, ಕಪೋಲ, ಮೂಗು, ಕೊಂಚ ವ್ಯತ್ಯಯವಾದರೂ ಅದೆಷ್ಟು ಪರಿಣಾಮ ಉಂಟಾಗುತ್ತದೆಂಬುದನ್ನು ಅರಿಯಲು ಸಾಧ್ಯವಾಯಿತೆನ್ನುತ್ತಿದ್ದರು. ಪ್ರಾಯಶಃ ವಿಶ್ವಕರ್ಮ ಜನಾಂಗದಲ್ಲಿಯೇ ಪ್ರಪ್ರಥಮವಾಗಿ ತದ್ರೂಪ ಶಿಲ್ಪವನ್ನು ಮಾಡಿದ ಕೀರ್ತಿ ವೆಂಕಟಾಚಾರ್ ಅವರಿಗೆ ಸಲ್ಲುತ್ತದೆ. ಮುಖ ಮತ್ತು ಎದೆ ಎರಡು ಭಾಗವಾಗಿ ಮಾಡಿಕೊಂಡು ಬೆಸುಗೆಯ ಮೂಲಕ ಒಗ್ಗೂಡಿಸಿದ ಈ ಶಿಲ್ಪ ಬೆಂಗಳೂರಿನ ಕಬ್ಬನ್ ವನದಲ್ಲಿರುವ ಮ್ಯೂಸಿಯಂ ಪಕ್ಕದಲ್ಲಿರುವ ವೆಂಕಟಪ್ಪನವರ ನೆನಪಿನಲ್ಲೇ ಕಟ್ಟಿರುವ ಭವನವಾದ ವೆಂಕಟಪ್ಪ ಚಿತ್ರಶಾಲೆ (Venkatappa Art Gallery)ಯಲ್ಲಿದೆ. ಇಲ್ಲಿ ವೆಂಕಟಪ್ಪನವರು ನುಡಿಸುತ್ತಿದ್ದ ವೀಣೆ, ಧರಿಸುತ್ತಿದ್ದ ಉಡುಪು, ಬಳಸುತ್ತಿದ್ದ ಬೆತ್ತ, ಕುಂಚ ಮತ್ತಿತರ ಪರಿಕರಗಳು ಸಹ ನೋಡಲಿಕ್ಕೆ ಇವೆ. ಇತರ ಕಲಾವಿದರು ಬರೆದ ಚಿತ್ರಗಳನ್ನು ಪ್ರದರ್ಶಿಸಲು ಸಹ ಅವಕಾಶವಿದೆ.



ಕೆ. ವೆಂಕಟಪ್ಪನವರ ಭಾವಶಿಲ್ಪ

ಉತ್ಸವ ಮೂರ್ತಿ

ಮೆರೆಯುವ ವಿಗ್ರಹವೆಂದು ಸಹ ಕರೆಯುವ ಮೂರ್ತಿಗಳನ್ನು ಮಾಡುವಲ್ಲಿ ವೆಂಕಟಾಚಾರ್‌ರವರು ಅನುಸರಿಸುತ್ತಿದ್ದ ಕ್ರಮ ಇತರರಿಗೂ ಅನುಕರಣೀಯ. ಸುಮಾರು ಒಂದುವರೆ ಅಥವಾ ಒಂದು ಮುಕ್ಕಾಲು ಅಡಿ ಎತ್ತರದ ವಿಗ್ರಹ ಅದಕ್ಕೆ ತಕ್ಕ ಪೀಠ ಪ್ರಭಾವಳಿಗಳನ್ನು ಮಾಡುತ್ತಾರೆ. ಅದಕ್ಕಿಂತ ಹೆಚ್ಚು ಎತ್ತರ ಮಾಡುತ್ತಿರಲಿಲ್ಲ. ಕಾರಣ ಅದರ ತೂಕವೂ ಜಾಸ್ತಿ ಆಗುವುದಲ್ಲದೇ ಅದರ ಬೆಲೆಯು ಅಧಿಕವಾಗುತ್ತಿತ್ತು. ಗ್ರಾಹಕನ ಜೇಬಿಗೆ ಕತ್ತರಿ ಬೀಳುತ್ತಿತ್ತು. ಇದು ಒಂದೇ ಎರಕದಲ್ಲಿ ಮಾಡುವ ವಿಧಾನ (Solid method) ವಾದ್ದರಿಂದ ಸಹಜವಾಗಿಯೇ ತೂಕವಿರುತ್ತಿತ್ತು.

ಉತ್ಸವ ವಾಹನಗಳನ್ನು ಮಾಡುವಾಗಲೂ ಪೌರಾಣಿಕ ವಿಚಾರಗಳ ಹಿನ್ನೆಲೆ ಶಿಲ್ಪಿಗೆ ತಿಳಿದಿರುವುದು ಅವಶ್ಯವೆನ್ನುತ್ತಿದ್ದರು. ಅನೇಕ ವಿಚಾರಗಳಲ್ಲಿ ಪ್ರಾಣಿಮುಖ, ಮಾನವ ದೇಹ ಒಟ್ಟೊಟ್ಟಿಗೆ ಬೆರೆತಿರುವ ಉದಾಹರಣೆಗಳು ಅನೇಕ ಇದೆ. ವಿಷ್ಣುವಿನ ಅವತಾರಗಳಾದ ಮತ್ಸ್ಯಾವತಾರ, ಕೂರ್ಮಾವತಾರ, ವರಾಹಾವತಾರ, ನರಸಿಂಹಾವತಾರ, ಇತ್ಯಾದಿ. ಹಾಗೆಯೇ ಉತ್ಸವಮೂರ್ತಿಗಳಿಗಾಗಿ ವಾಹನಗಳನ್ನು ಮಾಡುವಾಗಲೂ ಹಂಸವಾಹನ, ಗಜವಾಹನ, ಸಿಂಹವಾಹನ, ನಂದಿವಾಹನ, ಗರುಡವಾಹನ, ಅಶ್ವವಾಹನಗಳಲ್ಲಿ ಸಹ ಪ್ರಾಣಿಯನ್ನು ಶಿಲ್ಪರೂಪದಲ್ಲಿ ತರುವಲ್ಲಿ ವೆಂಕಟಾಚಾರ್ ಅವರು ಅತ್ಯಂತ ನಿಗಾವಹಿಸಿ ಪ್ರಾಣಿ ಮತ್ತು ಮಾನವ ಶರೀರಗಳೆರಡರ ಅಧ್ಯಯನವನ್ನು ಚೆನ್ನಾಗಿ ಮಾಡಿದ್ದರು. ಈ ವಾಹನಗಳನ್ನು ಎರಡಡಿಯಿಂದ ನಾಲ್ಕೈದು ಅಡಿಗಳೆತ್ತರದವರೆಗೆ ಮಾಡಬೇಕಾದುದರಿಂದ ಇದನ್ನು ಟೊಳ್ಳಾಗಿ ಮಾಡಿಕೊಂಡು (Core method) ನಂತರ ಬೆಸೆಯುತ್ತಿದ್ದರು. ಅಂದರೆ ಮುಖ, ಎದೆ, ಹೊಟ್ಟೆ, ಕಾಲು, ಬಾಲ ಮುಂತಾದ ಭಾಗಗಳನ್ನು ದಪ್ಪಕ್ಕೆ ಅನುಗುಣವಾಗಿ ಎರಡೆರಡು ಭಾಗಗಳನ್ನಾಗಿ ಮಾಡಿಕೊಂಡು ಗ್ಯಾಸ್‌ವೆಲ್ಡಿಂಗ್ ಮೂಲಕ ಬೆಸೆಯುತ್ತಿದ್ದರು. "ಈಗ ತಂತ್ರಜ್ಞಾನ ಬೆಳೆದಿರುವುದರಿಂದ ಅನುಕೂಲವಾಗಿದೆ. ನಾನು ಚಿಕ್ಕವನಿದ್ದಾಗ ನಮ್ಮ ತಂದೆ ಮತ್ತವರ ಸಮಕಾಲೀನರು ರಿವಿಟ್ ಮೂಲಕ ಜೋಡಣೆ ಮಾಡುತ್ತಿದ್ದ ವಿಧಾನವನ್ನು ನೆನೆಸಿಕೊಂಡರೆ ಮೈ ಬೆವರುತ್ತದೆ. ಕಾರಣ, ರಿವಿಟ್ ಮಾಡುವ ಸಂದರ್ಭದಲ್ಲಿ ಏನಾದರೂ ಸೀಳು ಬಿಟ್ಟುಕೊಂಡರೆ (crack) ಅದನ್ನು ಬೇರೆಯೇ ಮಾಡಿ ರಿವಿಟ್ ಮಾಡಬೇಕಾಗಿತ್ತು. ಜೊತೆಗೆ ರಿವಿಟ್ ಮಾಡಿದ ಜಾಗ ಕಾಣದಂತೆ ಚಿತ್ತಾರ ಸಹ ಮಾಡಬೇಕಾಗಿತ್ತು. ಈ ಎರಡರ ನಡುವೆ ಅಂದರೆ ನಿರೀಕ್ಷಿತ ವಿಗ್ರಹದ ಹಿಂಬದಿ ಮುಂಬದಿಗಳ ನಡುವೆ ಗಟ್ಟಿಯಾಗಿ ನಿಲ್ಲಲು ಮರದ ತುಂಡು ಇಟ್ಟು ಬಂಧಿಸಬೇಕಾಗಿತ್ತು. ಈಗ ಅದಾವ ತೊಂದರೆಯೂ ಇಲ್ಲದೆ ಬೆಸೆಯುವ ಕಡ್ಡಿಯ (Brasing Rod) ಮೂಲಕ ಗ್ಯಾಸ್‌ವೆಲ್ಡಿಂಗ್ ಮಾಡಬಹುದಾಗಿದೆ. ಶಿಲ್ಪ ಕಲಾವಿದರಿಗೆ ಇದೊಂದು ರೀತಿಯ ವರದಾನವಿದ್ದಂತೆ" ಎನ್ನುತ್ತಿದ್ದರು.

ಚಾಮುಂಡೇಶ್ವರಿ

ಶಕ್ತಿದೇವತೆಯಾದ ಚಾಮುಂಡೇಶ್ವರಿ ವಿಗ್ರಹವನ್ನು ಮಾಡುವಲ್ಲಿ ಪೂರ್ಣ ಪ್ರಮಾಣದ ದೇವತೆಯ ಜೊತೆಗೆ ಕುಳಿತಿರುವ ವಾಹನವಾದ ಸಿಂಹವನ್ನು ಮಾಡಿದ್ದಾರೆ. ಬೇರೆ ಬೇರೆ ಎರಕದಲ್ಲಿ ಮಾಡಿ ಬೆಸೆದಂತೆ ತೋರುವ ಆ ವಿಗ್ರಹದಲ್ಲಿ ಮಾನವ ಶರೀರ ಶಾಸ್ತ್ರಕ್ಕೆ (ಅನಾಟಮಿ) ಗಮನ ವಹಿಸಿದಂತೆ, ಪ್ರಾಣಿಯ ಅಂಗ ಸೌಷ್ಟವವನ್ನು ಅಭ್ಯಸಿಸಿ ಮಾಡಿದಂತಿರುವ ಸಿಂಹ ಅತ್ಯಂತ ನೈಜತೆಯಿಂದ ಕೂಡಿದೆ. ನಾಲ್ಕು ಕಾಲುಗಳನ್ನು ಪೀಠದ ಮೇಲೆ ಊರಿರುವಂತೆ ಮಾಡಿರುವುದಲ್ಲದೆ ಮುಖವು ಜನರತ್ತ ತಿರುಗಿ ಗರ್ಜಿಸುವಂತೆ ವಿನ್ಯಾಸಗೊಳಿಸಿದ್ದಾರೆ.

ಚಾಮುಂಡೇಶ್ವರಿ ಉಗ್ರ ಶಕ್ತಿದೇವತೆಯಾದ್ದರಿಂದ ಅಗ್ನಿ ಕೇಶವನ್ನು ಮಾಡಿದ್ದಾರೆ. ಇದು ಮುಖದ ಉದ್ದಕ್ಕೆ ಎರಡರಷ್ಟಿದ್ದು ಕಿರೀಟಕ್ಕಿಂತ ಕೊಂಚ ಎತ್ತರವಾಗಿಯೂ ಎಡಬಲಗಳಲ್ಲಿ ಕಿರೀಟಕ್ಕಿಂತ ಸ್ವಲ್ಪ ಅಗಲವಾಗಿಯೂ ಇದೆ. ತಲೆಯ ಹಿಂಬದಿಯಿಂದ ಅಗ್ನಿಜ್ವಾಲೆ ಹೊರಟಂತೆ ಮಾಡಿ ರೌದ್ರತೆಯನ್ನು ತಂದಿದ್ದಾರೆ. ಮುಖದಲ್ಲಿ ಹುಬ್ಬು ಕೂಡಾ



ಚಾಮುಂಡೇಶ್ವರಿ ಕಾಳಮುದ್ದನ ದೊಡ್ಡಿ, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು.

ಬಿಲ್ಲಿನಂತೆ ಬಾಗಿ ಕಣ್ಣುಗಳು ರೌದ್ರತೆಯನ್ನು ಬಿಂಬಿಸುವಂತೆ ಮಾಡಿದ್ದಾರೆ. ಹಣೆಯಲ್ಲಿ ಮೂರನೆಯ ಕಣ್ಣಾದ ಉರಿಗಣ್ಣನ್ನು ಅಳವಡಿಸಿ ಶಿರಸ್ಸಿನ ಹಿಂಭಾಗದಲ್ಲಿ ಚಕ್ರವನ್ನು ಅಳವಡಿಸಿರುವುದರ ಜೊತೆಗೆ ಕೇಶವು ಬೆನ್ನ ಹಿಂದೆ ಪಸರಿಸಿ ಮತ್ತಷ್ಟು ರೌದ್ರತೆಯನ್ನು ತಂದಿದೆ. ಕಿವಿಗಳಿಗೆ ವೃತ್ತಕುಂಡಲವನ್ನು, ಬಾಹುಗಳಿಗೆ ಭುಜಮಾಲೆಯನ್ನು ಮೂಗಿಗೆ ಮೂಗುತಿಯನ್ನು ಧರಿಸಿದಂತೆ ಕುಸುರಿ ಕೆಲಸ ಮಾಡಿದ್ದಾರೆ.

ಎಂಟು ಕೈಗಳುಳ್ಳ ಆ ದೇವಿಯ ಬಲಬಾಹುಗಳಲ್ಲಿ ಚಕ್ರ, ಕತ್ತಿ, ಗದೆ ಹಾಗೂ ಅಭಯಹಸ್ತ ಹೊಂದಿದ್ದರೆ, ಎಡಬಾಹುಗಳಲ್ಲಿ ಶಂಖ, ತ್ರಿಶೂಲ, ಬಿಲ್ಲು ಮತ್ತು ಕಮಲವನ್ನು ಹಿಡಿದಂತಿದೆ. ಕಮಲವು ಶಾಂತಿಯ ಸಂಕೇತವಾದರೆ, ಅಭಯಹಸ್ತವು ತನ್ನನ್ನಾಶ್ರಯಿಸಿ ಬಂದ ಯಾರಿಗಾದರೂ ಅಭಯವನ್ನು ನೀಡುವುದರ ಸಂಕೇತವಾಗಿದೆ. ವೀರಗಚ್ಚೆಯನ್ನಾಕಿ ಕುಳಿತಿರುವ ಚಾಮುಂಡೇಶ್ವರಿಯ ಎಡಪಾದವು ಬಲತೊಡೆಯ ಮೇಲೆ ಇಟ್ಟಂತೆಯು ಬಲಗಾಲು ಕೆಳಕ್ಕೆ ಇಳಿಬಿಟ್ಟಿದ್ದು ಕುಳಿತಿರುವ ಸಿಂಹದ ಹೊಟ್ಟೆಯನ್ನು ತಾಗಿದಂತಿದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕಾಳಮುದ್ದನ ದೊಡ್ಡಿಯ ದೇವಾಲಯವೊಂದಕ್ಕೆ ಮಾಡಿಕೊಟ್ಟಿರುವ ಈ ಪಂಚಲೋಹದ ವಿಗ್ರಹ ಅಲ್ಲಿರುವ ಮೆರೆಯುವ ವಿಗ್ರಹಗಳಿಗಿಂತ ಸುಂದರವಾಗಿದೆ. ಶಾಸ್ತ್ರೋಕ್ತವಾಗಿದೆ.

ಲಕ್ಷ್ಮಿ



ಲಕ್ಷ್ಮಿ
ಮಂಡ್ಯ.

ಲಕ್ಷ್ಮಿ

ಲಕ್ಷ್ಮಿ ಯಾರಿಗೆ ತಾನೇ ಬೇಕಿಲ್ಲ. ಹಣದ ಅಧಿದೇವತೆ ಲಕ್ಷ್ಮಿಯೆ ಆಗಿರುವುದರಿಂದ ಭಾರತೀಯರಲ್ಲಿ ಲಕ್ಷ್ಮೀ ಪೂಜೆಯು ಒಂದಲ್ಲಾ ಒಂದು ವಿಧದಲ್ಲಿ ನಡೆಯುತ್ತಲೇ ಇರುತ್ತದೆ. ಮುಖ್ಯವಾಗಿ ಆದಿಲಕ್ಷ್ಮಿ, ಗಜಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ವಿಜಯಲಕ್ಷ್ಮಿ, ಐಶ್ವರ್ಯಲಕ್ಷ್ಮಿ, ವೀರಲಕ್ಷ್ಮಿ, ಸಂತಾನಲಕ್ಷ್ಮಿ ಎಂದು ಎಂಟು ವಿಧದಲ್ಲಿ ಗುರುತಿಸಿ ಪೂಜಿಸುವ ಪರಿಪಾಠವಿದೆ. ಅದಕ್ಕಾಗಿಯೇ ಒಂದೊಂದು ದೇವತೆಯು ಹಿಡಿದ ಆಯುಧ, ಧರಿಸಿದ ಆಭರಣ, ಕುಳಿತ ಭಂಗಿ, ಮುಖಲಕ್ಷಣ, ಪೂಜಿಸುವ ಅವಶ್ಯಕತೆ ಕುರಿತಂತೆ ಶಾಸ್ತ್ರಸಂಹಿತೆ ರಚಿಸಿರುವುದನ್ನು ಅನೇಕ ಗ್ರಂಥಗಳಲ್ಲಿ ಕಾಣುತ್ತೇವೆ.

ವೆಂಕಟಾಚಾರ್ ಮಾಡಿರುವ ಲೋಹಶಿಲ್ಪ ಮೆರೆಯುವ ಮೂರ್ತಿಯಾದುದರಿಂದ ಪ್ರತಿಷ್ಠಾಪಿಸುವ ಅಥವಾ ಪೂಜಿಸುವ ವಿಧಿ ವಿಧಾನಗಳು, ಶಾಸ್ತ್ರಸಂಹಿತೆಯ ಚೌಕಟ್ಟಿನೊಳಗೆ ಬರುವುದಿಲ್ಲ. ವರ್ಷದಲ್ಲಿ ಒಂದೆರಡು ಬಾರಿ ಉತ್ಸವಗಳಲ್ಲಿ ಮೆರೆಯಿಸಿ, ನಂತರ ಒಂದೆಡೆ ಜೋಪಾನವಾಗಿಡುವ ಪದ್ಧತಿ ಇರುತ್ತದೆ. ಇಲ್ಲವೆ ಪ್ರಧಾನ ದೇವತೆಯ ಪೂಜಾ ಸಮಯದಲ್ಲಿ ಮಂಗಳಾರತಿ ಮಾಡುವ ಪರಿಪಾಠ ಕೆಲವು ಕಡೆ ಇರುತ್ತದೆ.

ವೆಂಕಟಾಚಾರ್ ಮಾಡಿರುವ ಈ ಲಕ್ಷ್ಮಿ ಶಿಲ್ಪ ನಾಲ್ಕು ಕೈಗಳನ್ನು ಹೊಂದಿದ್ದು, ಎರಡು ಕೈಗಳಲ್ಲಿ ಕಮಲದ ಹೂಗಳನ್ನು ಹೊಂದಿದೆ. ಇನ್ನೆರಡರಲ್ಲಿ ಅಭಯ ಮತ್ತು ವರದ ಹಸ್ತವನ್ನು ಹೊಂದಿದೆ. ಪದ್ಮಪೀಠದ ಮೇಲೆ ಕುಳಿತಂತೆ ಮಾಡಿರುವ ಎರಡು ಅಡಿ ಎತ್ತರದ ಈ ಶಿಲ್ಪದಲ್ಲಿ ಮುಖ ನೀಳವಾಗಿದ್ದು, ಕಮಾನಿನಂತೆ ಬಗ್ಗಿರುವ ಹುಬ್ಬುಗಳು, ನಾಸಿಕಕ್ಕೊಪ್ಪುವ ಮೂಗುತಿ, ಕಳಸದ ಸಹಿತವಾಗಿರುವ ಕಿರೀಟ, ಕರ್ಣಾಭರಣ, ಕೊರಳಾಭರಣ, ವೈಜಯಂತಿ ಮಾಲೆ, ವಿಶಾಲವಾದ ಜಘನ, ಕೃಶವಾದ ಸೊಂಟ, ಅದಕ್ಕೊಪ್ಪುವ ಕುಸುರಿ ಕೆಲಸವುಳ್ಳ ಆಭರಣಗಳು, ಆಕರ್ಷಿಸುವಂತೆ ನಕಾಶೆ ಕೆಲಸ ಮಾಡಿದ್ದಾರೆ. ಇದೊಂದು ಎರಕದ ಘನೀಕೃತವಾದ (Solid) ಮೂರ್ತಿಯಾಗಿದ್ದು, ತಳಕ್ಕೆ ಮರದ ಪೀಠವನ್ನು ಮಾಡಿ ಅದಕ್ಕೆ ರೇಖಿನ ಹೊದಿಕೆ (Sheet metal work) ಮಾಡಿದ್ದಾರೆ. ಈ ಪೀಠ ಬೋಳು ಬೋಳಾಗಿ ಕಾಣದಿರಲು ಪ್ರತ್ಯೇಕವಾದ ಹಂಸವೊಂದನ್ನು ಎರಕದಲ್ಲಿ ಮಾಡಿ ಅದನ್ನು ಬೆಸೆದಿದ್ದಾರೆ. ಹಾಗಾಗಿ ಲಕ್ಷ್ಮಿಯು ಕುಳಿತಿರುವ ಪದ್ಮಪೀಠದ ಅಡಿಯಲ್ಲಿ ಹಂಸವು ಆಕರ್ಷಣೀಯವಾಗಿ ತೋರುತ್ತದೆ. ತಾಳಮಾನಕ್ಕನುಗುಣವಾದ ಶರೀರ ರಚನೆ. ಆಕರ್ಷಣೆಯಾಗಿ ಕಾಣಲು ಕುಸುರಿ ಕೆಲಸಗಳುಳ್ಳ ಈ ಮೂರ್ತಿಯನ್ನು ಮಂಡ್ಯ ಜಿಲ್ಲೆಗೆ ಮಾಡಿಕೊಟ್ಟಿದ್ದಾರೆ.

ಲಿಂಗಗಳಿಗೆ ಕೊಳಗ

ಲಿಂಗಗಳಿಗೆ ಕೊಳಗ ಮಾಡುವುದು ಸುಲಭದ ಕೆಲಸ. ನಿರ್ದಿಷ್ಟವಾದ ತದ್ರೂಪ ತರುವ ಅವಶ್ಯಕತೆ ಇರುವುದಿಲ್ಲ. ಶಿಲ್ಪಿಗೆ ಸ್ವಾತಂತ್ರ್ಯವಿರುತ್ತದೆ. ಕೊಳಗ ಮಾಡುವ ಮುನ್ನ ಗ್ರಾಹಕನ ಅಭಿಪ್ರಾಯ ಸಂಗ್ರಹ ಅತ್ಯಾವಶ್ಯಕ. ಕೆಲವರು ಶಿವನ ಮುಖದಲ್ಲಿ ಮೀಸೆ ರಹಿತವಾಗಿ ಸೌಮ್ಯವಾಗಿರಬೇಕೆಂದು ಬಯಸಿದರೆ, ಮತ್ತೆ ಕೆಲವರು ಮೀಸೆ ಪುರುಷ ಸಂಕೇತ, ಶಿವನು ಜಟಾಧಾರಿಯಾಗಿರುವಂತೆ ಮೀಸೆ ಸಹಿತವಾಗಿರುವುದೇ ಆಗಬೇಕೆಂದು ಬಯಸುವವರು ಉಂಟು. ಈ ವಿಷಯಗಳನ್ನು ಮನನಿಸಿಕೊಂಡು ಗೋಲಾಕಾರವಾಗಿರುವ ಲಿಂಗದ ಎತ್ತರ ಮತ್ತು ದಪ್ಪಗಳ ಅಳತೆ ತೆಗೆದುಕೊಂಡು ಕೆಲಸ ಆರಂಭಿಸಬೇಕು. ಇದರಲ್ಲಿ ಎರಡು ಕ್ರಮಗಳುಂಟು. ಒಂದೇ ತಗಡಿನಲ್ಲಿ ಕೊಳಗದ ರೂಪ ತರುವುದು, ಇಲ್ಲವೇ ಮುಂಬದಿ ಹಿಂಬದಿಗಳನ್ನು ಪ್ರತ್ಯೇಕವಾಗಿ ಮಾಡಿಕೊಂಡು ಬೆಸೆಯುವುದು.

ವೆಂಕಟಾಚಾರ್ ಮಾಡಿರುವುದು ಒಂದೇ ರೇಖಿನಲ್ಲಿ . ಸಾಮಾನ್ಯವಾಗಿ ಹೆಚ್ಚಿನ ಅನುಭವವುಳ್ಳವರು ಮಾತ್ರ ಈ ತೆರನಾಗಿ ಮಾಡುತ್ತಾರೆ. ಶಿಖೆಯ ಮೇಲೆ ಗಂಗೆ ಇರುವಂತೆ ಮಾಡಿರುವುದು ಇದರ ಒಂದು ವಿಶೇಷ. ಕೊರಳು ಬಳಸಿದಂತೆ ಬಂದಿರುವ ಸರ್ಪದ ಆಕಾರವು ಕಂಠಕ್ಕೆ ಅಂಟಿಕೊಂಡಂತೆ ಇದ್ದರೂ ಅದನ್ನು ಪ್ರತ್ಯೇಕವಾಗಿಯೇ ಮಾಡಿದ್ದಾರೆ. ಈ ಸರ್ಪನ



ಏಳು ಹೆಡೆಗಳು ಶಿಖೆಯ ಮೇಲೆ ಸುಮಾರು ಅರ್ಧ ಅಡಿ ಎತ್ತರದಲ್ಲಿದ್ದು ಲಿಂಗದ ಸುತ್ತಳತೆಗಿಂತ ತುಸು ಅಗಲವಾಗಿಯೇ ಇದೆ. ಇದನ್ನೇ ನಾಗಾಭರಣ ಎಂದು ಸಹ ಕರೆಯುತ್ತಾರೆ. ಮೂಲ ಕಲ್ಲಿನ ಲಿಂಗದ ಅಗ್ರಭಾಗ ಗೋಲಾಕಾರವಾಗಿರುತ್ತದೆ. ಅದಕ್ಕೆ ಕೊಳಗ ಮಾಡುವಾಗ ಮನುಷ್ಯ ರೂಪ ಬಂದುಬಿಡುತ್ತದೆ. ಹಣೆಯ ಮೇಲಿನ ವಿಭೂತಿ ಕಾಣುವಂತಾಗಲು ರೇಖೆಗಳನ್ನು ಕಟ್ಟಿ ಎನಾಮೆಲ್ ಬಿಳಿ ಬಣ್ಣ ಹಚ್ಚುತ್ತಾರೆ. ಆದರೆ ಅದು ಪ್ರತಿನಿತ್ಯ ಅಭಿಷೇಕ ಮಾಡುವಾಗ ಬಣ್ಣ ಮಸಕಾಗುವ ಸಂದರ್ಭವೇ ಹೆಚ್ಚು, ಆದ್ದರಿಂದ ಬೆಳ್ಳಿಯ ವಿಭೂತಿ ಗೆರೆಗಳನ್ನು ಮಾಡಿಸಿ ಹಿತ್ತಾಳೆ ಕೊಳಗದ ಮೇಲೆ ಅಂಟಿಸುವಂತೆ ಮಾಡಿರುತ್ತಾರೆ. ಲಿಂಗದ ಪೀಠದ ಭಾಗಕ್ಕೆ ಪೂರ್ಣವಾಗಿ ರೇಖಿನ ಹೊದಿಕೆ ಹಾಕಿರುವುದಿಲ್ಲ. ಅದರ ಬದಲಾಗಿ ಹೊರಗಿನಿಂದ ನೋಡುವ ಭಕ್ತರಿಗೆ ಕಾಣುವಂತೆ ಲಿಂಗದ ಹೊರಮೈಗೆ ಮಾತ್ರ ನಕಾಶೆಯುಳ್ಳ ರೇಖನ್ನು ಅಳವಡಿಸಿದ್ದಾರೆ. ಲಿಂಗದ ಹಿಂಬದಿಯಲ್ಲಿರುವ ಪ್ರಭಾವಳಿ ಒಂದೇ ಎಂದು ಕಂಡುಬಂದರೂ ಅದರಲ್ಲಿ ಐದು ಭಾಗಗಳಿವೆ. ಕಂಬದಂತಿರುವ ೨ ಭಾಗ, ಅರೆವೃತ್ತಾಕಾರವಾಗಿರುವ ಪ್ರಭಾವಳಿ ೨ ಭಾಗ, ಇವಕ್ಕೆಲ್ಲಾ ಹೊಂದಿಕೊಂಡಂತೆ ಮಾಡಿರುವ ವ್ಯಾಘ್ರವ್ಯಾಳಿ ಶಿರೋಭಾಗವನ್ನು ಆವರಿಸಿದೆ. ಇದು ನಾಗಾಭರಣಕ್ಕಿಂತ ತುಸು ಎತ್ತರವಿದ್ದಂತೆ ಮಾಡಿದ್ದಾರೆ. ಸುಮಾರು ೭ ಅಡಿ ಎತ್ತರವಿರುವ ಪ್ರಭಾವಳಿ, ಲಿಂಗ, ಕೊಳಗ ಕೊಳ್ಳೆಗಾಲದ ಮಹದೇಶ್ವರ ಬೆಟ್ಟದಲ್ಲಿ ಪೂಜಾಸ್ಥಾನವನ್ನಲಂಕರಿಸಿದೆ.

ಪತ್ನಿಯರೊಡನೆ ಮಹಾವಿಷ್ಣು

ಶ್ರೀಮನ್ನಾರಾಯಣನು ತನ್ನ ಪತ್ನಿಯರಾದ ಲಕ್ಷ್ಮಿ ಮತ್ತು ಭೂದೇವಿಯರೊಡನೆ ನಿಂತಿರುವ ವಿಗ್ರಹಗಳು. ಅದರ ಹಿಂಭಾಗದಲ್ಲಿ ಶಂಖ ಚಕ್ರ ಲಾಂಛನವುಳ್ಳ ಪ್ರಭಾವಳಿಯನ್ನು ಮೈಸೂರಿನ ಸತ್ಯನಾರಾಯಣಸ್ವಾಮಿ ದೇವಾಲಯವೊಂದಕ್ಕೆ ಮಾಡಿಕೊಟ್ಟಿದ್ದಾರೆ. ವಿಷ್ಣು ಲಕ್ಷ್ಮಿ, ಭೂದೇವಿ, ಈ ಮೂರು ವಿಗ್ರಹಗಳು ಪ್ರತ್ಯೇಕವಾದ ಎರಕದವುಗಳಾಗಿದ್ದು ನಿಂತ ಭಂಗಿಯಲ್ಲಿವೆ. ವಿಷ್ಣುವಿಗೆ ಮಾತ್ರ ನಾಲ್ಕು ಕೈಗಳು ಇದ್ದು ಶಂಖ, ಚಕ್ರ, ಗದೆಗಳನ್ನು ಹಿಡಿದಿದ್ದರೆ ಬಲ ಹಸ್ತವೊಂದು ಅಭಯದ ಮುದ್ರೆಯಲ್ಲಿದೆ. ವಿಷ್ಣುವಿನ ಬಲಕ್ಕೆ ನಿಂತಿರುವ ಲಕ್ಷ್ಮಿಯ ವಿಗ್ರಹವಿದ್ದು ತ್ರಿಭಂಗಲಕ್ಷಣದಿಂದ ಕೂಡಿದೆ. ಎಡಗಾಲು ಮುಂಚಾಚಿದೆ. ದ್ವಿಭುಜಗಳುಳ್ಳ ಈ ಮೂರ್ತಿಯು ಎಡ ಹಸ್ತದಲ್ಲಿ ಕಮಲವನ್ನು ಹಿಡಿದಿದ್ದರೆ ಬಲಹಸ್ತವು ವಿಶೇಷ ಭಂಗಿಯಲ್ಲಿ ಬೆರಳುಗಳ ವಿನ್ಯಾಸ ತೋರಿಸುತ್ತದೆ. ಹಾಗೆಯೇ ವಿಷ್ಣುವಿನ ಎಡಗಡೆ ಇರುವ ಭೂದೇವಿಯ ಬಲಹಸ್ತ ಕಮಲದ ಹೂವನ್ನು ಹಿಡಿದಿದ್ದರೆ, ಎಡಹಸ್ತವು ಸೊಂಟದಿಂದ ಕೆಳಕ್ಕೆ ಇಳಿ ಬಿಟ್ಟಂತಿದ್ದು ಸಸಿಯನ್ನು ಹಿಡಿದಂತಿದೆ. ತ್ರಿಭಂಗಲಕ್ಷಣದಿಂದಿರುವ ಈ ಲಕ್ಷ್ಮಿ ಭೂದೇವಿಯರು ನೋಡಲಿಕ್ಕೆ ಒಂದೇ ತೆರನಾಗಿದ್ದರೂ ಮುಖದ ವರ್ಚಸ್ಸು ನಿಂತ ನಿಲುವುಗಳಲ್ಲಿ ಕೊಂಚ ಭಿನ್ನತೆ ಇದೆ. ಉಳಿದಂತೆ ವಿಷ್ಣು ಮತ್ತು ಪತ್ನಿಯರ ರೂಪಗಳಲ್ಲಿ ಮತ್ತು ಧರಿಸಿದ ಆಭರಣಗಳೆಲ್ಲಾ ಒಂದೇ ತೆರನಾಗಿವೆ. ದೈಹಿಕ ರಚನೆಯಲ್ಲಿ ಮಾತ್ರ ವಿಷ್ಣುವಿನ ವಕ್ಷಸ್ಥಳ ವಿಶಾಲವಾಗಿ ಬಲಿಷ್ಠ ಪುರುಷ ತೇಜಸ್ಸು, ಕಂಡರೆ ಸ್ತ್ರೀ ವಿಗ್ರಹಗಳಲ್ಲಿ ಕಿರಿದಾದ ಸೊಂಟ, ಉಬ್ಬಿದ ಸ್ತನದ್ವಯಗಳನ್ನು, ಉಡುಗೆಯಲ್ಲಿ ಕೊಂಚ ವ್ಯತ್ಯಾಸವನ್ನು , ಮುಖದಲ್ಲಿ ಮಂದಸ್ಮಿತವನ್ನು ಕಾಣಬಹುದು.

ಈ ಮೂರು ವಿಗ್ರಹಗಳಿಗೂ ಕಮಲದ ದುಂಡನೆಯ ಪೀಠವಿದ್ದು , ಅದರ ತಳದಲ್ಲಿ ಚೌಕಾಕಾರದ ಮರದ ಪೆಟ್ಟಿಗೆಗೆ ನಕಾಶೆಮಾಡಿದ ರೇಖುಗಳನ್ನು ಅಳವಡಿಸಿ ಒಂದೇ ಎರಕದ ವಿಗ್ರಹದಂತೆ ಕಾಣುವಂತೆ ಮಾಡಿದ್ದಾರೆ. ಈ ಮೂರು ವಿಗ್ರಹಗಳನ್ನು ಮರದ ಮಣೆಗೆ ತಿರುವು ಮೊಳೆಗಳಿಂದ (Screw) ಬಂಧಿಸಿರುವುದರಿಂದ ಉತ್ಸವದ ಸಂದರ್ಭದಲ್ಲಾಗಲಿ, ಅಥವಾ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವ ಸಂದರ್ಭದಲ್ಲಾಗಲಿ, ಅದಲು-ಬದಲಾಗದಂತೆ ಮತ್ತು ಒಂದು ವಿಗ್ರಹದಿಂದ ಮತ್ತೊಂದಕ್ಕೆ ದೂರ ಸಮೀಪಗಳ ವ್ಯತ್ಯಯ ಆಗದಂತೆ ಕಾಪಾಡಿಕೊಳ್ಳಲು ಸಹಾಯಕವಾಗುತ್ತದೆ.

ಹಿಂಬದಿಯಲ್ಲಿ ಮಾಡಿರುವ ಪ್ರಭಾವಳಿಯು ನಾಲ್ಕುಸುತ್ತಿನ ಕುಸುರಿ ಕೆಲಸದಿಂದ ಕೂಡಿದ್ದು ಶಂಖ ಮತ್ತು ಚಕ್ರಗಳನ್ನು ಎಡಬಲಗಳಲ್ಲಿ ಅಳವಡಿಸಿದ್ದಾರೆ. ಪ್ರಭಾವಳಿಯ ಎರಡು ಪಾರ್ಶ್ವಗಳು ಸೇರುವ ಊರ್ಧ್ವ ಭಾಗದಲ್ಲಿ ವ್ಯಾಘ್ರಮುಖವನ್ನು ನಕಾಶೆಮಾಡಿ ಪ್ರಭಾವಳಿಯ ಸೌಂದರ್ಯವನ್ನು ಹೆಚ್ಚಿಸಿದ್ದಾರೆ. ವೆಂಕಟಾಚಾರ್ ಅವರು ಈ ಸೆಟ್ ಮಾಡಿ ಕೊಡಲು ಹಲವಾರು ತಿಂಗಳೇ ಕಳೆದರೂ ಕೆಲಸ ಮಾತ್ರ ಶುದ್ಧವಾಗಿ ಮಾಡಿದ್ದಾರೆ.

ಅಯ್ಯಪ್ಪಸ್ವಾಮಿ

ಅಯ್ಯಪ್ಪಸ್ವಾಮಿ ಎಂಬುದು ಈಗ ಪ್ರಚಲಿತದಲ್ಲಿರುವ ಜನಬಳಕೆಯ ಪದ. ಆದರೆ ಶಾಸ್ತ್ರೋಕ್ತವಾಗಿ ಅದನ್ನು ಶಾಸ್ತ ಎಂದು ಕರೆಯುತ್ತಾರೆ. ಹರಿ ಮತ್ತು ಹರನ ಮೋಹದ ಕತೆಗಳೇ ಪುರಾಣ ರೂಪದಲ್ಲಿ ಹೊರಹೊಮ್ಮಿ, ಕಾಲಾನಂತರದಲ್ಲಿ ಅದಕ್ಕೊಂದು ಶಾಸ್ತ್ರದ ಚೌಕಟ್ಟು ನೀಡಿ, ಅದನ್ನು ದೃಶ್ಯಮಾಧ್ಯಮದಲ್ಲಿ ಅಳವಡಿಸುವ ಕೆಲಸ ಪ್ರಾರಂಭವಾದಾಗಿನಿಂದ ಅಯ್ಯಪ್ಪಸ್ವಾಮಿ ಇಂದು ನಾನಾ ರೂಪದಲ್ಲಿ ವಿಜೃಂಭಿಸುತ್ತಿದ್ದಾನೆ. ಹೆಚ್ಚಾಗಿ ತಮಿಳು ಭಾಷಾ ಜನ ಆರಾಧಿಸುವ ದೇವರಾಗಿದೆ. ಮಕರ ಸಂಕ್ರಾಂತಿಯ ಕಾಲದಲ್ಲಿ ಈ ದೇವರ ಪೂಜೆ ; ಶಬರಿ ಮಲೆಗೆ ಹೋಗುವ ಭಕ್ತರ ಸಮೂಹ ಅತಿ ದೊಡ್ಡದು. ಅದೇನೇ ಇರಲಿ, ಚಿತ್ರ ಮತ್ತು ಶಿಲ್ಪ ಮಾಧ್ಯಮಗಳಲ್ಲಿ ಮಾಡುವಾಗ ಎರಡು ಮುಖ್ಯ ಕ್ರಮ ಅನುಸರಿಸುತ್ತಾರೆ.

ಮೊದಲನೆಯದು, ಮಂಡಿಗಳ ತಳದ ಕಾಲಿನ ಭಾಗ ಕತ್ತರಿಯಾಕಾರದಲ್ಲಿ ಮಡಚಿದ್ದು ದೇಹದ ತಳಭಾಗ ಮತ್ತು ಕತ್ತರಿಯಾಕಾರದ ಪಾದಗಳು ಒಂದೇ ಪೀಠದಲ್ಲಿರುತ್ತವೆ. ಮತ್ತೊಂದು ವಿಧಾನದಲ್ಲಿ, ಯೋಗಾಸನದಲ್ಲಿ ಕುಳಿತ ಆತನ ಎರಡು ಪಾದಗಳು ಪೀಠದ ಮೇಲೆಯೇ ಇರುತ್ತವೆ (ಸಾಮಾನ್ಯ ಜನ ಬಳಕೆಯ ಭಾಷೆಯಲ್ಲಿ ಹೇಳುವುದಾದರೆ ಕುಕ್ಕರಗಾಲಿನಲ್ಲಿ ಕೂರುವುದು ಎನ್ನುತ್ತಾರೆ). ಮೊಣಕಾಲುಗಳ ಬಳಿ ಯೋಗಪಟ್ಟವಿರುತ್ತದೆ. ಬಲಹಸ್ತ ಅಭಯ ಮುದ್ರೆಯಾದರೆ, ಎಡಮಂಡಿಗೆ ಊರಿದ ಹಸ್ತವು ಕೆಳಕ್ಕೆ ತೂಗಿ ಬಿದ್ದಿರುವಂತೆ ತೋರುವ ದಂಡಮುದ್ರೆಯಾಗಿರುತ್ತದೆ.

ಇದೇ ಕ್ರಮವನ್ನು ಅನುಸರಿಸಿ ವೆಂಕಟಾಚಾರ್ ಅವರು ಎರಡು ಅಡಿ ಎತ್ತರದ ಕಂಚಿನ ಶಿಲ್ಪವನ್ನು ಮಡಿಕೇರಿಗೆ (ಕೊಡಗು) ಮಾಡಿಕೊಟ್ಟಿದ್ದಾರೆ. ಇದರಲ್ಲಿ ನಾವು ಕಾಣುವ ತಂತ್ರ (Technique) ವೆಂದರೆ ಇದು ಪೂರ್ಣ ಪ್ರಮಾಣದ ಎರಕದ ಶಿಲ್ಪ (Solid). ನೀಟಾಗಿರುವ ದೇಹ, ಎದ್ದು ಕಾಣುವ ವಕ್ಷಸ್ಥಳ. ನೀಳಮೂಗಿನ ಮೊಟ್ಟೆಯಾಕಾರದ ಮುಖ. ಹಸನ್ಮುಖಿಯಾದ ವರ್ಚಸ್ಸು, ಅರೆನಿಮೀಲಿತವಾದ ಕಣ್ಣು, ಹಣೆಯಲ್ಲಿ ಮೂರನೇ ಕಣ್ಣು. ಅದಕ್ಕೊಪ್ಪುವ ಮುಖದ ಉದ್ದಕ್ಕಿಂತ ಒಂದುವರೆ ಪಟ್ಟು ಎತ್ತರದ ಕಳಸವಿರುವ ಕಿರೀಟ. ತಲೆಯ ಹಿಂದೆ ಕಿರು ಪ್ರಭಾವಳಿ, ಭುಜದ ಮೇಲೆ ಆಶ್ರಯ ಪಡೆದಂತೆ ತೋರುವ, ಕರ್ಣಗಳ ಭಾಗದಿಂದ ಇಳಿಬಿದ್ದ ಮಕರಾಭರಣ, ಕುಸರಿ ಕೆಲಸವುಳ್ಳ ಆಭರಣಗಳು, ಜೊತೆಗೆ ಹೂಮಾಲೆಯೊಂದು ಕೊರಳು ಬಳಸಿ ವಕ್ಷ ಸ್ಥಳದ ಎಡಬಲಗಳಲ್ಲಿ ಇಳಿ ಬಿದ್ದು ಇಡೀ ಶಿಲ್ಪಕ್ಕೆ ಶೋಭೆಯನ್ನು ತಂದಿದೆ. ಶಾಸ್ತನು ಕುಳಿತಿರುವ ವೃತ್ತಾಕಾರವಾಗಿರುವ ಪೀಠವನ್ನು ಸಹ ಕಮಲದ ಚಿತ್ತಾರಗಳಿಂದ ಶೋಭಿಸುವಂತೆ ನಕಾಸೆ ಕೆಲಸ ಮಾಡಿದ್ದಾರೆ. ೧೯೭೮-೭೯ರಲ್ಲಿ ಮಾಡಿದ ಈ ಕಂಚಿನ ಪ್ರತಿಮೆ ಉತ್ಸವಮೂರ್ತಿಯಾಗಿ ಎಲ್ಲರ ಮನಸ್ಸನ್ನು ಗೆದ್ದಿದೆ.

ದೇವರುಗಳಿಗೆ ವಾಹನ

ಈಗ ನಾವುಗಳಾದರೂ – ಸೈಕಲ್, ಸ್ಕೂಟರ್, ಆಟೋ, ಕಾರು, ಬಸ್, ವಿಮಾನ ಮುಂತಾದ ವಾಹನಗಳಲ್ಲಿ ಒಂದೆಡೆಯಿಂದ ಮತ್ತೊಂದೆಡೆಗೆ ಸಂಚರಿಸುತ್ತೇವೆ. ಈ ಹಿಂದೆ ದೇವತಾ ವಿಚಾರ ಬಂದಾಗ ದೇವರನ್ನು ಹೊರುವಂತಹ ಮಯೂರವಾಹನ, ಹಂಸವಾಹನ, ಗರುಡವಾಹನ, ಹನುಮವಾಹನ ನೆಲದ ಮೇಲೆ ಸಂಚರಿಸುವ ಗಜವಾಹನ, ನಂದಿವಾಹನ, ವೃಷಭವಾಹನ, ಮೂಷಕವಾಹನ, ಸಿಂಹವಾಹನ, ಇತ್ಯಾದಿಗಳು ಮುಖ್ಯವೆನಿಸುತ್ತವೆ.

ಇವೆಲ್ಲವೂ ಇಂದು ಜಾತ್ರೆ ಅಥವಾ ಉತ್ಸವದ ಸಂದರ್ಭದಲ್ಲಿ ಅತಿ ಮುಖ್ಯವೆನಿಸುವುದರಿಂದ ಆಯಾಯ ದೇವರುಗಳಿಗನುಗುಣವಾಗಿ ವಾಹನಗಳನ್ನು ಮಾಡಿಸುತ್ತಾರೆ. ಈ ವಾಹನಗಳು ಮೆರೆಯುವ ಮೂರ್ತಿಗಳಿಗಿಂತ ದೊಡ್ಡ ಪ್ರಮಾಣದಲ್ಲಿರುತ್ತವೆ. ನಮ್ಮನ್ನು ಹೊರುವ ಕಾರ್ ಆಗಲಿ, ಬಸ್ ಆಗಲಿ, ನಮಗಿಂತ ದೊಡ್ಡದೇ ಇರುತ್ತದಲ್ಲವೇ ಹಾಗೆ, ಆದರೆ ಕೆಲವು ದೇವತಾವಾಹನಗಳಿಗೆ ಈ ಸೂತ್ರ ಅನ್ವಯಿಸುವುದಿಲ್ಲ. ಉದಾಹರಣೆಗೆ ಗಣಪತಿ. ಗಣಪತಿಯ ಗಾತ್ರಕ್ಕೂ ವಾಹನವಾದ ಇಲಿಯ ಗಾತ್ರಕ್ಕೂ ಹೊಂದಾಣಿಕೆಯೇ ಇಲ್ಲ.

ಪುರಾಣಗಳೆಲ್ಲವೂ ಕಲ್ಪಿತವಾದುವುಗಳಾದ್ದರಿಂದ ವಾಸ್ತವತೆ ಇರುವುದಿಲ್ಲ. ಮಕ್ಕಿಕಾಮಕ್ಕಿ ಅಂದರೆ ನಮ್ಮ ಪೂರ್ವಿಕರು ಏನು ಮಾಡಿದ್ದರೋ ಅದನ್ನೇ ಕೊಂಚ ಅಳತೆ, ರೂಪಗಳಲ್ಲಿ ಮಾತ್ರ ವ್ಯತ್ಯಯ ಮಾಡಿಕೊಂಡು ಉಳಿದಂತೆ ಪುರಾಣದ ಆಶಯಗಳಿಗನುಗುಣವಾಗಿ ಚಿತ್ರವನ್ನಾಗಲೀ, ಶಿಲ್ಪವನ್ನಾಗಲೀ ಮಾಡುವ ಪರಿಪಾಠ ನಮ್ಮದು.

ಮೆರೆಯುವ ಮೂರ್ತಿಗಳನ್ನು ಸಣ್ಣ ಪ್ರಮಾಣದಲ್ಲಿ ಒಂದೇ ಎರಕದಿಂದ (Solid) ಮಾಡಿ ವಾಹನಗಳನ್ನು ಮಾತ್ರ ತಗಡಿನಿಂದ ಮಾಡಿರುತ್ತಾರೆ. ಇಲ್ಲಿಯೂ ಮೆರವಣಿಗೆ ಮಾಡದಂತಹ ಶಿಲಾಮೂರ್ತಿಗಳನ್ನು ಮಾಡುವಾಗ, ಅವರವರ ವಾಹನಗಳನ್ನು ಆಯಾಯ ದೇವರುಗಳ ಪೀಠದ ಭಾಗದಲ್ಲಿ ಸಾಂಕೇತಿಕವಾಗಿ ಕೆತ್ತಿರುತ್ತಾರೆ. ಲೋಹದ ವಿಗ್ರಹಗಳಲ್ಲಿ ಸಹ ಇದೇ ಕ್ರಮ ಅನುಸರಿಸುತ್ತಾರೆ.

ಪ್ರಭಾವಳಿಗಳನ್ನು ಮಾಡುವ ಸಂದರ್ಭದಲ್ಲಿ ಸಹ ವಿಷ್ಣುಪಾರಮ್ಯದ ವಿಗ್ರಹಗಳಿಗೆ ಹಂಸವ್ಯಾಳಿ, ಶಿವಪಾರಮ್ಯದ ಮೂರ್ತಿಗಳಿಗೆ ಮಕರ ವ್ಯಾಳಿಯನ್ನು, ಶಿವ, ವಿಷ್ಣು ಪಾರಮ್ಯಗಳೆರಡಕ್ಕೂ ಸಿಂಹವ್ಯಾಳಿಯನ್ನು ಮಾಡುವುದು ಪರಂಪರೆಯಿಂದ ನಡೆದುಕೊಂಡು ಬಂದ ದಾರಿ.

ಗರುಡವಾಹನ

ದೇವರ ವಾಹನಗಳಲ್ಲೆಲ್ಲಾ ಗರುಡವಾಹನ ಅತಿ ವಿಶಿಷ್ಟವಾದದ್ದು. ಪುರಾಣಗಳಲ್ಲಿ ಗರುಡನ ಕತೆ ಬೆಳೆದಿರುವುದೇ ಹಾಗೆ. ಗರುಡನು ಸ್ವರ್ಗದಿಂದ ಅಮೃತ ಹೊತ್ತು ತಂದವನೆಂದು, ವಿಷ್ಣುವಿನಿಂದ ವರ ಪಡೆದು ಅವನ ವಾಹನವಾದವನೆಂದು, ತದನಂತರದಲ್ಲಿ ವಿಷ್ಣುವನ್ನೇ ಹೊರುವಷ್ಟು ಶಕ್ತಿವಂತ ತಾನಾಗಿರುವುದರಿಂದ ಆ ಮಹಾವಿಷ್ಣುವಿಗಿಂತ ಬಲಶಾಲಿ ತಾನೇ ಎಂದು ಅಹಂ ಪಟ್ಟನೆಂದೂ, ತದನಂತರದಲ್ಲಿ ವಿಷ್ಣುವಿನ ಗಮನಕ್ಕೆ ಇವನ ಅಹಂಕಾರ ತಿಳಿದುಬಂದು ಅದನ್ನು ತಗ್ಗಿಸುವಂತೆ ಮಾಡಿದನೆಂದೂ, ಜೊತೆಗೆ ನಾಗಗಳ ಅರ್ಥಾತ್ ಸರ್ಪಗಳ ಸಂಬಂಧ ಕುರಿತಂತೆ ಕಲ್ಪಿತ ಪುರಾಣಗಳು ಹೇರಳವಾಗಿವೆ.

ಗರುಡನನ್ನು ಮಾಡುವಲ್ಲಿ ಸತ್ಯ, ಸುಪರ್ಣ, ಗರುಡ, ತಾರ್ಕ್ಯ, ವಿಹಗೇಶ್ವರ ಎಂಬ ಐದು ಪ್ರಭೇದಗಳಿದ್ದರೂ, ಒಟ್ಟಾರೆ ವಾಹನವನ್ನಾಗಲಿ, ವಿಗ್ರಹವನ್ನಾಗಲಿ, ಮಾಡುವಾಗ ಗರುಡ ಪಕ್ಷಿಯಂತಹ ಶರೀರ, ಮನುಷ್ಯನಂತೆ ಇತರ ಇಂದ್ರಿಯಗಳು ಇರಬೇಕು. ಅರ್ಧ ಮಾನವ, ಅರ್ಧ ಪಕ್ಷಿಯಂತಹ ಗರುಡ, ವಿಷ್ಣುದೇವಾಲಯವಿದ್ದೆಡೆ ವಾಹನರೂಪದಲ್ಲಾಗಲೀ, ಧ್ವಜಸ್ತಂಭದಲ್ಲಾಗಲೀ ಇರಲೇಬೇಕು (ಶಿವದೇವಾಲಯದಲ್ಲಿ ನಂದಿಯಿದ್ದಂತೆ). ವಿಷ್ಣುದೇವಾಲಯದಲ್ಲಿ ಅತ್ಯಾವಶ್ಯಕವಾಗಿರುವ ಈ ಗರುಡನ ಮುಖದಲ್ಲಿ ಕೋರೆಯ ಹಲ್ಲಿಲ್ಲ, ಕೊಕ್ಕಿನಂತಹ ಮೂಗು, ಉಬ್ಬಿದ ಹಣೆಯಲ್ಲಿ ಗಂಟುಹಾಕಿದ ಹುಬ್ಬು, ಗುಂಡಾಗಿರುವ ಕಣ್ಣುಗಳು, ಬೆನ್ನ ಹಿಂಬದಿಯಲ್ಲಿ ಎರಡು ರೆಕ್ಕೆಗಳು, ಪಾದಗಳಲ್ಲಿ ಉದ್ದವಾದ ನಖಗಳು, ಆಭರಣ ಧರಿಸಿರುವ ದೇಹದೆಲ್ಲೆಡೆಯಲ್ಲಿಯೂ ನಾಗಾಭರಣ, ಅಂದರೆ ಹಾವುಗಳನ್ನೇ ಆಭರಣಗಳಂತೆ ಧರಿಸಿರುವುದು, ಕೊರಳಿನಲ್ಲಿ ಚೇಳುಗಳ ಹಾರ, ಕಿವಿಯಲ್ಲಿ ಸರ್ಪಕುಂಡಲ ಇವುಗಳನ್ನೊಳಗೊಂಡು, ಬಲಗಾಲಿನ ಮಂಡಿಯನ್ನು ನೆಲಕ್ಕೂರಿ, ಮತ್ತೊಂದು ಎಡಗಾಲಿನ ಮಡಚಿದ ಮಂಡಿಯನ್ನು ಮುಂಚಾಚಿ ಅದರ ಪಾದವನ್ನು ನೆಲಕ್ಕೂರಿ, ಎದೆ ಸೆಟೆಸಿ ನಿಂತು, ವಿಷ್ಣುವನ್ನು ಹೊರಲು ಸಿದ್ಧವಾಗಿದೆಯೇನೋ ಎಂಬಂತೆ ಹಸ್ತಗಳನ್ನು ಮುಂಚಾಚಿ ಮೇಲ್ಮೊಗ ಮಾಡಿ ತೋರುವುದು ಇದರ ವಿಶೇಷ.



ಕಂಚಿನ ಗರುಡವಾಹನ, ಕೋಟೆಬೆಟ್ಟ - ನಾಗಮಂಗಲ ತಾ. ಮಂಡ್ಯ ಜಿಲ್ಲೆ.

ವೆಂಕಟಾಚಾರ್ ಅವರು ಈ ಗರುಡವಾಹನವನ್ನು ಇಡಿಯಾಗಿ ಮಾಡದೇ ಬಿಡಿ ಬಿಡಿಯಾಗಿ ಅಂದರೆ, ತಲೆ, ಎದೆ, ಹೊಟ್ಟೆ ಕೈ ಕಾಲುಗಳು, ಹಿಂಬದಿಯ ರೆಕ್ಕೆ ಹೀಗೆ ಒಂದೊಂದನ್ನು ಪ್ರತ್ಯೇಕವಾಗಿ ತಗಡಿನಲ್ಲಿ ಮಾಡಿ ರಿವಿಟ್ ಮಾಡಿದ್ದಾರೆ. ಗಟ್ಟಿಯಾಗಿ ನಿಲ್ಲಲು ಅಲ್ಲಲ್ಲಿ ಮರದ ತುಂಡುಗಳನ್ನು ಅಳವಡಿಸಿ ವಿಗ್ರಹಕ್ಕೊಂದು ದೃಢತೆ ತಂದಿದ್ದಾರೆ. ಸುಮಾರು ೪ ಅಡಿ ಎತ್ತರದ ಕಂಚಿನ ಈ ಗರುಡವಾಹನವನ್ನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕೋಟೆಬೆಟ್ಟ ಎಂಬಲ್ಲಿಗೆ ಮಾಡಿಕೊಟ್ಟಿದ್ದಾರೆ.

ಆಂಜನೇಯ ವಾಹನ



4 ½ ಅಡಿ
ಕಂಚಿನ ಆಂಜನೇಯ ವಾಹನ
ಬನ್ನೂರು, ರಾಮಮಂದಿರ

ಗರುಡವಾಹನದ ರೀತಿಯೇ ಮಾಡಬಹುದಾದದ್ದು. ಮುಖ ಮಾತ್ರ ಆಂಜನೇಯ ಅರ್ಥಾತ್ ಕೋತಿಯಂತೆ. ಉಳಿದಂತೆ ಶರೀರದ ಎಲ್ಲಾ ಭಾಗವನ್ನು ಮನುಷ್ಯನಂತೆಯೇ ಮಾಡುವಂತಹದ್ದು. ವಿಗ್ರಹ ಮಾಡುವಾಗ ನಾವು ಗಮನಿಸಬೇಕಾದ ಅಂಶವೆಂದರೆ ಹನುಮನನ್ನು ಎಲ್ಲೆಲ್ಲಿ ಬಳಸುತ್ತಾರೆ, ಅದರ ಮೂಲವೇನು ಎಂಬುದನ್ನು ತಿಳಿದು ಮಾಡುವುದು ಅವಶ್ಯ. ಹಾಗಿಲ್ಲದೇ ಮಾಡಿದರೆ ಅದೊಂದು ನಿರರ್ಥಕ ಕೆಲಸವಾಗುವುದು.

ಪುರಾಣಗಳಲ್ಲಿ ಬರುವ ಹನುಮಂತ ಅಥವಾ ಆಂಜನೇಯನು ವಾನರನಾದರೂ ವಾಲಿ ಸುಗ್ರೀವರಂತಾಗದೆ ಶ್ರೀರಾಮನ ಬಂಟನಾಗಿ, ಸೇವಕನಾಗಿ, ತದನಂತರದಲ್ಲಿ ಶ್ರೀರಾಮನಿಗೆ ಗೌರವ, ಪೂಜೆ ಸಲ್ಲಿಸುವಷ್ಟೇ ಪ್ರಧಾನವಾಗಿ ಆಂಜನೇಯನಿಗೂ ಸಲ್ಲಿಸಬೇಕೆಂಬ ಮಟ್ಟಕ್ಕೆ ಬೆಳೆಯುತ್ತಾನೆ. ಇವನ ಬಗ್ಗೆಯೂ ಪುರಾಣಗಳು ಸಮೃದ್ಧವಾಗಿವೆ. ಹುಟ್ಟಿನ ಬಗೆಗೂ ಚಿತ್ರವಿಚಿತ್ರವಾದ ಕತೆಗಳುಂಟು. ಅದೇನೇ ಇರಲಿ, ಆಂಜನೇಯ ವಿವಾಹ ರಹಿತನು, ಅತ್ಯಂತ ಬಲಶಾಲಿ. 'ಹನುಮನಿಲ್ಲದ ರಾಮ, ರಾಮನಿಲ್ಲದ ಹನುಮ' ಇಲ್ಲವೇ ಇಲ್ಲ ಎಂಬಂತೆ ಕತೆ ಬೆಳೆದಿರುವುದರಿಂದ ಯಾವ ಕಲೆಗಾರನೇ ಆಗಲಿ, ಶ್ರೀರಾಮನ ಕತೆಗೆ ಸಂಬಂಧಿಸಿದಂತೆ ಚಿತ್ರ ಅಥವಾ ಶಿಲ್ಪ ಮಾಡುವಾಗ ಇವರೀರ್ವರು ಬರುವಂತೆ ಸಂಯೋಜಿಸಬೇಕಾದದ್ದು ಅವಶ್ಯಕ.

ಆ ಕಾರಣದಿಂದ ರಾಮ, ಲಕ್ಷ್ಮಣ, ಸೀತೆ ಈ ಮೂವರ ಗುಂಪನ್ನು ಮಾಡುವಾಗ ಮಂಡಿಯೂರಿ ಕುಳಿತ ಹನುಮನ ವಿಗ್ರಹ ಇದ್ದೇ ಇರಬೇಕು. ಇಲ್ಲವೆ ಮೆರೆಯುವ ವಿಗ್ರಹವನ್ನು ಮಾಡಬೇಕಾದಾಗ ರಾಮನನ್ನು ಹೊರುವಂತೆ ಹನುಮವಾಹನವನ್ನು ಮಾಡಬೇಕಾಗುತ್ತದೆ. ತಿಳಿಯದ ಗ್ರಾಹಕ ಬಂದರೆ ತಿಳಿಹೇಳಿ ಮಾಡುವುದು ಉತ್ತಮ. ಶ್ರೀರಾಮನ ಸೇವಕನಾದುದರಿಂದ ನಾಯಕನಿಗಿಂತ ತುಸು ಕಡಿಮೆ ಅಳತೆಯಲ್ಲಿ ಮಾಡಬೇಕಾಗುತ್ತದೆ. ಇದು ಆಯಾಯ ಸಂದರ್ಭ, ಸನ್ನಿವೇಶಗಳನ್ನು ಅವಲಂಬಿಸಿ ಮಾಡಬೇಕಾದುದರಿಂದ ಕತೆಯ ಸೂಕ್ಷ್ಮತೆಯನ್ನರಿತು ಮಾಡಬೇಕೆಂಬುದು ವೆಂಕಟಾಚಾರ್ ಅವರ ನಿಲುವಾಗಿತ್ತು.

ಸುಮಾರು ನಾಲ್ಕುವರೆ ಅಡಿ ಎತ್ತರದ ಹನುಮವಾಹನವನ್ನು ಬನ್ನೂರಿನ ರಾಮಮಂದಿರಕ್ಕೆ ಮಾಡಿಕೊಟ್ಟಿದ್ದು, ಅದರಲ್ಲಿ ಆಂಜನೇಯ ಹುಟ್ಟುವಾಗ ಶ್ರೀ ವಿಶ್ವಕರ್ಮನು ಬಂಗಾರದ ಕಟಿಸೂತ್ರ, ಕೌಪೀನ, ಬ್ರಹ್ಮಸೂತ್ರ, ಕುಂಡಲಗಳನ್ನು ದಯಪಾಲಿಸಿದ ಎಂಬ ಕತೆಯಾಧಾರಿತ ಆಂಜನೇಯನನ್ನು ಮಾಡಿದ್ದಾರೆ. ಈ ವಿಗ್ರಹವನ್ನು ಸಹ ಎದೆ, ಕೈ ಕಾಲು, ತಲೆ ಇವುಗಳನ್ನು ಬೇರೆ ಬೇರೆ ರೇಖುಗಳಲ್ಲಿ ಮಾಡಿ ಜೋಡಿಸಿ ಬೆಸುಗೆ ಹಾಕಿ ಪಾಲಿಶ್ ಮಾಡಿರುವುದರಿಂದ ಎಲ್ಲೂ ಅದರ ಹುಳುಕು ಕಾಣದಂತೆ ಹೊಳಪು ಮೂಡಿದೆ. ಬಲ ಮಂಡಿಯು ಮಡಚಿ ನೆಲಕ್ಕೆ ತಾಕುವಂತಿದ್ದರೆ ಎಡ ಮಂಡಿ ಮುಂಚಾಚಿ ಪಾದ ಮಾತ್ರ ನೆಲಕ್ಕೂರಿದೆ. ಹಸ್ತಗಳೆರಡೂ ಮೇಲ್ಮುಖವಾಗಿ ತನ್ನ ನಾಯಕನನ್ನು ಹೊರಲು ಸಿದ್ಧವಾಗಿರುವಂತೆ ಮಾಡಿದ್ದಾರೆ.

ಗಜವಾಹನ

ಗರುಡವಾಹನ, ಹನುಮವಾಹನಗಳಿಗಿಂತ ಉತ್ತಮವಾದ ಕೆಲಸದಿಂದ ಕೂಡಿದುದು ಗಜವಾಹನ. ಪುರಾಣದ ಕಲ್ಪನೆಯ ವಿಶೇಷತೆ ಏನೂ ಇಲ್ಲ ಇದರಲ್ಲಿ . ಆನೆಯ ಮೇಲೆ ಸವಾರಿ ಮಾಡುವುದು ಸಾಮಾನ್ಯ ಜನತೆಗೆ ಸಾಧ್ಯವಿಲ್ಲ ಎಂಬುದಷ್ಟೇ ಸತ್ಯ. ವೆಂಕಟಾಚಾರ್‌ರವರ ಕಲಾಪ್ರೌಢಿಮೆಯನ್ನು ಒರೆಗೆ ಹಚ್ಚುವಂತಿರುವ ಇದರಲ್ಲಿ ಆನೆ, ಮಾವುತ, ಸಿಂಹಾಸನ ಮತ್ತು ಛತ್ರಿ ಇವುಗಳ ಮಿಳಿತವಿದೆ. ಪ್ರತ್ಯೇಕತೆಯಲ್ಲಿಯೇ, ಏಕತೆ ಕಾಣುವಂತೆ ಜೋಡಿಸಿದ್ದಾರೆ.

ಆನೆಯ ಸ್ವರೂಪ ಒಂದೇ ಎಂಬಂತೆ ಕಂಡರೂ ಆನೆಯ ಮುಖ, ಸೊಂಡಿಲು, ಶರೀರ, ಕಾಲುಗಳು, ಬಾಲ ಇವುಗಳನ್ನು ಪ್ರತ್ಯೇಕ ರೇಖುಗಳಿಂದ ಮಾಡಿ ಕೂಡಿಸಿ ಬೆಸುಗೆ ಹಾಕಿದ್ದಾರೆ. ಆನೆಯ ನೈಜತೆ ಶಿಲ್ಪದಲ್ಲಿ ಯಥಾವತ್ತಾಗಿ ಮೂಡಿಬಂದಿದೆ. ಬಹುಶಃ ಮೈಸೂರೇ ತಮ್ಮ ಕಾರ್ಯದ ನೆಲೆಯನ್ನಾಗಿಸಿಕೊಂಡಿದ್ದ ಕಾರಣ ದಸರಾ ವೇಳೆಯಲ್ಲಿ, ಜರತಾರಿ ಬಟ್ಟೆಯನ್ನು, ವಿವಿಧ ಚಿತ್ತಾರಗಳಿಂದ ಮೈದುಂಬಿಸಿಕೊಂಡ ಮುಖ, ಶಿರದ ಅಗ್ರಭಾಗ, ಕಿವಿ, ಕಾಲು, ಕೊಂಬು, ಕೊರಳುಗಳಿಗೆ ವೈವಿಧ್ಯಮಯ ನಕಾಶೆ ಕೆಲಸವುಳ್ಳ ಆಭರಣೋಪಾದಿಯಲ್ಲಿರುವ ಕವಚ, ಕಾಲ್ಬಳೆ, ಕೊರಳ ಸರಗಳಿಂದ ಅಲಂಕರಿಸಿಕೊಂಡು ಬರುತ್ತಿದ್ದ ಅರಮನೆಯ ಆನೆಯನ್ನು ನೋಡಿದುದರ ಪರಿಣಾಮವೇನೊ ! ಅದೇ ಶೈಲಿ, ಅದೇ ದಿರಿಸುಗಳನ್ನು ಮನದಲ್ಲಿರಿಸಿಕೊಂಡು ತಾವು ಮಾಡಿರುವ ಗಜವಾಹನದಲ್ಲಿಯೂ ಅಳವಡಿಸಿದ್ದಾರೆ. ಉಬ್ಬುಗೆತ್ತನೆ, ಇಳಿಗೆತ್ತನೆ ಮೂಲಕ ರೇಖಿನ ಕೆಲಸ ಬಹು ನಾಜೂಕಾಗಿ ರೂಪಿತವಾಗಿದೆ.

ಮಾವುತನ ವಿಗ್ರಹವನ್ನು ಸಹ ಪ್ರತ್ಯೇಕವಾಗಿ ಮಾಡಿ ಆನೆಯ ಮೇಲೆ ಕೂರಿಸಿದ್ದಾರೆ. ಮಾವುತನ ಹಿಂಬದಿಯಲ್ಲಿರುವ ಸಿಂಹಾಸನವನ್ನೂ ಸಹ ಪ್ರತ್ಯೇಕ ಮಾಡಿರುವುದೇ ಆಗಿದೆ. ಸಿಂಹಾಸನದ ತಳಪೀಠ ಅಂದರೇ ವಿಗ್ರಹ ಕುಳ್ಳಿರಿಸಬಹುದಾದ ತಳಪೆಟ್ಟಿಗೆಯನ್ನು ಮರದಲ್ಲಿ ಮಾಡಿ, ಅದರ ಮೇಲೆಲ್ಲಾ ರೇಖಿನ ಕೆಲಸ ಮಾಡಿದ್ದಾರೆ. ಪ್ರತ್ಯೇಕವಾಗಿ ಎತ್ತಿ ಇಡಲು ಅನುಕೂಲವಾಗುವಂತೆ ಬಳೆಗಳನ್ನು(Ring) ಸಹ ಅಳವಡಿಸಿ ಸಿಂಹಾಸನದ ಇಕ್ಕೆಲಗಳಲ್ಲಿ ಜಾಲಂಧ್ರದಂತೆ ಚಿತ್ರ ಬಿಡಿಸಿದ್ದಾರೆ. ಹಿಂಬದಿಯ ಪ್ರಭಾವಳಿಯಲ್ಲಿ ಗಂಡಭೇರುಂಡದ ನಕಾಶೆ ಮಾಡಿದ್ದಾರೆ. ಇವುಗಳೆಲ್ಲದರ ಮೇಲೆ ಸುಮಾರು ಒಂದುವರೆ ಅಡಿ ಎತ್ತರದಲ್ಲಿ ಛತ್ರಿಯನ್ನು ರೇಖಿನಿಂದ ಮಾಡಿ ಸಿಂಹಾಸನ ಹಿಂಬದಿಯಲ್ಲಿ ಸಿಕ್ಕಿಸುವಂತೆ ಮಾಡುವ ಮೂಲಕ ಉತ್ಸವಮೂರ್ತಿಗೆ ಛತ್ರಿಯ ಆಸರೆ ದೊರೆಯುವಂತೆ ಮಾಡಿದ್ದಾರೆ. ಈ ಎಲ್ಲಾ ಭಾರವನ್ನು ಹೊರುವ ಆನೆಯ ತಳಭಾಗದ ಕಾಲುಗಳು ಇರುವೆಡೆಯಲ್ಲಿ ಮರದ ತುಂಡಿನ ಆಧಾರ (support) ಕೊಡುವ ಮೂಲಕ ಗಜವಾಹನ ಎಷ್ಟು ವರ್ಷ ಕಳೆದರೂ ಗಟ್ಟಿಯಾಗಿ ನಿಲ್ಲಲು ಸಹಕಾರಿಯಾಗಿದೆ.

ಇಷ್ಟೊಂದು ಚಿತ್ತಾರ ಬಿಡಿಸಿರುವ ನಿಮಗೆ ಇದಕ್ಕೆ ತಕ್ಕ ಬೆಲೆ ಬಂದೀತೆ ಎಂದು ವೆಂಕಟಾಚಾರ್ ಅವರನ್ನು ಕೇಳಿದರೆ ನೋಡಿ ಹಣಕ್ಕೆ ತಕ್ಕ ಕೆಲಸ ಮಾಡಿದರೆ ಅದು ಕಲೆಯಾಗುವುದಿಲ್ಲ, ಕೂಲಿಯಾಗುತ್ತದೆ. ನಾನು ಕಲಾಕಾರನೇ ಹೊರತು ಕೂಲಿಕಾರನಲ್ಲ ಎಂಬುದು ಅವರ ದೃಢ ಮಾತಾಗಿತ್ತು.

ಬೆಳ್ಳಿದಂಡ

ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಸಂದರ್ಭದಲ್ಲಿ ಬಳಸುವುದಕ್ಕಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಂದು ಬೆಳ್ಳಿದಂಡವನ್ನು ಮಾಡಿಕೊಟ್ಟಿದ್ದಾರೆ. ದಂಡ ಎಂದರೆ ಮರದ ಕೋಲು ಎಂಬರ್ಥ ಬರುವುದಾದರೂ, ಕೋಲಿನಂತೆ ಮಾಡಿರುವ ಈ ಬೆಳ್ಳಿದಂಡ ಸುಮಾರು ಆರು ಅಡಿ ಎತ್ತರವಿದ್ದು ಲಕ್ಷ್ಮಿ, ಸರಸ್ವತಿ, ಗಣಪತಿಯನ್ನು ನಕಾಶೆಗೊಳಿಸಿ ಚಿನ್ನದ ಮೆರುಗನ್ನು ಮಾಡಿದ್ದಾರೆ. ದಂಡದುದ್ದಕ್ಕೂ ಬಳ್ಳಿ, ಪ್ರಾಣಿ, ಪಕ್ಷಿಗಳ ಚಿತ್ತಾರವನ್ನು ಬಿಡಿಸಿದ್ದು ಅಲ್ಲಲ್ಲಿ ದುಂಡನೆಯ ಬಳೆಗಳೋಪಾದಿಯಲ್ಲಿ, ದಂಡದ ಮಧ್ಯೆ ಮತ್ತು ತುದಿಯಲ್ಲಿ ಕುಂಭದಂತೆ ಮಾಡಿ ಕಲಾತ್ಮಕಗೊಳಿಸಿದ್ದಾರೆ. ಬೆಳ್ಳಿ ಇತರ ಲೋಹಗಳಿಗಿಂತ ಮೆದು ಲೋಹವಾದ್ದರಿಂದ ಚಿತ್ತಾರ ಬಿಡಿಸುವುದಕ್ಕೆ ಶ್ರಮವೆನಿಸುವುದಿಲ್ಲವೆನ್ನುತ್ತಿದ್ದರು. ಆದರೆ ಕುಸುರಿ ಕೆಲಸ ಮಾಡುವ ಗುಣಧರ್ಮ ಶಿಲ್ಪಿಗೆ ಇರಬೇಕಾದುದು ಅವಶ್ಯಕ. ಅದು ವೆಂಕಟಾಚಾರ್ ಅವರಿಗೆ ರಕ್ತಗತವಾಗಿ ಬಂದಿತ್ತು. ಇಂತಹ ದಂಡವನ್ನು ವಿವಿಧ ದೇವಾಲಯಗಳಿಗೆ ಉತ್ಸವಮೂರ್ತಿ ಮೆರವಣಿಗೆ ಹೊರಡುವ ಸಂದರ್ಭದಲ್ಲಿ ಭಕ್ತಾದಿಗಳು ಹಿಡಿದುಕೊಂಡು ಹೋಗಲು ಮಾಡಿಕೊಟ್ಟಿದ್ದಾರೆ.

ಸಿಂಹಾಸನ

ವೆಂಕಟಾಚಾರ್ ಮಾನವರಿಗೆ ಮಾಡಿಕೊಟ್ಟ ಸಿಂಹಾಸನಕ್ಕಿಂತ ದೇವರಿಗೆ ಮಾಡಿದ ಸಿಂಹಾಸನಗಳೇ ಅಧಿಕ. ಪ್ರತಿ ವಿಗ್ರಹಕ್ಕೊಂದು ಆಸನ ಅವಶ್ಯವಾಗಿ ಬೇಕು. ಆಸನಕ್ಕಿಂತ ಸಿಂಹಾಸನ ಉನ್ನತವಾಗಿರುತ್ತದೆ. ಸಿಂಹದ ತಲೆ ಮತ್ತು ಕಾಲುಗಳ ಮಾದರಿಯಲ್ಲೇ ರೂಪಿಸಬೇಕು. ಪ್ರಭಾವಳಿಯ ಮೇಲೆ ಛತ್ರಿ ಸಹ ಇರಬೇಕು, ದೇವರ ಸಿಂಹಾಸನಗಳನ್ನು ಎರಕದಿಂದಲೂ, ಮಾನವರಿಗೆ ಅರ್ಥಾತ್ ಯಾವುದಾದರೂ ಮಠದ ಗುರುಗಳಿಗೆ ಮಾಡುವಲ್ಲಿ ರೇಖಿನ ಕೆಲಸವೇ ಅಧಿಕವಾಗಿರುತ್ತದೆ. ಛತ್ರಿ ಮಾಡುವಾಗ ಹಳೇ ಮೈಸೂರಿನ ಶೈಲಿಯಾದ ಅಂದರೆ, ಅರೆವೃತ್ತಾಕಾರವಾಗಿರುವ ಕಮಾನಿನಂತಿರದೆ ಉತ್ತರ ಕನ್ನಡ ಭಾಗದ ಛತ್ರಿಗಳು ತಟ್ಟೆಯಾಕಾರದಲ್ಲಿ, ೩ ತಟ್ಟೆಯಿಂದ ಕೂಡಿರುತ್ತವೆ. ಒಂದೊಂದಕ್ಕೂ ಅಗಲ ಕಡಿಮೆ ಆಗುತ್ತಾ ಹೋಗುತ್ತದೆ. ಈ ತೆರನಾದ ಸಿಂಹಾಸನವನ್ನು ಉತ್ತರ ಕನ್ನಡ ಜಿಲ್ಲೆಗೆ ಮಾಡಿಕೊಟ್ಟಿದ್ದಾರೆ.

ಕೊಲ್ಲೂರು ಮೂಕಾಂಬಿಕೆ



ಕೊಲ್ಲೂರ ಮೂಕಾಂಬಿಕೆ

ಸುಮಾರು ಮೂರು ಅಡಿ ಎತ್ತರದ, ಇನ್ನೂರ ಎಪ್ಪತ್ತೈದು ಕೆ.ಜಿ. ಲೋಹದಿಂದ ಮಾಡಿದ ಎರಕದ ಶಿಲ್ಪ ಕೊಲ್ಲೂರು ಮೂಕಾಂಬಿಕೆ; ವೆಂಕಟಾಚಾರ್ ಸಾಯುವ ಮುನ್ನಾದಿನಗಳಲ್ಲಿ ರೂಪುಗೊಂಡ ಶಿಲ್ಪ. ಒಂಧೇ ಎರಕದಲ್ಲಿ ಮಾಡಿರುವ ಈ ವಿಗ್ರಹ ನಾಲ್ಕು ಕೈಗಳನ್ನು ಹೊಂದಿದ್ದು ಎಡಬಲ ಹಸ್ತಗಳಲ್ಲಿ ಶಂಖ, ಚಕ್ರವು; ಇನ್ನೆರಡು ಕೈಗಳು ಅಭಯ ಮತ್ತು ವರದ ಹಸ್ತವನ್ನು ಹೊಂದಿವೆ. ಎರಡು ಮಂಡಿಗಳು ಮಡಚಿ ಕುಳಿತಿರುವ ಆಸನದಲ್ಲಿ ಎಡ, ಬಲ ಪಾದಗಳು ಸಹಜವಾಗಿಯೇ ವಿರುದ್ಧ ದಿಕ್ಕಿನಲ್ಲಿವೆ. ಅದರ ಮುಂದೆಯೇ ಕಚ್ಚೆಯುಡಿಗೆಯ ನಿರಿಗೆಗಳು ಕಮಲ ಪೀಠದ ಮುಂದೆ ಪಸರಿಸಿವೆ.

ಕೊಲ್ಲೂರು ಮೂಕಾಂಬಿಕೆಯ ಕಿರೀಟದ ಅಗ್ರಭಾಗ ಕಳಸದೋಪಾದಿಯಲ್ಲಿದ್ದು ಕರ್ಣಗಳ ಹಿಂಬದಿಯಿಂದ ಬಂದ ಆಭರಣವು ಭುಜದ ಮೇಲಿಂದ ಇಳಿಬಿದ್ದು ಶಂಖ, ಚಕ್ರಗಳನ್ನು ಹಿಡಿದಿರುವ ಎಡ ಬಲ ಹಸ್ತಗಳನ್ನು ಸ್ಪರ್ಶಿಸುತ್ತವೆ. ಕೊರಳಾಭರಣ, ಭುಜಕೀರ್ತಿ, ಸ್ತನಕಟ್ಟು ಕೈಕಾಲುಗಳ ಆಭರಣ, ಸೊಂಟದ ಡಾಬು ಕುಸುರಿ ಕೆಲಸದಿಂದ ಕಂಗೊಳಿಸುತ್ತವೆ.



ಪೂಜಾವಿಗ್ರಹವಾದುದರಿಂದ ಒಂದೇ ಎರಕದಲ್ಲಿ ವಿಗ್ರಹ ಮಾಡಿ, ವೈಜಯಂತಿ ಮಾಲೆ, ಪೀಠಗಳನ್ನು ಮಾತ್ರ ಬೇರೆ ಬೇರೆ ಮಾಡಿ ಬೆಸೆದಿದ್ದಾರೆ. ಸುಮಾರು ೧೨೫ ಕೆ.ಜಿ. ಹಿತ್ತಾಳೆಯಿಂದ ಮಾಡಿರುವ ತಳಪೀಠ ಅತಿ ಹೆಚ್ಚಿನ ಚಿತ್ತಾರಗಳಿಲ್ಲದ ಚೌಕಾಕಾರವಾದ ಪೀಠವಾಗಿದೆ. ಶಕ್ತಿಯ ವಾಹನವಾದ ಸಿಂಹವನ್ನು ಪೀಠದ ಮುಂದೆ ಸಾಂಕೇತಿಕವಾಗಿ ಮಾಡಿದ್ದಾರೆ. ಒಂದು ವರ್ಷಕ್ಕೂ ಮಿಗಿಲಾಗಿ ಕೆಲಸವನ್ನು ಮಾಡಿದ ಈ ಶಿಲ್ಪವೇ ವೆಂಕಟಾಚಾರ್ ಅವರ ಲೋಹ ಶಿಲ್ಪಗಳಲ್ಲೆಲ್ಲಾ ಕೊನೆಯದು.

ಚಿನ್ನದ ಲೇಪನ

ವೆಂಕಟಾಚಾರ್ ಅವರು ಸಹಜವಾಗಿ ಮಾತನಾಡುತ್ತಾ, ತಾಮ್ರದ ತಗಡಿಗೆ ಚಿನ್ನದ ಲೇಪನ ಮಾಡುವ ವಿಧಾನ ತಿಳಿಸುತ್ತಾ, ನೋಡಿ ಇದರಲ್ಲಿ ಆಕ್ಸಿಡೈಸಿಂಗ್ ಮೆಥಡ್, ಪ್ಲೇಟಿಂಗ್ ಮೆಥಡ್ ಎಂದು ಎರಡು ವಿಧಾನಗಳಿವೆ. ವರ್ತಿ ಅಂಟಿಸುವ ಕ್ರಮ ಅಂದರೆ ಪ್ಲೇಟಿಂಗ್ ಮೆಥಡ್ ಶಾಶ್ವತವಾಗಿರುತ್ತದೆ. ಯಾವಾಗಲೂ ಮಾಸುವುದಿಲ್ಲ. ಅರ್ಥಾತ್ ಹೊಳಪುಗೆಡುವುದಿಲ್ಲ. ಮೈಸೂರಿನ ಸಿಂಹಾಸನ ಮಾಡಿರುವುದು ಸಹ ಇದೇ ಕ್ರಮದಲ್ಲಿ. ಪ್ಲೇಟಿಂಗ್ ಮಾಡಿದ ನಂತರ ಮರದ ಹಲಗೆಯ ಮಟ್ಟ ಬರಲು ಅತ್ರಿ ಹೊಡೆಯುತ್ತಾರಲ್ಲ ಹಾಗೆ ಪ್ಲೇಟಿಂಗ್ ಮೇಲೆ ಅತ್ರಿ ಸಹ ಹೊಡೆಯಬಹುದು. ಈ ರೀತಿ ಮಾಡುವವರು ಅತಿ ವಿರಳವಾಗಿದ್ದಾರೆ. ನನಗಂತೂ ಆ ರಾಸಾಯನಿಕ ದೇಹದ ಮೇಲೆ ಪರಿಣಾಮ ಬೀರುವುದರಿಂದ ಮಾಡುವುದಿಲ್ಲ. ಈಗಿನ ಜನ ಚಿನ್ನದ ನೀರಿನಿಂದ ಅದ್ದಿ ಕೊಡುತ್ತಾರೆ. ಕೆಲವೇ ದಿನಗಳಲ್ಲಿ ಅದು ತನ್ನ ಹೊಳಪನ್ನು ಕಳೆದುಕೊಂಡುಬಿಡುತ್ತದೆ. ಕಷ್ಟಪಡುವ ಮನೊಭಾವನೆ ನಮ್ಮಲ್ಲಿ ಕಡಿಮೆಯಾಗುತ್ತಿದೆ ಎನ್ನುತ್ತಿದ್ದರು.

ಮಾಡಿದ ಶಿಲ್ಪಗಳು

ವೆಂಕಟಾಚಾರ್ ಅವರು ಮಾಡಿರುವ ಉತ್ಸವಮೂರ್ತಿಗಳು ಮತ್ತು ವಾಹನಗಳು ಅಧಿಕ ಸಂಖ್ಯೆಯಲ್ಲಿವೆ. ಕೆಲವನ್ನು ಮುಖ್ಯವಾಗಿ ಹೇಳುವುದಾದರೆ, ಬನ್ನೂರಿಗೆ ಶಕ್ತಿ ದೇವತೆಯಾದ ಚಾಮುಂಡೇಶ್ವರಿ ಉತ್ಸವಮೂರ್ತಿ ಮತ್ತು ಅಲ್ಲಿನ ರಾಮದೇವಸ್ಥಾನಕ್ಕೆ ೫ ಅಡಿ ಎತ್ತರದ ಗರುಡವಾಹನ ಮತ್ತು ಮೂಲದೇವರಿಗೆ ಬೆಳ್ಳಿಯ ಕವಚಗಳು, ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ ಹಿತ್ತಾಳೆ ತಗಡಿನಿಂದ ಮಾಡಿದ ಹಂಸವಾಹನ, ಮಂಡ್ಯ ಜಿಲ್ಲೆಯ ಸೋಮನಹಳ್ಳಿಗೆ ೨೫ ಕೆ.ಜಿ. ಬೆಳ್ಳಿಯ ಕುದುರೆವಾಹನ, ಅವರ ಸ್ವಂತ ಸ್ಥಳವಾದ ನಾಗಮಂಗಲದ ದಂಡಿಗೆನಹಳ್ಳಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಗಜವಾಹನ, ಇದರಲ್ಲಿ ಮಾವಟಿಗ, ಸಿಂಹಾಸನ ಸಹ ಅಳವಡಿಸಿದ್ದಾರೆ. ಹೆಗ್ಗಡೆದೇವನಕೋಟೆ ಕೆಂಡಗಣ್ಣಸ್ವಾಮಿ ಗದ್ದುಗೆಗೆ ಪಂಚಲೋಹದ ವಿಗ್ರಹ, ಬೆಳ್ಳಿಯ ಪ್ರಭಾವಳಿ; ಮಂಡ್ಯದ ಜನಾರ್ದನಸ್ವಾಮಿ ದೇವಾಲಯಕ್ಕೆ ಹಂಸವಾಹನ, ನಂದಿವಾಹನ, ಸಿಂಹವಾಹನ, ಬೃಂದಾವನ ಮತ್ತು ಉತ್ಸವ ಮೂರ್ತಿಯಾದ ಲಕ್ಷ್ಮಿ ವಿಗ್ರಹ ಮಾಡಿಕೊಟ್ಟಿದ್ದಾರೆ.

ದೇವರು ಚಿನ್ನವನ್ನು ಬಯಸುತ್ತಾನೋ ಇಲ್ಲವೂ ಯಾರೂ ತಿಳಿದಿಲ್ಲ. ಆದರೆ ಆ ದೇವರುಗಳನ್ನು ಪೂಜಿಸುವ ಭಕ್ತಾದಿಗಳು ಮಾತ್ರ ಆ ದೇವನನ್ನು ಅಪ್ಪಟ ಚಿನ್ನದಿಂದಾಗಲಿ ಅಥವಾ ಚಿನ್ನದ ಲೇಪನಗಳಿಂದಾಗಲಿ ವೈಭವೀಕರಿಸುವುದು ನಮ್ಮಲ್ಲಿ ಬಂದಿರುವ ಪದ್ಧತಿಯಾಗಿದೆ. ತತ್ಪರಿಣಾಮವಾಗಿ ಶಿಲ್ಪಿಗಳಿಗೆ ಒಂದು ಅವಕಾಶವಾಗುತ್ತದೆಂಬುದಂತೂ ಒಪ್ಪಲೇಬೇಕಾದ ವಿಷಯ. ಮೇಲುಕೋಟೆಯಲ್ಲಿರುವ ಆರಾಧ್ಯದೈವನಿಗೆ ಚಿನ್ನದ ತೊಟ್ಟಿಲು, ತಾಮ್ರದ ತಗಡಿನ ಪ್ರಭಾವಳಿಗೆ ಚಿನ್ನದ ಲೇಪನ, ಕಳಸೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ ಉತ್ಸವಮೂರ್ತಿಗಳಿಗೆ ಚಿನ್ನದ ಹಾಗೂ ಬೆಳ್ಳಿಯ ಕವಚಗಳು, ಬೆಂಗಳೂರಿನ ಗವಿಗಂಗಾಧರೇಶ್ವರ ದೇವಸ್ಥಾನಕ್ಕೆ ಸುಮಾರು ೨೦ ಕೆ.ಜಿ. ಬೆಳ್ಳಿಯ ಮುಖವಾಡ ಮತ್ತು ನಾಗಾಭರಣ, ನಂಜನಗೂಡಿನ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸುಮಾರು ೧೦ ಕೆ.ಜಿ. ಬೆಳ್ಳಿಯ ಪ್ರಭಾವಳಿ, ಮಹಾರಾಷ್ಟ್ರದ ಪಂಡರಾಪುರಕ್ಕೆ ಅಲ್ಲಿರುವ ವಿಠಲಮೂರ್ತಿಗೆ ೪ ಕೆ.ಜಿ. ಬೆಳ್ಳಿ ಕಿರೀಟ, ಚಿತ್ರದುರ್ಗದ ಕಬೀರ ಮಠಕ್ಕೆ ಸಿಂಹಾಸನ; ಇವೆಲ್ಲಾ ದೇವಾಲಯಕ್ಕೆ ಸಂಬಂಧಿಸಿದ ಲೋಹಶಿಲ್ಪಗಳು.

ವೆಂಕಟಾಚಾರ್ ಅವರ ಪ್ರತಿಭೆಯನ್ನು ಗುರುತಿಸುವುದು ತದ್ರೂಪ ಶಿಲ್ಪಗಳ ಮೂಲಕ. ೯ ಅಡಿ ಎತ್ತರದ ಸರ್.ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಯನ್ನು ಮಂಡ್ಯ, ಪಾಂಡವಪುರ, ಮತ್ತು ಬೆಂಗಳೂರಿಗೆ ಮಾಡಿಕೊಟ್ಟಿದ್ದಾರೆ (ಬೆಂಗಳೂರಿನ ಎಸ್.ಜೆ. ಪಾಲಿಟೆಕ್ನಿಕ್ ಮುಂಬದಿಯಲ್ಲಿ ಪ್ರತಿಷ್ಠಾಪಿಸಿರುವುದನ್ನು ಕಾಣಬಹುದು). ಮತ್ತೊಂದು ದೊಡ್ಡ ಪ್ರಮಾಣದ ರಾಷ್ಟ್ರಕವಿ ಕುವೆಂಪು ಅವರ ೯ ಅಡಿ ಪ್ರತಿಮೆ ಮೈಸೂರು, ಮಂಡ್ಯಗಳಲ್ಲಿ ಕಾಣಬಹುದು. ಪಾಂಡವಪುರದ ಸಹಕಾರಿ ಸಕ್ಕರೆ ಕಾರ್ಖಾನೆಯ ಸ್ಥಾಪಕರಾದ ನೀಲೇಗೌಡರ ೯ ಅಡಿ ಪ್ರತಿಮೆ ಇವರ ಕಲಾಕೌಶಲ್ಯದ ಇನ್ನೊಂದು ಸ್ಮಾರಕವಿಗ್ರಹ. ಇದಲ್ಲದೆ ಬೆಂಗಳೂರಿನ ಕೆಂಪೇಗೌಡ ರಸ್ತೆಗೆ ಹೋಗುವ ಮಾರ್ಗದಲ್ಲಿ ನೃಪತುಂಗ ರಸ್ತೆಗೆ ಸೇರಿದಂತಿರುವ ಸ್ಥಳದಲ್ಲಿ ೯ ಅಡಿಯ ಪೊಲೀಸ್ ಪ್ರತಿಮೆ ಸ್ಥಾಪನೆಯಾಗಿದೆ.

ಇವುಗಳಲ್ಲದೆ ಸುಮಾರು ೩ ಅಡಿಯ ಎದೆಮೊಗದ ಶಿಲ್ಪಗಳಾದ (Bust) ವರ್ಣ ಶಿಲ್ಪಿ ಎಂದೇ ಗುರುತಿಸಲ್ಪಡುವ ಕೆ. ವೆಂಕಟಪ್ಪನವರ ತದ್ರೂಪ ಶಿಲ್ಪ (ಬೆಂಗಳೂರು) ಸರ್ ಎಂ. ವಿಶ್ವೇಶ್ವರಯ್ಯನವರ ಪ್ರತಿಮೆ (ಮಂಡ್ಯ), ಕುವೆಂಪು ಪ್ರತಿಮೆ (ಪಾಂಡವಪುರ) ಮಹಾತ್ಮ ಗಾಂಧೀಜಿಯವರ ಪ್ರತಿಮೆ (ಪಾಂಡವಪುರ) ಹಿಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ ಪ್ರತಿಮೆ (ಪಾಂಡವಪುರ)ಗಳನ್ನು ಮಾಡಿಕೊಟ್ಟಿದ್ದಾರೆ. ಶಿಲ್ಪಕಲಾ ವಲಯದಲ್ಲಿ ವೆಂಕಟಾಚಾರ್ ಅವರನ್ನು ಸದಾ ನೆನಪಿಸಿಕೊಳ್ಳುವಂತಹ ಕೆಲಸಗಳಿವು.

ವೆಂಕಟಾಚಾರ್ ಅವರ ದಾಖಲೆ ಲೋಹ ಕೆಲಸದ ಜೊತೆಗೆ ಅವರ ಕೌಟುಂಬಿಕ ಬದುಕನ್ನು ಸಹ ದಾಖಲಿಸುವಂತಹದ್ದೆ. ಸುಮಾರು ೨೧-೨೨ನೇ ವಯಸ್ಸಿಗೆ ಮದುವೆ ಆಗಿ ಏಳು ಗಂಡು ಐದು ಹೆಣ್ಣು ಒಟ್ಟು ಹನ್ನೆರಡು ಜನ ಮಕ್ಕಳನ್ನು ಪಡೆದ ತುಂಬು ಸಂಸಾರಿ. ಅವರ ಏಳು ಜನ ಗಂಡುಮಕ್ಕಳಲ್ಲಿ ಶೇಷಾಚಾರ್, ವೆಂಕಟಶ್ಯಾಮಾಚಾರ್, ರವಿಕುಮಾರ್, ಸುರೇಶ, ನಾಗರಾಜ ಇವರೈವರು ತಂದೆಯ ಕೆಲಸವನ್ನು ಮುಂದುವರೆಸಿದ್ದಾರೆ. ಅವರು ಜೀವಂತವಾಗಿದ್ದಾಗ ಯಾವುದೇ ಕೆಲಸ ಬರಲಿ ತಮ್ಮ ಮಕ್ಕಳನ್ನು ಜೊತೆಯಲ್ಲಿರಿಸಿಕೊಂಡು ಅವರಿಗೆ ಸರಿಯಾದ ತರಬೇತಿ ನೀಡಿ ಕೆಲಸ ಕಲಿಸಿದ್ದಾರೆ. ಎಲ್ಲರೂ ಒಗ್ಗೂಡಿ ಕೆಲಸ ಮಾಡುತ್ತಾರೆ. ಎಂತಹ ಕಠಿಣ ಕೆಲಸ ಬಂದರೂ ಅನ್ಯರನ್ನು ಆಶ್ರಯಿಸದೇ ಸದೃಢವಾಗಿ ಕೆಲಸ ಮಾಡುವ ಗುಣವನ್ನು ರೂಢಿಸಿಕೊಂಡಿರುವುದರಿಂದ ಲೋಹದ ಕೆಲಸ ಕಷ್ಟವೇ ಅನಿಸುವುದಿಲ್ಲ ಎಂಬ ವಿಶ್ವಾಸದ ನುಡಿ ವೆಂಕಟಾಚಾರ್ ಅವರ ಮಕ್ಕಳದಾಗಿದೆ.

ಪ್ರಶಸ್ತಿ, ಪುರಸ್ಕಾರ ಗೌರವಗಳನ್ನು ಬಯಸದೇ ತಾವಾಯಿತು ತಮ್ಮ ಕೆಲಸವಾಯಿತು ಎಂದು ಭಾವಿಸಿದ್ದ ವೆಂಕಟಾಚಾರ್ ಅವರು ಅವುಗಳ ಬಗ್ಗೆ ಚಿಂತಿಸಲು ಪುರುಸೊತ್ತು ಇಲ್ಲದಂತೆ ಕಾರ್ಯೋನ್ಮುಖವಾಗಿರುತ್ತಿದ್ದರು.

ಸುಮಾರು ೫ ಅಡಿ ಉದ್ದದ ನಂದಿಮೂರ್ತಿ ಉತ್ತಮ ರೇಖಿನ ಕೆಲಸವಾಗಿದ್ದು ಅಪಾರ ಜನಮೆಚ್ಚುಗೆಗೆ ಪಾತ್ರವಾಗಿದ್ದು ೧೯೪೭ರಲ್ಲಿಯೇ ರಾಜ್ಯ ಪ್ರಶಸ್ತಿ ದೊರಕಿಸಿಕೊಟ್ಟಿದೆ. ಪ್ರತಿ ವಿಗ್ರಹ ಮಾಡಿಕೊಟ್ಟಾಗಲೂ ಸನ್ಮಾನಗಳು ಸಂದಿವೆ. ಮುಖ್ಯವಾಗಿ ಕುವೆಂಪು ಪ್ರತಿಮೆ ಮಾಡಿಕೊಟ್ಟುದರ ಅಂಗವಾಗಿ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಪ್ರಶಸ್ತಿ ಪತ್ರ ನೀಡಿ ಗೌರವಿಸಿದೆ. (೧೯೯೬). ಕರ್ನಾಟಕ ಶಿಲ್ಪಕಲಾ ಅಕಾಡೆಮಿ ೨೦೦೧ನೇ ಸಾಲಿನ ಗೌರವ ಪ್ರಶಸ್ತಿ ನೀಡಿ ಗೌರವಿಸಿದೆ. ನಂತರ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ (೨೦೦೨). ತಮ್ಮ ೭೭ನೇ ವಯಸ್ಸಿನಲ್ಲಿಯೂ ಸದೃಢವಾಗಿಯೇ ಕೆಲಸ ಮಾಡಿಕೊಂಡಿದ್ದ ವೆಂಕಟಾಚಾರ್ ೨೦-೧-೨೦೦೨ರಲ್ಲಿ ಕಾಲವಾದರು. ಶಿಲ್ಪಿ ನಮ್ಮೊಡನೆ ಇಲ್ಲದಿರಬಹುದು ಆದರೆ ಅವರು ಮಾಡಿರುವ ಶಿಲ್ಪ ಮಾತ್ರ ಎಲ್ಲರ ಕಣ್ ಮುಂದಿದೆ.

ಸಮಾರೋಪ

ವೆಂಕಟಾಚಾರ್ ಅಥವಾ ಆ ಶಿಲ್ಪ ಪರಂಪರೆಯಿಂದ ಬಂದ ಶಿಲ್ಪಿಗಳ ವೈಶಿಷ್ಟ್ಯವನ್ನು ವೀಕ್ಷಿಸಿದಾಗ ಪೌರಾಣಿಕ ಹಿನ್ನೆಲೆಯಲ್ಲಿ ಮಾಡುವುದೇ ಮುಖ್ಯವಾಗಿರುತ್ತದೆ. ಶಿಲ್ಪಿಯಾದವನು ಏನಾದರೊಂದು ಹೊಸತನ್ನು ಮಾಡಿದನೆಂದರೆ ಅದು ಒಂದು ತೆರನಾದ ಕೆಲಸದಿಂದ ಮತ್ತೊಂದು ತೆರನಾದ ಕೆಲಸಕ್ಕೆ ಮನಸ್ಸು ತೊಡಗಿಸಿಕೊಂಡಂತೆ. ಉದಾಹರಣೆಗೆ ದೇವತಾಮೂರ್ತಿ ಶಿಲ್ಪಗಳನ್ನು ಎರಕದಿಂದ ಮಾಡುತ್ತಿದ್ದವರು ರೇಖಿನ ಕೆಲಸಕ್ಕೆ ತೊಡಗಿಕೊಂಡಂತೆ, ಇಲ್ಲವೇ ರೇಖಿನ ಕೆಲಸವನ್ನೇ ಮಾಡುತ್ತಿದ್ದವರು ಎರಕದ ಕೆಲಸಕ್ಕೂ ಕೈ ಹಾಕಿದಂತೆ. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಸಾಗಿ ತದ್ರೂಪ ಶಿಲ್ಪಗಳನ್ನು ಮಾಡಲಿಕ್ಕೆ ಯತ್ನಿಸುವುದೇ ಆಗಿರುತ್ತದೆ. ಇವುಗಳನ್ನು ಮಾಡುವಾಗ ರಿವಿಟ್ ಅಥವಾ ಬೆಸುಗೆ ವಿಧಾನದಿಂದಲೋ, ಪಾಲಿಷ್ ಹಾಕುವಾಗ ಬೇರೆ ಬೇರೆ ಕ್ರಮ ಅನುಸರಿಸುವುದೋ ಈ ಸಣ್ಣ ಪುಟ್ಟ ವ್ಯತ್ಯಾಸಗಳ ಹೊರತಾಗಿ ಬೇರೇನೂ ಕಾಣಲಾಗುವುದಿಲ್ಲ. ಹಾಗೆಯೇ ಶಿಲ್ಪಗಳನ್ನು ಮಾಡುವಾಗ ಅವರವರ ಕುಟುಂಬದವರು ಅನುಸರಿಸಿಕೊಂಡು ಬಂದ ಹೊಯ್ಸಳ, ಚೋಳ, ಅಥವಾ ಚಾಲುಕ್ಯ ಶೈಲಿಯಲ್ಲಿಯೇ ಮುಂದುವರೆಯುತ್ತಾರೆಯೇ ವಿನಃ ಹೊಯ್ಸಳದಿಂದ ಚೋಳಕ್ಕೆ ಅಥವಾ ಚಾಲುಕ್ಯ, ಪಲ್ಲವ, ಗಾಂಧಾರ ಶೈಲಿಗಳೆಡೆಗೆ ಬದಲಾವಣೆ ಮಾಡಿಕೊಳ್ಳುವತ್ತ ಗಮನ ಹರಿಸುವುದಿಲ್ಲ.

ಈ ರೀತಿಯಾಗುವುದಕ್ಕೆ ಮುಖ್ಯ ಕಾರಣ ಎರಡು. ಅವರ ಬಳಿ ಬರುವ ಗ್ರಾಹಕ ಸಹ ತಾನು ಎಂದೋ ನೋಡಿದ, ಇಲ್ಲವೆ ನಿತ್ಯವೂ ಅವನಿದ್ದ ಪರಿಸರದಲ್ಲಿ ಕಾಣುವ ದೇವತಾ ಮೂರ್ತಿಗಳ ರೂಪದಲ್ಲಿಯೇ ತಾನು ಬಯಸಿದುದೂ ಆಗಬೇಕೆಂದು ಬಯಸುವುದು. ಮತ್ತೊಂದು, ಶಿಲ್ಪಿಯು ಸಹ ಅದಕ್ಕಿಂತ ಹೊರತಾಗಿ ಏನನ್ನೂ ಮಾಡಲು ಬಯಸದೆ ತಾನು ಹಿಂದೆ ಮಾಡಿದ ಶಿಲ್ಪಗಳ ನಕಲು ಪ್ರತಿಗಳನ್ನೇ ಗ್ರಾಹಕನಿಗೆ ತೋರಿಸಿ ಮನವೊಲಿಸುವ ಯತ್ನ ಮಾಡುವುದು.

ಶಿಲ್ಪಿಯ ಜೀವನ ನಿರ್ವಹಣೆಗಾಗಿ ಇದು ಅನಿವಾರ್ಯವೂ ಅಗತ್ಯವೂ ಆದುದರಿಂದ ಹೊಸತನವನ್ನರಸಿಕೊಂಡು ಹೋಗುವ ಯತ್ನವೇ ಇರುವುದಿಲ್ಲವೆಂಬುದು ವಾಸ್ತವ ಸತ್ಯ. ವೆಂಕಟಾಚಾರ್ ಅವರು ಮಾಡಿರುವ ಶಿಲ್ಪಗಳು ಈ ತೆರನಾದ ಕೈಕಸುಬಿನ ವಿಶೇಷತೆಯಾಗಿದ್ದು, ಅವುಗಳನ್ನು ಮಾಡುವಲ್ಲಿ ಅವರಿಗಿದ್ದ ಅಪರಿಮಿತವಾದ ಶ್ರದ್ಧೆ, ತಾಳ್ಮೆ, ಶ್ಲಾಘಿಸುವಂತಹದ್ದು. ಇತರರಿಗಿಂತ ಒಂದು ಹೆಜ್ಜೆ ಮುಂದೆ ಸಾಗಿ ಆಳೆತ್ತರದ ತದ್ರೂಪ ಶಿಲ್ಪ ಮಾಡುವಲ್ಲಿ ಅವರು ಪಟ್ಟ ಶ್ರಮ ಸಾರ್ಥಕವಾದುದಾಗಿದೆ. ಹಾಗೆಯೇ ಅವರ ಮನಸ್ಸು ಸಹ ಕೋಮಲವಾಗಿದ್ದು ತಮ್ಮ ಕೆಲಸದಲ್ಲಿನ ಮರ್ಮಗಳನ್ನು ತಿಳಿಸಿ ಹೇಳುವಲ್ಲಿಯೂ ವಿಶಾಲಗುಣ ವ್ಯಕ್ತವಾಗುತ್ತದೆ. ಇತರರಿಗೆ ಮಾದರಿಯಾಗಿದೆ.




ಶ್ರೀ ಕೆಂಡಗಣ್ಣ ಸ್ವಾಮಿ, ಗದ್ದಿಗೆ, ಹೆಚ್. ಡಿ. ಕೋಟೆ. 2 ಅಡಿ ಪಂಚಲೋಹ





1 ಅಡಿ ಕಂಚಿನ ಟಿಪ್ಪು ಸುಲ್ತಾನ್ ವಿಗ್ರಹ, ಮೈಸೂರು



9 ಅಡಿ ಕುವೆಂಪು ವಿಗ್ರಹ, ಮಂಡ್ಯ ಟೌನ್, ರೈತರ ಸಂಘ



ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿಯೊಡನೆ ವೆಂಕಟಾಚಾರ್

ಚಿತ್ರ-ಶಿಲ್ಪಗಳನ್ನು ಕುರಿತು ಬರೆಯುವವರು ವಿರಳ. ಅದರಲ್ಲೂ ಸ್ವತಃ ಕಲಾವಿದರಾಗಿ ಶಿಲ್ಪಿಯಾಗಿ ಬರೆಯುವವರು ಅತಿ ವಿರಳ. ಶಿಲಾ ಕೆತ್ತನೆಯಷ್ಟೇ ಅನುಭವ ಶಬ್ದ ಸೃಷ್ಟಿಗೂ ಬೇಕು. ಸತತ ಅಧ್ಯಯನದಿಂದ ಮಾತ್ರ ನಿರಂತರದ ಬರವಣಿಗೆ ಸಾಧ್ಯ.

ಕಲಾರಚನೆ-ಬರವಣಿಗೆ ಎರಡನ್ನೂ ಮೈಗೂಡಿಸಿಕೊಂಡಿರುವ ಶಿವಲಿಂಗಪ್ಪನವರು ಉದಯವಾಣಿ ಪತ್ರಿಕೆಯಲ್ಲಿ "ನಮ್ಮ ಕಲಾವಿದರು" ಎಂಬ ಅಂಕಣದಿಂದ ಹಲವಾರು ಚಿತ್ರಕಲಾವಿದರನ್ನು, ಶಿಲ್ಪಿಗಳನ್ನು ಕುರಿತು ಬರೆಯುತ್ತಿದ್ದಾರೆ. ಇದಲ್ಲದೆ ನಾಡಿನ ಪ್ರಮುಖ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭ, ವಿಜಯ ಕರ್ನಾಟಕ, ಸಂಯುಕ್ತ ಕರ್ನಾಟಕ, ಸುಧಾ, ತರಂಗ, ಕರ್ಮವೀರ, ಸೇರಿದಂತೆ ಆಕಾಶವಾಣಿ, ದೂರದರ್ಶನಗಳಲ್ಲಿ ಕಲೆ/ಕಲಾವಿದರನ್ನು ಕುರಿತ ವಿಷಯ ಬರೆದಿದ್ದಾರೆ. ಪ್ರಸ್ತುತ ಪಡಿಸಿದ್ದಾರೆ.

ಇವರು ಬರೆದ ಶಿಲ್ಪಿ ಸಿದ್ಧಾಂತಿ ಶ್ರೀ ಸಿದ್ಧಲಿಂಗಸ್ವಾಮಿಗಳು, ಸಾತ್ವಿಕಶಿಲ್ಪಿ ನಾಗೇಂದ್ರ ಸ್ಥಪತಿ, ಎನ್. ಜಿ. ನೀಲಕಂಠಾಚಾರ್ ಕಲಾಶಿಕ್ಷಕ ಕಾಳಪ್ಪ, ನಿಸರ್ಗ ಕಲಾವಿದ ಹೆಚ್. ಎಸ್. ಇನಾಮತಿ ಅವರುಗಳನ್ನು ಕುರಿತ ಪುಸ್ತಕಗಳನ್ನು ರಾಜ್ಯ ಶಿಲ್ಪಕಲಾ ಮತ್ತು ಲಲಿತಕಲಾ ಅಕಾಡೆಮಿಗಳು ಪ್ರಕಟಿಸಿವೆ.

ಸ್ವತಃ ಕಲಾವಿದರಾಗಿ/ಶಿಲ್ಪಿಯಾಗಿ ಮರಳಚ್ಚಿನ ಶಿಲ್ಪ, ಥರ್ಮಾಕೋಲ್ ಶಿಲ್ಪಗಳನ್ನು ಮಾಡಿ ಪ್ರದರ್ಶಿಸಿದ್ದಾರೆ. ಎಲ್ಲಾ ಕಡೆ ಹೆಚ್ಚಿನ ಪ್ರಶಂಸೆ ದೊರೆತಿದೆ. ಇತ್ತೀಚೆಗೆ ಪೈಪ್‌ಗಳನ್ನೇ ಬಳಸಿ ಶಿಲ್ಪಗಳನ್ನು ಮಾಡಿ ಪ್ರದರ್ಶನ ಮಾಡಿದ್ದಾರೆ. ಸದಾ ಹೊಸತನ್ನು ಮಾಡುವ ಹಂಬಲ ಅವರದು.

ಅಂಚೆ ಮೂಲಕ ಕಲಾ ಶಿಕ್ಷಣ ನೀಡುವ ಸಂಸ್ಥೆಯಾದ ಆಚಾರ್ಯ ಚಿತ್ರಕಲಾ ಭವನದ ಪ್ರಿನ್ಸಿಪಾಲ್ ಆಗಿರುವ ಇವರು ಈ ಹಿಂದೆ ಶಿಲ್ಪಕಲಾ ಅಕಾಡೆಮಿ ಸದಸ್ಯರೂ ಆಗಿದ್ದರು.

ಪೈಲ್ವಾನ್ ವೆಂಕಟಾಚಾರ್‌ರವರ ವ್ಯಕ್ತಿತ್ವ ದರ್ಶನದೊಂದಿಗೆ ಸೂಕ್ಷ್ಮ ವಿಚಾರಗಳನ್ನು ಈ ಪುಸ್ತಕದಲ್ಲಿ ಪರಿಚಯಿಸಿದ್ದಾರೆ.

– ಎನ್. ಬಿ. ಕಾವೇರಪ್ಪ

ಬಿ.ಎ., ಎಲ್‌ಎಲ್.ಬಿ.

ಭರಣಿ ಗ್ಯಾಲರಿ, ಮೈಸೂರು.

ಶಿಲ್ಪಿ ವೆಂಕಟಾಚಾರ್



ಲೇಖಕರ ನುಡಿ

ಸಾವಿರಾರು ವರ್ಷಗಳ ಇತಿಹಾಸವಿರುವ ವಿಗ್ರಹ ತಯಾರಿಕೆಯಲ್ಲಿ ಕಲ್ಲು ಮತ್ತು ಲೋಹಗಳು ಪ್ರಮುಖ ಪಾತ್ರ ವಹಿಸುತ್ತವೆ. ವಂಶಪಾರಂಪರ್ಯವಾಗಿ ನಮ್ಮ ಶಿಲ್ಪಿಗಳು ವಿಗ್ರಹವನ್ನು ಮಾಡುತ್ತಲೇ ಬರುತ್ತಿದ್ದಾರೆ. ಆದರೆ ಶಾಬ್ದಿಕ ರೂಪದಲ್ಲಿ ಬಂದಿರುವ ಕೆಲವೇ ಪುಸ್ತಕಗಳಾದರೂ ಸಾಕಷ್ಟು ಓದುಗನನ್ನು ತಲುಪದೇ ಗ್ರಂಥಸ್ಥವಾಗಿಯೇ ಉಳಿದಿವೆ. ಅದರಲ್ಲೂ ಕನ್ನಡ ಭಾಷೆಯಲ್ಲಂತೂ ಶಿಲ್ಪಿಯ / ಕಲಾವಿದನ ಪರಿಚಯ ಮುದ್ರಣವಾಗಿದೆಯೇ ವಿನಃ ಅವನಲ್ಲಿನ ಕಲೆ ಮತ್ತು ಅನುಸರಿಸುವ, ಅನುಸರಿಸಬೇಕಾದ ವಿಧಿ ವಿಧಾನ, ಆ ಚಿತ್ರ / ಶಿಲ್ಪಗಳ ಅಂತಃಸತ್ವಗಳ ಬಗ್ಗೆ ಎಲ್ಲಿಯೂ ಪ್ರಸ್ತಾಪ ಮಾಡಿ ಬರೆದಂತೆ ಕಾಣುವುದಿಲ್ಲ.

ಈ ವಾಸ್ತವ ಸತ್ಯವನ್ನರಿತೇ ನಾನು ಈ ಹಿಂದೆ ಎನ್.ಜಿ. ನೀಲಕಂಠಾಚಾರ್ ರವರ ಬಗ್ಗೆ ಬರೆದ ಪುಸ್ತಕದಲ್ಲಿ ಲೋಹ ಶಿಲ್ಪದ ತಯಾರಿಕೆ ವಿಧಾನ ಕುರಿತು ಕೆಲವೊಂದು ಅಂಶಗಳನ್ನು ತಿಳಿಸಿದ್ದೆನು. ಪುಟದ ಮಿತಿಯಿಂದಾಗಿ ಹೇಳಲಾರದೆ ಬಿಟ್ಟ ವಿಷಯಗಳನ್ನು ಈ ಪುಸ್ತಕದಲ್ಲಿ ತಿಳಿಸಲು ಪ್ರಯತ್ನಿಸಿದ್ದೇನೆ. ಎರಕ ಹುಯ್ಯುವ ವಿಚಾರವನ್ನು ಕುರಿತಂತೆ ಹಲವಾರು ವಿಷಯಗಳು ಅಡಕವಾಗಿವೆ. ಶಿಲ್ಪಾಭ್ಯಾಸಿಗಳಿಗೆ ಮತ್ತು ತಿಳಿಯಲು ಆಸಕ್ತಿಯುಳ್ಳವರಿಗೆ ಈ ಪುಸ್ತಕ ನೆರವಾಗುತ್ತದೆಂಬುದು ನನ್ನ ಅನಿಸಿಕೆ. ಪುಸ್ತಕ ಬರೆಯಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್ ಅವರುಗಳಿಗೂ, ಮೇಲಾಗಿ ಸಮಿತಿ ಸದಸ್ಯರಿಗೂ ನನ್ನ ಅನಂತ ವಂದನೆಗಳು.

- ಎಲ್. ಶಿವಲಿಂಗಪ್ಪ